6. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ

+ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸತಕ್ಕಂಥ ನಿರ್ಣಯವನ್ನು ನಾನು ಸಮರ್ಥನೆ ಮಾಡುತ್ತೇನೆ. ಇವತ್ತು ಸರ್ಕಾರ ತನ್ನ ಕಾರ್ಯಕ್ರಮಗಳ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದ ಮೂಲಕ ಏನೇನು ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳಲು ಉದ್ದೇಶಿಸಿದೆ ಎಂಬುದನ್ನು ಸವಿಸ್ತಾರವಾಗಿ ರಾಜ್ಯಪಾಲರ ಭಾಷಣದಲ್ಲಿ ತಿಳಿಸಲಾಗಿದೆ. ಈಗ ಬದಲಾದಂತಹ ರಾಜಕೀಯ ಪರಿಸ್ಥಿತಿಯಲ್ಲಿ ಇವತ್ತು ರಾಜ್ಯಪಾಲರ ಭಾಷಣ ನಡೆದಿದೆ. ನಾನು ಎರಡನೆಯ ಬಾರಿ ಇಲ್ಲಿಗೆ ಚುನಾಯಿತನಾಗಿ ಬಂದಿರುವಂಥಾದ್ದು, ಇದನ್ನು ಸಂತೋಷದಿಂದ ತಿಳಿಸಲು ನಾನು ಇಚ್ಛಿಸುತ್ತೇನೆ. ಕಳೆದ 10ನೇ ವಿಧಾನಸಭೆಯ ಅಧಿವೇಶನದಲ್ಲಿ ದುರಾದೃಷ್ಟವಶಾತ್ ಮಾನ್ಯ ರಾಜ್ಯಪಾಲರ ಭಾಷಣವನ್ನು ಕೇಳುವುದಕ್ಕೆ ಆಗಲೇ ಇಲ್ಲ, for obvious reason. ಆದರೆ ಇವತ್ತು ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಅನೇಕ ಹೊಸ ಸದಸ್ಯರು ಈ ಸದನಕ್ಕೆ ಬಂದಿದ್ದಾರೆ. ಇವರು ರಾಜ್ಯಪಾಲರ ಭಾಷಣವನ್ನು ಸಂಪೂರ್ಣವಾಗಿ ಕೇಳತಕ್ಕಂಥ ಅವಕಾಶ ಸಿಕ್ಕಿದ್ದು ನಮ್ಮ ಅದೃಷ್ಟವಾಗಿದೆ. ಕಳೆದ ಐದು ವರ್ಷಗಳಲ್ಲಿ ನಾವು ರಾಜ್ಯಪಾಲರ ಭಾಷಣವನ್ನು ಕೇಳಲೇ ಇಲ್ಲ. ಈ ರಾಜ್ಯಪಾಲರ ಭಾಷಣ ಹೇಗೆ ಇರುತ್ತದೆ ಏನು ಎಂಬುದು ಗೊತ್ತೇ ಇರಲಿಲ್ಲ. ಆದರೆ ಇವತ್ತು ಅದೃಷ್ಟವಶಾತ್ ಸದನದ ಸದಸ್ಯರುಗಳು ರಾಜ್ಯಪಾಲರ ಭಾಷಣವನ್ನು ಸಂಪೂರ್ಣವಾಗಿ ಕೇಳತಕ್ಕಂಥ ಒಂದು ಅವಕಾಶ ನಿರ್ಮಾಣವಾಗಿದೆ. ಇವತ್ತು ಈ ರಾಜ್ಯದಲ್ಲಿ ಸರ್ಕಾರದ ಬಗ್ಗೆ ಜನತೆ ಇಟ್ಟಿರುವಂತಹ ವಿಶ್ವಾಸವೇ ಒಂದು ದಿಕ್ಸೂಚಿ ಎಂದು ನಾನು ಭಾವಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಉಪಾಧ್ಯಕ್ಷರೆ, ಅದು ಬದಲಾದ ರಾಜಕಾರಣ ಅಲ್ಲ, ಅದು ಹಿಂದೆ ಇದ್ದಂತಹ ಮೂರು ನಾಲ್ಕು ಜನ ಸದಸ್ಯರು ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಗಲಾಟೆ ಮಾಡುತ್ತಿದ್ದರು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: I am not going to mention the causes for that. ನಾನು ಏನು ಹೇಳುವುದೇನೆಂದರೆ ಅಂತಹ ಅವಕಾಶ ಸಿಕ್ಕಿರಲಿಲ್ಲ, ಅಂದರೆ XXXX ಅಂತಹ ಅವಕಾಶ ಇವತ್ತು ಸಿಕ್ಕಿದೆ ಎನ್ನುವುದನ್ನು ನಾನು ಹೇಳುತ್ತಿರುವಂಥಾದ್ದು. ಶ್ರೀ ಕೃಷ್ಣ ಪರಮಾತ್ಮನ ಪಾಂಚಜನ್ಯ ಯಾತ್ರೆಯಿಂದ.......

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಜಯಪ್ರಕಾಶ್ ಹೆಗಡೆ: ಇಂಟರ್‌ನಲ್ ಡೆಮಾಕ್ರಸಿ ಇರಲಿಲ್ಲವೆಂದು ಹೇಳುತ್ತಿದ್ದಾರೆ. ಅವರು ಅದನ್ನು ವಿವರಿಸಲಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಅಧ್ಯಕ್ಷರೇ Right to hear the speech made by Governor.

Sri K. Jayaprakash Hegde: Internal democracy, whether it is by the Chair or individual members? It should not go on record.

---

x ಈ ಪದಗಳನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

Sri C. Byre Gowda: It should not go on record because that is a reflection on the proceedings of the House. He cannot use that word. ಇಂಟರ್‌ನಲ್ ಡೆಮಾಕ್ರಸಿ ಈ ಸದನದಲ್ಲಿ ಇರಲಿಲ್ಲವೆಂದು ಹೇಳುವುದಾದರೆ ಇದು ಈ ನಡವಳಿಕೆಗಳ ಮೇಲೆ ಒಂದು ಕೆಟ್ಟ ರಿಮಾರ್ಕ್ ಮಾಡಿದಂತೆ ಆಗುತ್ತದೆ.

It cannot go on record. ತಾವು ಇದರ ಬಗ್ಗೆ ತೀರ್ಪು ಕೊಡಬೇಕಾಗುತ್ತದೆ.

Sri S.P. Muddahanume Gowda: I am not making any remark on the deliberations of the House. What I am mentioning is..... ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಕಳೆದ ಅಧಿವೇಶನದಲ್ಲಿ ನಾವು ರಾಜ್ಯಪಾಲರ ಭಾಷಣವನ್ನು ಕೇಳುವಂತಹ ಅವಕಾಶ ಸಿಕ್ಕಿರಲಿಲ್ಲ. ಈಗ ರಾಜ್ಯಪಾಲರ ಭಾಷಣವನ್ನು ಕೇಳುವಂತಹ ಅವಕಾಶ ನಿರ್ಮಾಣ ಆಗಿದೆ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಇದರಲ್ಲಿ ತಪ್ಪು ಏನಿಲ್ಲ.

ಉಪಾಧ್ಯಕ್ಷರು: ಅಂತಹ ತಪ್ಪು ಏನು ಕಾಣುತ್ತಿದೆ?

(ಗೊಂದಲ)

ಉಪಾಧ್ಯಕ್ಷರು: ಒಬ್ಬೊಬ್ಬರೇ ಮಾತನಾಡಿದರೆ ಗೊತ್ತಾಗುತ್ತದೆ. ಎಲ್ಲರೂ ಒಟ್ಟಿಗೆ ಮಾತನಾಡಿದರೆ ಗೊತ್ತಾಗುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್: ಮಾನ್ಯ ಉಪಾಧ್ಯಕ್ಷರೇ, ತಾವು ಕಡತವನ್ನು ತೆಗೆಸಿ ನೋಡಿ, ಇಂಟರ್‌ನಲ್ ಡೆಮಾಕ್ರಸಿ ರಾಜ್ಯಪಾಲರ ಭಾಷಣವನ್ನು ಕೇಳುವುದಕ್ಕೆ ಈ ಸಾರಿ ಸಿಕ್ಕಿದೆ, ಎಂದು ಅಂದರೆ ಇಲ್ಲಿಯವರೆಗೂ ಈ ಸದನದಲ್ಲಿ ಏನಾಗಿತ್ತು. ದಯವಿಟ್ಟು ಸದನದ ಬಗ್ಗೆ, ಇರತಕ್ಕಂಥ ಸದಸ್ಯರ ಬಗ್ಗೆ ಮತ್ತು ಸದನದಿಂದ ಹೊರಗೆ ಇರತಕ್ಕಂಥ ಸದಸ್ಯರ ಬಗ್ಗೆ ಈ ಒಂದು ಮಾತು ಗೌರವ ತರುವಂಥಾದ್ದು ಅಲ್ಲ. ಅದಕ್ಕೆ ಈ ಸದನದ ಸಂಪೂರ್ಣವಾದ ಘನತೆಯನ್ನು ಎತ್ತಿ ಹಿಡಿಯಬೇಕಾದರೆ ಚುಚ್ಚು ಮಾತಿನಿಂದಾಗಲಿ, ಆಂತರಿಕ ಪ್ರಜಾಸತ್ತೆ ಇದ್ದಿಲ್ಲವೆನ್ನುವಂತಹ ಮಾತನ್ನು ದಯವಿಟ್ಟು ಕಡತದಿಂದ ತಾವು ತೆಗೆದುಹಾಕಬೇಕು. ತಾವು ಕಡತವನ್ನು ನೋಡಿ, ಇದನ್ನು ತೆಗೆದುಹಾಕಿ, ಈ ಸದನದ ಗೌರವಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕೆಂದು ನನ್ನ ವಿನಂತಿ.

ಉಪಾಧ್ಯಕ್ಷರು: ಈಗ ನಾವು ಪ್ರೊಸಿಡಿಂಗ್ಸ್ ತರಿಸಿ ಏನು ಇದೆ ಎಂಬುದನ್ನು ನೋಡಿ ಅಂತಹ ಮಾತು ಇದ್ದರೆ ತೆಗೆದುಹಾಕುತ್ತೇವೆ.

ಶ್ರೀ ಡಿ.ಬಿ. ಸದಾನಂದಗೌಡ: ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಏನಾದರೂ ಹೆಚ್ಚು ಕಡಿಮೆ ಮಾತನಾಡಿಕೊಂಡು ಬಂದಿದ್ದರೆ ಅದನ್ನು ತಾವು ದಯಮಾಡಿ ಕಡತದಿಂದ ತೆಗೆದು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ಈಗ ಈ ಪ್ರೊಸೀಡಿಂಗ್ಸ್ ತರಿಸಿ ನೋಡಿ ಅಂತಹ ಮಾತು ಇದ್ದರೆ ಕಡತದಿಂದ ಅದನ್ನು ನಾವು ತೆಗೆದುಹಾಕುತ್ತೇವೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಮಾನ್ಯ ಉಪಾಧ್ಯಕ್ಷರೆ, ಶ್ರೀ ಕೃಷ್ಣನ ಪಾಂಚಜನ್ಯದ ಕಹಳೆಯ ಕೂಗಿನಿಂದ ಪ್ರಾರಂಭವಾದಂತಹ ಕಾಂಗ್ರೆಸ್‌ನ ಕಾರ್ಯಕ್ರಮಗಳು 1999ರ ಚುನಾವಣೆಯಲ್ಲಿ ಈ ರಾಜ್ಯದ ಜನರು ಸಂಪೂರ್ಣವಾಗಿ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದವನ್ನು ಮಾಡುವುದರ ಮೂಲಕ ಇವತ್ತು ಮಾನ್ಯ ಎಸ್.ಎಂ. ಕೃಷ್ಣರವರ ನೇತೃತ್ವದಲ್ಲಿ ಒಂದು ಉತ್ತಮವಾದಂತಹ ಆಡಳಿತವನ್ನು ಕೊಡತಕ್ಕಂಥ ಸರ್ಕಾರ ಈ ರಾಜ್ಯದಲ್ಲಿ ಸೃಷ್ಟಿಯಾಗಿದೆ. ಜನ ಕಳೆದ ಸರ್ಕಾರದ ಬಗ್ಗೆ ನಿರಾಸೆಯನ್ನು ಹೊಂದಿ ಇವತ್ತು ಬದಲಾವಣೆಯನ್ನು ನಿರೀಕ್ಷೆ ಮಾಡಿ ಕಾಂಗ್ರೆಸ್ ಪಕ್ಷಕ್ಕೆ ಸರ್ಕಾರ ರಚಿಸಲು ಮತವನ್ನು ಕೊಟ್ಟಿದ್ದಾರೆ. ಇದನ್ನು ' ಆ್ಯಂಟಿ ಇನ್‌ಕಂಬೆನ್ಸಿ ' ಎಂದು ಬಹಳ ಜನ ಸ್ನೇಹಿತರುಗಳು ಭಾಷಣ ಮಾಡುತ್ತಾ ಹೇಳಿದರು. ಇದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಕಳೆದ ಸರ್ಕಾರದ ಲೋಪದೋಷಗಳ ವಿರುದ್ಧವಾಗಿ ಜನರು ಮತವನ್ನು ಹಾಕದೇ ತೀರ್ಮಾನ ಮಾಡಿದ್ದರೆ, ಅವರು ಬಿ.ಜೆ.ಪಿ. ಸರ್ಕಾರವನ್ನೂ ಕೂಡ ಅಧಿಕಾರಕ್ಕೆ ತರಬಹುದಾಗಿತ್ತು. ಆದರೆ ಈ ರಾಜ್ಯದಲ್ಲಿ ಮಾನ್ಯ ಎಸ್.ಎಂ. ಕೃಷ್ಣ ರವರ ನೇತೃತ್ವದಲ್ಲಿ ಸರ್ಕಾರ ರಚನೆಯಾಗಬೇಕೆಂಬ ಸ್ಪಷ್ಟವಾದ ಉದ್ದೇಶದಿಂದ ಜನ ಕಾಂಗ್ರೆಸ್ ಪಕ್ಷಕ್ಕೆ ಮತವನ್ನು ಕೊಟ್ಟಿದ್ದಾರೆಯೇ ವಿನಃ ' ಆ್ಯಂಟಿ ಇನ್‌ಕಂಬೆನ್ಸಿ ' ಎಂಬುದನ್ನು ನಾನು ಒಪ್ಪುವುದಿಲ್ಲ. ಇವತ್ತು ರಾಜ್ಯದಲ್ಲಿ ಜನ ಬಹಳ ನಿರೀಕ್ಷೆಯನ್ನು ಇಟ್ಟುಕೊಂಡು ಮಾನ್ಯ ಎಸ್.ಎಂ. ಕೃಷ್ಣರವರ ನೇತೃತ್ವದಲ್ಲಿ ಈ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. ನಾನು ಒಂದು ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ. ಮಾನ್ಯ ಹಿರಿಯ ಸದಸ್ಯರಾದ ಸಿ. ಬೈರೇಗೌಡರು ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಸದನದಲ್ಲಿ ಮಾತನಾಡುತ್ತಾ ಈ ಸಭೆಯಲ್ಲಿ ಮಂಡಿಸಿರುವ ರಾಜ್ಯಪಾಲರ ಭಾಷಣ ಬಹಳ ನೀರಸವಾದಂತಹ ಭಾಷಣ ಎಂಬ ಮಾತನ್ನು ಹೇಳಿದರು. ಅದೇ ಪಕ್ಷಕ್ಕೆ ಸೇರಿದಂತಹ ಇನ್ನೊಬ್ಬ ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀನಿವಾಸ ಗೌಡರವರು ಈ ಸದನದ ಮುಂದಿರುವ ಈ ರಾಜ್ಯಪಾಲರ ಭಾಷಣವನ್ನು ಕಳೆದ ವರ್ಷ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಯಥಾವತ್ತಾಗಿ ನಾವೂ ಕೂಡ ರಾಜ್ಯಪಾಲರಿಂದ ಓದಿಸಿದ್ದೆವು ಎಂಬ ಮಾತನ್ನು ಹೇಳಿದರು. ಇದರಿಂದಾಗಿ ನೀವೂ ಕೂಡ ನೀವು ಅಧಿಕಾರದಲ್ಲಿದ್ದಾಗ ರಾಜ್ಯಪಾಲರಿಂದ ಮಾಡಿಸಿದಂತಹ ಭಾಷಣವೂ ಕೂಡ ನೀರಸವಾಗಿತ್ತು ಎಂದು ಒಪ್ಪಿಕೊಂಡಂತಾಯಿತು. ಇವತ್ತೇನು ಈ ರಾಜ್ಯಪಾಲರ ಭಾಷಣ ಸದನದ ಮುಂದೆ ಇದೆ, ಇದು ಒಂದು ರೀತಿಯಲ್ಲಿ ಎಫ್.ಐ.ಆರ್. ಇದ್ದ ಹಾಗೆ. ಈ ಸರ್ಕಾರದ ಧ್ಯೇಯ ಧೋರಣೆಗಳು ಏನು? ಸರ್ಕಾರದ ಕಾರ್ಯಕ್ರಮಗಳು ಏನು? ಸರ್ಕಾರ ಯಾವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಚಿಂತನೆ ಮಾಡಿದೆ ಎನ್ನುವುದರ ಬಗ್ಗೆ ಕೂಲಂಕಷವಾಗಿ ಅಲ್ಲದಿದ್ದರೂ ಮಾಹಿತಿಯನ್ನು ಕೊಡತಕ್ಕಂತಹ ಭಾಷಣ ಇದಾಗಿದೆ. ಈ ರಾಜ್ಯಪಾಲರ ಭಾಷಣದ ಆಧಾರದ ಮೇಲೆ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅದಕ್ಕೆ ಬಜೆಟ್‌ನಲ್ಲಿ ಹಣವನ್ನು ಒದಗಿಸಿಕೊಂಡು ಅವುಗಳನ್ನು ಕಾರ್ಯಗತಗೊಳಿಸುವ ಚಿಂತನೆ ಮಾಡಿದೆ. ಈ ರಾಜ್ಯಪಾಲರ ಭಾಷಣವನ್ನು ಓದಿದಾಗ ಖಂಡಿತವಾಗಿಯೂ ಕೂಡ ಈ ಹೊಸ ಸರ್ಕಾರದ ಚಿಂತನೆಯ ಬಗ್ಗೆ ನಮಗೆ ಸ್ಪಷ್ಟವಾದ ಅರಿವು ಉಂಟಾಗುತ್ತದೆ. ನಮ್ಮ ಸರ್ಕಾರ ದೂರದೃಷ್ಟಿಯನ್ನಿಟ್ಟುಕೊಂಡು ಒಂದು ಸ್ಪಷ್ಟವಾದ ದಿಕ್ಕಿನಲ್ಲಿ ಈ ರಾಜ್ಯವನ್ನು ಒಯ್ಯಬೇಕೆಂಬ ಸ್ಪಷ್ಟವಾದ ನಿಲುವನ್ನು ತಾಳಿರುವುದನ್ನು ಈ ರಾಜ್ಯಪಾಲರ

ಭಾಷಣದಲ್ಲಿ ನಾವು ನೋಡಬಹುದಾಗಿದೆ. ಈ ರಾಜ್ಯಪಾಲರ ಭಾಷಣದಲ್ಲಿ ಕೃಷಿ, ನೀರಾವರಿ ಮತ್ತು ಮಾಹಿತಿ ತಂತ್ರಜ್ಞಾನ ಇವೆಲ್ಲವುಗಳ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿದೆ. ನಾನು ಇಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಮಾಹಿತಿ ತಂತ್ರಜ್ಞಾನದಲ್ಲಿ ಕರ್ನಾಟಕವು ಇಡೀ ರಾಷ್ಟ್ರದಲ್ಲೇ ಪ್ರಥಮ ಸ್ಥಾನದಲ್ಲಿದೆ. ಮಾಹಿತಿ ತಂತ್ರಜ್ಞಾನದಲ್ಲಿ ಕರ್ನಾಟಕವು ಇಡೀ ರಾಷ್ಟ್ರದಲ್ಲೇ ಮಂಚೂಣಿಯಲ್ಲಿ ಇರತಕ್ಕ ಹಿನ್ನಲೆಯಲ್ಲಿ ನಮ್ಮ ಸರ್ಕಾರವು ಈ ರಾಜ್ಯಕ್ಕೆ ಒಳ್ಳೆಯ ಆಡಳಿತವನ್ನು ಕೊಟ್ಟು ಈ ರಾಜ್ಯವನ್ನು ರಾಷ್ಟ್ರದಲ್ಲಿಯೇ ಒಂದು ಉತ್ತಮ ರಾಜ್ಯವನ್ನಾಗಿ ಮಾಡಿ ಇದರ ಸರ್ವಾಂಗೀಣ ಅಭಿವೃದ್ಧಿಗಾಗಿ ಎಲ್ಲಾ ರೀತಿಯ ಪ್ರಯತ್ನಗಳನ್ನೂ ಮಾಡತಕ್ಕ ಒಂದು ಸ್ಪಷ್ಟವಾದ ಸೂಚನೆ ಇವತ್ತು ಈ ರಾಜ್ಯಪಾಲರ ಭಾಷಣದಲ್ಲಿ ಇದೆ. ಮಾಹಿತಿ ತಂತ್ರಜ್ಞಾನದಲ್ಲಿ ನಮ್ಮ ರಾಜ್ಯ ಸಾಧಿಸಿರತಕ್ಕ ಸಾಧನೆಯಿಂದಲೇ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಪ್ರಾರಂಭವಾಗಿದೆ ಎನ್ನಬಹುದಾಗಿದೆ. ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. II ಈ ರಾಜ್ಯಪಾಲರ ಭಾಷಣದಲ್ಲಿ ನೀರಾವರಿ ಬಗ್ಗೆ ಬಹಳ ಸ್ಪಷ್ಟವಾದಂತಹ ಮಾತನ್ನು ಹೇಳಲಾಗಿದೆ " ಕಾವೇರಿ ಮತ್ತು ಕೃಷ್ಣಾ ನದಿ ಕಣಿವೆ ಪ್ರದೇಶದ ರೈತರ ಹಿತಾಸಕ್ತಿಗಳನ್ನು ನನ್ನ ಸರ್ಕಾರವು ಸಂಪೂರ್ಣವಾಗಿ ರಕ್ಷಿಸುತ್ತದೆ. ನಮ್ಮ ನೆರೆ ಹೊರೆಯ ರಾಜ್ಯಗಳೊಂದಿಗೆ ಇರುವ ಅಂತರರಾಜ್ಯ ಜಲ ವಿವಾದಗಳನ್ನು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಲು ಮಾಡುವ ಎಲ್ಲಾ ಪ್ರಯತ್ನಗಳಿಗೆ ನಾವು ಸಹ ಸಹಕಾರ ನೀಡುತ್ತೇವೆ " ಎಂಬ ಮಾತನ್ನು ಸರ್ಕಾರ ನೀರಾವರಿ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದೆ. ಅಂತರರಾಜ್ಯ ಜಲ ವಿವಾದದ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಇಷ್ಟೇ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇವತ್ತು ಕಾವೇರಿ ಮತ್ತು ಕೃಷ್ಣಾ ನದಿ ಕಣಿವೆ ಪ್ರದೇಶದಲ್ಲಿ ಆಗಬೇಕಾಗಿರತಕ್ಕಂತಹ ಕಾಮಗಾರಿಗಳ ಬಗ್ಗೆ ನಮ್ಮ ಸರ್ಕಾರ ಒಂದು ಹೆಚ್ಚಿನ ರೀತಿಯಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಈಗಾಗಲೇ ಆ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿದೆ. ಮಾನ್ಯ ಬೃಹತ್ ನೀರಾವರಿ ಸಚಿವರ ಬಗ್ಗೆ ಜನ ಇವತ್ತು ಬಹಳಷ್ಟು ಆಶಾಭಾವನೆಯನ್ನು ಇಟ್ಟುಕೊಂಡಿದ್ದಾರೆ. ಬಹಳ ಉತ್ಸಾಹಿಗಳಾದ ಸಚಿವರು ನೀರಾವರಿ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರತಕ್ಕವರು ಎಂದು ಜನ ಮೆಚ್ಚಿಕೊಂಡಿದ್ದಾರೆ. ಈ ಸರ್ಕಾರದಲ್ಲಿ ನೀರಾವರಿ ಇಲಾಖೆಯಲ್ಲಿ ಮಾನ್ಯ ಹೆಚ್.ಕೆ. ಪಾಟೀಲರ ನೇತೃತ್ವದಲ್ಲಿ ಬಹಳ ಉತ್ತಮವಾದಂತಹ ಕೆಲಸಗಳು ಆಗುತ್ತವೆ ಎಂಬ ಭಾವನೆಯನ್ನು ಜನ ಇಟ್ಟುಕೊಂಡಿರುತ್ತಾರೆ. ಮಾನ್ಯ ಎಸ್.ಎಂ. ಕೃಷ್ಣಾರವರು ಮಾನ್ಯ ಹೆಚ್.ಕೆ. ಪಾಟೀಲರನ್ನು ಬೃಹತ್ ನೀರಾವರಿ ಸಚಿವರನ್ನಾಗಿ ಮಾಡುವುದರ ಮೂಲಕ ನೆನಗುದಿಗೆ ಬಿದ್ದಿರುವ ನೀರಾವರಿ ಕಾಮಗಾರಿಗಳ ಚೇತರಿಕೆಗೆ ಕಾರಣರಾಗಿದ್ದಾರೆ. ಕಳೆದ ವಿಧಾನಸಭಾ ಅಧಿವೇಶನದಲ್ಲಿ ನೀರಾವರಿ ಬಗ್ಗೆ ಸಾಕಷ್ಟು ಸಲ ಚರ್ಚೆಯಾಯಿತು. ಕೃಷ್ಣಾ ಮತ್ತು ಕಾವೇರಿ ಬೇಸಿನ್‌ನಲ್ಲಿ ಸಾಕಷ್ಟು ಕೆಲಸಗಳು ಆಗದೇ ಕೇವಲ ಭಾಷಣಗಳ ಮೇಲೆ ನಾವು ಪ್ರಗತಿಯನ್ನು ನೋಡಿದೆವು. ಆದರೆ ಇವತ್ತು ನಿಜವಾದಂತಹ ಪ್ರಗತಿ ಆಗಲೇ ಬೇಕಾಗಿದೆ. ಎರಡು ಸಾವಿರ ಇಸವಿಯೊಳಗಾಗಿ ಈ ಕಾಮಗಾರಿಗಳನ್ನು ಸಂಪೂರ್ಣವಾಗಿ ಮುಗಿಸತಕ್ಕ ಒಂದು ಬದ್ಧತೆಯನ್ನು ಈ ಸರ್ಕಾರ ಹೊಂದಬೇಕಾಗಿದೆ. ಆ ಹಿನ್ನೆಲೆಯಲ್ಲಿ ಮಾನ್ಯ ಹೆಚ್.ಕೆ. ಪಾಟೀಲರ ಮೇಲೆ ಬಹಳ ಹೆಚ್ಚಿನ ಜವಾಬ್ದಾರಿ ಇದೆ. ಅವರ ಮೇಲೆ ಕಾವೇರಿ ಮತ್ತು ಕೃಷ್ಣಾ ಕಣಿವೆ ಪ್ರದೇಶದಲ್ಲಿ ಇರತಕ್ಕ ಜನರು ಸಂಪೂರ್ಣವಾದಂತಹ ಭರವಸೆಯನ್ನು ಮತ್ತು ನಂಬಿಕೆಯನ್ನು

ಇಟ್ಟುಕೊಂಡಿದ್ದಾರೆ. ಈಗಾಗಲೇ ಮಾನ್ಯ ಭಾರೀ ನೀರಾವರಿ ಸಚಿವರು ನಾನು ಕೃಷ್ಣೆಯ ಕಣ್ಣೀರನ್ನು ಒರೆಸುತ್ತೇನೆ ಎಂದೇನು ಹೇಳಿದ್ದಾರೋ ಆ ಮಾತಿನಲ್ಲಿ ನಮಗೆ ಸಂಪೂರ್ಣ ವಿಶ್ವಾಸ ಇದೆ. ಅದೇ ರೀತಿ ಕಾವೇರಿ ಕೂಗಿನ ಜೊತೆಗೆ ಹೇಮಾವತಿಯ ಕೂಗಿನ ಕಡೆಗೂ ಸರ್ಕಾರ ಹೆಚ್ಚಿನ ಗಮನ ಹರಿಸುತ್ತದೆ ಎಂಬ ವಿಶ್ವಾಸವನ್ನು ನಾನು ಇಟ್ಟುಕೊಂಡಿದ್ದೇನೆ. ಕಳೆದ ಅಧಿವೇಶನದಲ್ಲಿ ನಾವು ಅನೇಕ ಸಾರಿ ಹೇಮಾವತಿ ಯೋಜನೆಯ ಕಾಮಗಾರಿಗಳು ಕುಂಠಿತಗೊಂಡಿರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದೆವು. ಹಿಂದಿನ ಸರ್ಕಾರ ಜೂನ್ 1998ಕ್ಕೇ ಕುಣಿಗಲ್ ಕೆರೆಗೆ ನೀರನ್ನು ಕೊಡುತ್ತೇವೆ ಎಂದು ಹೇಳಿತ್ತು. 1998ರ ಜೂನ್ ಮುಗಿದರೂ ನೀರು ಬರಲಿಲ್ಲ. 1998ರ ಡಿಸೆಂಬರ್‌ನಲ್ಲಿ ನೀರನ್ನು ಕೊಡುತ್ತೇವೆ ಎಂದು ನಂತರ ಸರ್ಕಾರ ಹೇಳಿತು. 1998ರ ಡಿಸೆಂಬರ್ ತಿಂಗಳ ಹೊತ್ತಿಗೂ ಹಿಂದಿನ ಸರ್ಕಾರಕ್ಕೆ ನೀರನ್ನು ಕೊಡಲಿಕ್ಕೆ ಆಗಲಿಲ್ಲ. ಕಳೆದ ಅಧಿವೇಶನದಲ್ಲಿ ನಾವು ಕೊನೆಯ ಬಾರಿಗೆ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ 1999ರ ಮಾರ್ಚ್ ತಿಂಗಳಿಗೆ ನಾವು ಖಂಡಿತವಾಗಿಯೂ ಕುಣಿಗಲ್ ಕೆರೆಗೆ ನೀರು ಕೊಡುತ್ತೇವೆ ಎಂಬ ಮಾತನ್ನು ಈ ಸದನದಲ್ಲಿ ಹಿಂದಿನ ಸರ್ಕಾರ ಹೇಳಿತ್ತು. ದುರದೃಷ್ಟವಶಾತ್ 1999ರ ಮಾರ್ಚ್ ತಿಂಗಳಿಗೂ ಕುಣಿಗಲ್ ಕೆರೆಗೆ ನೀರು ಕೊಡುವುದಿರಲಿ, ಈ ದಿಸೆಯಲ್ಲಿ ಶೇಕಡ 10ರಷ್ಟು ಕಾಮಗಾರಿಗಳೂ ಕೂಡ ಆಗಲಿಲ್ಲ. ಕಳೆದ ವರ್ಷ ಹೇಮಾವತಿಗೋಸ್ಕರ ಬಜೆಟ್‌ನಲ್ಲಿ ಇಟ್ಟಿದ್ದ ಹಣ ಕೇವಲ 45 ಕೋಟಿ ರೂಪಾಯಿಗಳಾಗಿತ್ತು. ಆದರೆ ಅದರಲ್ಲಿ ಇವತ್ತು 10-11 ಕೋಟಿ ರೂಪಾಯಿಗಳ ಹಣ ಕೂಡ ಬಿಡುಗಡೆಯಾಗಲಿಲ್ಲ. ಆದರೆ 30 ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್ಸ್ ಇವೆ. ಈ ದಿಸೆಯಲ್ಲಿ ಹಿಂದಿನ ಸರ್ಕಾರ ಕಾರ್ಯಗತವಾಗದ ಸುಳ್ಳು ಭರವಸೆಗಳನ್ನು ಕೊಟ್ಟಿತ್ತು. ತುಮಕೂರಿನ ಜನತೆ, ಅಷ್ಟೇ ಏಕೆ ಇಡೀ ಕರ್ನಾಟಕದ ಜನತೆ ಅದರಲ್ಲೂ ಕಾವೇರಿ ಕಣಿವೆ ಪ್ರದೇಶದಲ್ಲಿ ಬರತಕ್ಕ ಜನರು, ನೀರಾವರಿ ಬಗ್ಗೆ ಬಹಳ ಆಸಕ್ತಿಯನ್ನು, ಆಸೆಯನ್ನು ಇಟ್ಟುಕೊಂಡ ಜನರು ಹಿಂದಿನ ಸರ್ಕಾರದ ವಿರುದ್ಧ ತಿರುಗಿ ಬಿದ್ದು ಅದಕ್ಕೆ ತಕ್ಕ ಪಾಠವನ್ನು ಕಲಿಸಿದ್ದಾರೆ. ಮಾನ್ಯ ಭಾರೀ ನೀರಾವರಿ ಸಚಿವರು ಹೇಮಾವತಿ ಯೋಜನೆ ಸೇರಿದಂತೆ ಕಾವೇರಿ ಬೇಸಿನ್‌ನಲ್ಲಿ ಆಗಬೇಕಾಗಿರತಕ್ಕಂತಹ ಕಾಮಗಾರಿಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಾರೆ ಎಂಬ ಆಶಯವನ್ನು ನಾನು ವ್ಯಕ್ತಪಡಿಸುತ್ತೇನೆ. II ಇನ್ನು ರೇಷ್ಮೆ ಕೃಷಿ ಬಗ್ಗೆ ಹೇಳುವುದಾದರೆ, ಇವತ್ತು ನನ್ನ ಕ್ಷೇತ್ರ, ಮಾನ್ಯ ವೈ.ಕೆ. ರಾಮಯ್ಯನವರ ಕ್ಷೇತ್ರ ಹಾಗೂ ಮಾನ್ಯ ರೇವಣ್ಣನವರ ಕ್ಷೇತ್ರದಲ್ಲಿ ಬಹಳಷ್ಟು ಜನ ರೇಷ್ಮೆಯನ್ನೇ ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ. ನಾವು ಮೈಸೂರು ಬಿತ್ತನೆ ವಲಯದ ಪ್ರದೇಶದಲ್ಲಿ ಬರತಕ್ಕಂತಹ ಶಾಸಕರು. ಈ ಇಡೀ ಸಾಂಪ್ರದಾಯಿಕವಾದಂತಹ ರೇಷ್ಮೆ ಕೃಷಿ ಇವತ್ತು ಕರ್ನಾಟಕದಲ್ಲಿ ಅವಸಾನದ ಅಂಚಿನಲ್ಲಿದೆ ಎಂಬ ಮಾತನ್ನು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಇದಕ್ಕೆ ಯಾರು ಕಾರಣರು ಎಂಬ ಬಗ್ಗೆ ಈಗಾಗಲೇ ಒಂದು ವಾರದ ಹಿಂದೆ ಮಾನ್ಯ ಚೆನ್ನಿಗಪ್ಪನವರು ಭಾಷಣ ಮಾಡುತ್ತಾ ಇದ್ದಂತಹ ಸಂದರ್ಭದಲ್ಲಿ ಮಾನ್ಯ ವೈ.ಕೆ. ರಾಮಯ್ಯನವರು ಪ್ರಸ್ತಾಪ ಮಾಡಿದ್ದಾರೆ. ಕಳೆದ ಬಾರಿ ನಾವು ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರವಿತ್ತು. ಈಗಲೂ ಕೂಡ ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರವೇ ಇದೆ. ಕರ್ನಾಟಕವು ರಾಷ್ಟ್ರದ ರೇಷ್ಮೆ ಕೃಷಿಯಲ್ಲಿ ಶೇಕಡ 60-70 ರಷ್ಟು ಪಾಲನ್ನು ಹೊಂದಿದೆ. ಸುಮಾರು 40 ಲಕ್ಷಕ್ಕೂ ಹೆಚ್ಚು ಕುಟುಂಬಗಳ ಜೀವನಾಧಾರವಾಗಿರತಕ್ಕಂತಹ ಈ

1.10 ಪಿ.ಎಂ.

ರೇಷ್ಮೆ ಕೃಷಿ ಇವತ್ತು ಅವಸಾನದ ಅಂಚಿಗೆ ತಲುಪಿದೆ. ಹಿಂದಿನ ಕೇಂದ್ರ ಸರ್ಕಾರದಲ್ಲಿ ವಾಣಿಜ್ಯ ಮಂತ್ರಿಗಳಾಗಿದ್ದವರು ಮಾಡಿದಂತಹ ತಪ್ಪು ಆಮದು ನೀತಿಯಿಂದಾಗಿ ಇವತ್ತು ಸಾಂಪ್ರದಾಯಿಕ ರೇಷ್ಮೆ ಕೃಷಿ ರಾಜ್ಯದಲ್ಲಿ ಸಂಪೂರ್ಣವಾಗಿ ನಿರ್ನಾಮ ಆಗತಕ್ಕ ಪರಿಸ್ಥಿತಿಗೆ ಬಂದಿದೆ. ಇವತ್ತು 40 ಲಕ್ಷ ಕುಟುಂಬಗಳು ಉದ್ಯೋಗವನ್ನು ಕಳೆದುಕೊಳ್ಳತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಲೂ ಕೂಡ ಕಾಲ ಮಿಂಚಿಲ್ಲ. ವಿರೋಧ ಪಕ್ಷದಲ್ಲಿರುವ ಬಿ.ಜೆ.ಪಿ. ಸದಸ್ಯರೂ ಸೇರಿದಂತೆ ಎಲ್ಲಾ ಹಿರಿಯ ವಿರೋಧ ಪಕ್ಷದ ಮುಖಂಡರುಗಳು ಈ ಸರ್ಕಾರದೊಂದಿಗೆ ಸೇರಿ ಕೇಂದ್ರ ಸರ್ಕಾರ ಈ ಕೆಟ್ಟದಾದ ಆಮದು ನೀತಿಯನ್ನು ವಾಪಸ್ ತೆಗೆದುಕೊಳ್ಳುವಂತೆ ಒಕ್ಕೊರಲಿನಿಂದ ಒತ್ತಡ ತರಬೇಕೆಂದು ಈ ಸದನದ ಮೂಲಕ ಕೋರುತ್ತೇನೆ. ತನ್ಮೂಲಕ ಸಾಂಪ್ರದಾಯಿಕವಾದಂತಹ ರೇಷ್ಮೆ ಕೃಷಿಯನ್ನು ಕರ್ನಾಟಕದಲ್ಲಿ ಉಳಿಸತಕ್ಕ ಕೆಲಸವನ್ನು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಇನ್ನು ಇಲ್ಲಿ ನಾನು ಅನೇಕ ವಿಷಯಗಳನ್ನು ಮಾತನಾಡಬೇಕಾಗಿತ್ತು. ಆದರೆ ಸನ್ಮಾನ್ಯ ಸಭಾಧ್ಯಕ್ಷರು ಹತ್ತು ನಿಮಿಷಗಳ ಕಾಲ ಮಾತ್ರ ನನಗೆ ಅವಕಾಶ ಕೊಟ್ಟಿದ್ದಾರೆ. ಒಂದು ವಿಷಯವನ್ನು ಮಾತ್ರ ನಾನು ಇಲ್ಲಿ ಹೇಳಬೇಕಾಗಿದೆ. ರಾಜ್ಯದಲ್ಲಿ ಸಣ್ಣ ಸಣ್ಣ ಕೆರೆಗಳನ್ನು ಅವಲಂಬಿಸಿ ಇಂದು ಬಹಳಷ್ಟು ರೈತರು ತಮ್ಮ ಬೆಳೆಗಳನ್ನು ಬೆಳೆದುಕೊಳ್ಳುತ್ತಾರೆ. ಸಣ್ಣ ನೀರಾವರಿಗೆ ಹೆಚ್ಚಿನ ಒತ್ತನ್ನು ಇವತ್ತು ಕೊಡಬೇಕಾಗುತ್ತದೆ. ನಮ್ಮ ಸರ್ಕಾರದ ಚಿಂತನೆ ಇದರ ಬಗ್ಗೆ ಜಾಸ್ತಿ ಇದೆ. ಹಿಂದಿನ ಸರ್ಕಾರದಲ್ಲಿ ಮಾನ್ಯ ಬೈರೇಗೌಡರವರು ಕೃಷಿ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ನಾವು ಅನೇಕ ಸಲ ಈ ವಿಷಯವನ್ನು ಪ್ರಸ್ತಾಪಿಸಿದ್ದೆವು. ರಾಜ್ಯದಲ್ಲಿ ಸುಮಾರು 36 ಸಾವಿರ ಕೆರೆಗಳಿವೆ. ಇಷ್ಟು ಕೆರೆಗಳಲ್ಲಿ ಯಾವುದೇ ಕೆರೆಗಳಲ್ಲಿ ಹೂಳೆತ್ತುವ ಕೆಲಸವನ್ನು ಹಿಂದಿನ ಸರ್ಕಾರ ಮಾಡಲಿಲ್ಲ. ಕೋಲಾರದಲ್ಲಿ ಒಂದೆರಡು ಕೆರೆಗಳಲ್ಲಿ ಮಾಡಿದ್ದೇವೆಂದು ಹೇಳಿದಿರಿ.

ಶ್ರೀ ಕೆ. ಶ್ರೀನಿವಾಸಗೌಡ: ಈ ಭಾಷಣದಲ್ಲಿ ಸಣ್ಣ ನೀರಾವರಿ ವಿಷಯವಾಗಿ ಚಕಾರವನ್ನು ಎತ್ತಿಲ್ಲ, ಇದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಬೇಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಮಾನ್ಯ ಶ್ರೀನಿವಾಸಗೌಡರವರೇ ನಾನು ತಮಗೆ ಏನು ಹೇಳುತ್ತೇನೆಂದರೆ, ಈ ರಾಜ್ಯಪಾಲರ ಭಾಷಣ ಏನಿದೆ ಇದು ಒಂದು ರೀತಿಯಲ್ಲಿ xxx ಇದ್ದ ಹಾಗೆ. xxx It is not. xxx It is only xxx we cannot incorporate all programmes of the Government here.

ಉಪಾಧ್ಯಕ್ಷರು: ಮಾನ್ಯ ಮುದ್ದಹನುಮೇಗೌಡರವರೆ, ನೀವು ಮಾತನಾಡುವಂತಹ ಸಂದರ್ಭದಲ್ಲಿ ಸಭಾಧ್ಯಕ್ಷರ ಪೀಠದ ಕಡೆ ನೋಡಿ ಮಾತನಾಡಿ. ಬೇರೆ ಸದಸ್ಯರ ಕಡೆ ನೋಡಿ ಮಾತನಾಡಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಮಾನ್ಯ ಗೌರವಾನ್ವಿತ ಸದಸ್ಯರು ಕೆಲವು ವಿಷಯಗಳನ್ನು ಈ ಭಾಷಣದಲ್ಲಿ ತಿಳಿಸಿಲ್ಲ ಎಂದು ಹೇಳುತ್ತಾರೆ. ಈಗಾಗಲೇ ನಾನು ತಿಳಿಸಿದಂತೆ............

X ಈ ಪದಗಳನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಅಪ್ಪಚ್ಚು ರಂಜನ್: ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣವನ್ನು 20ಎ ಎಂದು ಹೇಳುತ್ತಾರೆ ಇದು ಕಡತದಲ್ಲಿ ಹೋಗಬಾರದು. ಇದು ಅಗೌರವ ತರುವಂಥದ್ದು.

Sri S.P. Muddehanume Gowda: You have not followed my speech. You have not followed what is. xx No, No. It is not correct.

(ಗೊಂದಲ)

ಉಪಾಧ್ಯಕ್ಷರು: ನಾನು ಕಡತವನ್ನು ತರಿಸಿಕೊಂಡು ನೋಡಿ ಅದು ಸರಿಯಿಲ್ಲವೆಂದರೆ ಅದನ್ನು ತೆಗೆಸಿ ಹಾಕುತ್ತೇನೆ.

Sri S.P. Muddehanume Gowda: It is not specifically referred to a xxx I cannot understand, why my friends don't understand it.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕೃಷಿ ಸಚಿವರು): ಮಾನ್ಯ ವಿರೋಧ ಪಕ್ಷದ ಎಲ್ಲಾ ನಾಯಕರು ಕೂಡ ಮಾತನಾಡಬೇಕಾದರೆ ನಮ್ಮ ಚುನಾವಣಾ ಪ್ರಣಾಳಿಕೆಯನ್ನು ಎತ್ತಿ ಹಿಡಿದು ಮಾತನಾಡುತ್ತಿದ್ದಾರೆ. ಚುನಾವಣಾ ಪ್ರಣಾಳಿಕೆಯ ಪ್ರಕಾರವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇಲ್ಲವೆಂದು ಹೇಳತಕ್ಕಂಥಾದ್ದು ನಿಜ. ಆದರೆ ಪ್ರಣಾಳಿಕೆ ಎನ್ನತಕ್ಕಂಥಾದ್ದು ಐದು ವರ್ಷಗಳಿಗೊಮ್ಮೆ ಬರತಕ್ಕಂಥದ್ದು. ಇದು ಕೇವಲ ಪಕ್ಷದ ಪ್ರಣಾಳಿಕೆ, ನಾವು ಇನ್ನು ಐದು ಬಾರಿ ಬಜೆಟ್ ಮತ್ತು ಐದು ಬಾರಿ ರಾಜ್ಯಪಾಲರ ಭಾಷಣವನ್ನು ಮಂಡಿಸಬೇಕಾಗುತ್ತದೆ. ಇಂಥ ಸನ್ನಿವೇಶದಲ್ಲಿ ಯಾವ್ಯಾವ ಕಾರ್ಯಕ್ರಮಗಳನ್ನು ಯಾವ ಯಾವ ವರ್ಷ ಅನುಷ್ಠಾನ ಮಾಡಬೇಕು ಎಂದು ಯೋಚಿಸಿ ರಾಜ್ಯಪಾಲರ ಭಾಷಣದಲ್ಲಿ ಅಂಥ ಅಂಶಗಳನ್ನು ಅಳವಡಿಸಬೇಕಾಗುತ್ತದೆ. ಪ್ರಣಾಳಿಕೆಯಲ್ಲಿ ಹೇಳಿರುವ ಎಲ್ಲವನ್ನೂ ಕೂಡ ಮೊದಲನೇ ರಾಜ್ಯಪಾಲರ ಭಾಷಣದಲ್ಲಿ ಹೇಳುವುದಕ್ಕಾಗುವುದಿಲ್ಲ, ಇದು ಹೇಗೆ ಸಾಧ್ಯ? ತಾವು ಕೂಡ ಸರ್ಕಾರ ನಡೆಸಿರುವಂತಹವರು ತಮಗೆ ಇದು ಗೊತ್ತಾಗಬೇಕು. ಪದೇ ಪದೇ ಈ ವಿಷಯ ಚರ್ಚೆಯಾಗುತ್ತಿರುವುದರಿಂದ ನಾನು ಈ ಮಾತನ್ನು ಹೇಳಬೇಕಾಯಿತು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ರಾಜ್ಯದಲ್ಲಿರುವ 36 ಸಾವಿರ ಕೆರೆಗಳ ನೀರನ್ನು ನಂಬಿಕೊಂಡು ಬದುಕುತ್ತಿರುವ ರೈತರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಈಗಾಗಲೇ ನಾನು ಹೇಳಿದಂತೆ ಮಾನ್ಯ ಬೈರೇಗೌಡರವರು ಆ ಕಡೆ ಇದ್ದಂಥ ಸಂದರ್ಭದಲ್ಲಿ ಇದರ ಬಗ್ಗೆ ಚಿಂತನೆಯಾಯಿತು ಆದರೆ ಕಾರ್ಯಗತವಾಗಲಿಲ್ಲ, ಆದರೆ ಈ ರಾಜ್ಯದ ಜನತೆ ಈಗ ಈ ಸರ್ಕಾರದಿಂದ ಏನು ನಿರೀಕ್ಷೆ ಮಾಡಿದ್ದಾರೆಂದರೆ ಕೆರೆಗಳನ್ನು ನಂಬಿಕೊಂಡು ಬದುಕುತ್ತಿರುವ ರೈತನ ಪರವಾಗಿ ಚಿಂತನೆ ಮಾಡಿ ಕೆರೆಗಳಲ್ಲಿ ತುಂಬಿಕೊಂಡಿರುವ ಹೂಳನ್ನು ಹಂತ ಹಂತವಾಗಿ ಹೂಳೆತ್ತುವ ಕೆಲಸವನ್ನು ಮಾಡಬೇಕಾಗಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ನಾವು ರಾಜ್ಯಪಾಲರ ಭಾಷಣವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಇದು ಒಂದು ರೀತಿಯ ಸರ್ಕಾರದ ಮುನ್ನೋಟ, ಸರ್ಕಾರದ ಚಿಂತನೆ, ಸರ್ಕಾರದ ದೂರದೃಷ್ಟಿ, ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಒಂದು ಸ್ಪಷ್ಟವಾದ ಉತ್ತಮವಾದ ನಿಲುವನ್ನು

---

x ಈ ಪದಗಳನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಈ ರಾಜ್ಯಪಾಲರ ಭಾಷಣದ ಮೂಲಕ ನಾವು ನೋಡಬಹುದಾಗಿದೆ. ಆದ್ದರಿಂದ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ತರತಕ್ಕಂಥ ನಿರ್ಣಯಕ್ಕೆ ನಾನು ಸಂಪೂರ್ಣವಾಗಿ ಬೆಂಬಲಿಸಿ, ನನಗೆ ಇಲ್ಲಿ ಮಾತನಾಡಲು ಅವಕಾಶ ಕಲ್ಪಿಸಿ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎನ್. ಚೆಲುವರಾಯಸ್ವಾಮಿ (ನಾಗಮಂಗಲ): ಮಾನ್ಯ ಉಪಾಧ್ಯಕ್ಷರೆ, ನೂತನ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಿರತಕ್ಕಂಥ ಕೆಲವು ಕಾರ್ಯಕ್ರಮಗಳ ಬಗ್ಗೆ ನೋಡಿದಾಗ ಸಂಪೂರ್ಣವಾಗಿ ಈ ಐದು ವರ್ಷಗಳ ಅವಧಿಯಲ್ಲಿ ಯಶಸ್ಸು ಕಾಣುತ್ತೇವೆ ಎಂದು ಬಹಳ ಆಶಾ ಭಾವನೆಯಿಂದ ಹೇಳುತ್ತೇನೆ. ಕೆಲವು ವಿಚಾರಗಳಲ್ಲಿ ನಿಖರವಾಗಿ ಕೊಟ್ಟಿಲ್ಲ. ಆದರೂ ಸಹ ಇದನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಏಕೆಂದರೆ, ಈ ರಾಜ್ಯವನ್ನು ರಾಮರಾಜ್ಯ ಮಾಡಲಿಕ್ಕೆ ಐದು ವರ್ಷಗಳು ಸಾಕು ಎಂದು ಅನ್ನಿಸುತ್ತದೆ. ಆದರೆ ನಮ್ಮ ಮಾನ್ಯ ಮುದ್ದಹನುಮೇಗೌಡರವರು ಮಾತನಾಡುವ ಸಂದರ್ಭದಲ್ಲಿ ಈ ಭಾಷಣವನ್ನು ಎಫ್.ಐ.ಆರ್. ಎಂದರು, ನಾವು ಎಫ್.ಐ.ಆರ್. ಮೇಲೆಯೇ ಚಾರ್ಜ್ ಷೀಟ್ ಹಾಕಬೇಕಾಗುತ್ತದೆ. ಇದು ಬಿಟ್ಟು ಬೇರೆ ಯಾವುದರ ಮೇಲೆ ನಾವು ಚಾರ್ಜ್ ಷೀಟ್ ಹಾಕುವುದಕ್ಕಾಗುವುದಿಲ್ಲ. ಆದ್ದರಿಂದ ಎಫ್.ಐ.ಆರ್. ಹಾಕಬೇಕಾದಾಗ ನಿಖರವಾದ ಅಂಶಗಳನ್ನು ತಿಳಿಸಬೇಕಾಗುತ್ತದೆ. ಮೊದಲನೆಯದಾಗಿ ವಿಕೇಂದ್ರೀಕೃತ ಸಂಸ್ಥೆಗಳಲ್ಲಿ, ಅಧಿಕಾರಿಗಳಲ್ಲಿ ಅಧಿಕಾರ ವಿಕೇಂದ್ರೀಕರಣವನ್ನು ಪ್ರಜಾಪ್ರಭುತ್ವದ ಸಮಾಜಿಕ ತತ್ವದ ಮೇಲೆ ಹೆಚ್ಚಿನ ರೀತಿಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಈಗಾಗಲೇ ಗ್ರಾಮ ಪಂಚಾಯ್ತಿ ಚುನಾವಣೆ ಹಿಂದೆ ಹೇಗಿತ್ತು ಅದೇ ವ್ಯವಸ್ಥೆಯಲ್ಲಿ ಪುನಃ ಚುನಾವಣೆ ಮಾಡುತ್ತೇವೆ ಎಂದು ಸರ್ಕಾರ ತೀರ್ಮಾನ ತೆಗೆದುಕೊಂಡು ಜನವರಿಯಲ್ಲಿ ಚುನಾವಣೆ ನಡೆಸುತ್ತೇವೆ ಎಂದು ಹೇಳಿದ್ದಾರೆ. ನಾನು ಸ್ಥಳೀಯ ಸಂಸ್ಥೆಗಳಲ್ಲಿ ಐದು ವರ್ಷ ಕೆಲಸ ಮಾಡಿ ಬಂದಿರುತ್ತೇನೆ, ಜಿಲ್ಲಾ ಪಂಚಾಯ್ತಿಯಲ್ಲಿ ಸದಸ್ಯನಾಗಿ, ಉಪಾಧ್ಯಕ್ಷನಾಗಿ ಸೇವೆಯನ್ನು ಸಲ್ಲಿಸಿದ್ದೇನೆ. ಅಲ್ಲಿ ಏನಾಗಿದೆ ಎಂದರೆ ಒಬ್ಬ ಜೂನಿಯರ್ ಇಂಜಿನಿಯರ್ ಏನಾದರೂ ತಪ್ಪು ಮಾಡಿದನೆಂದರೆ ಆತನ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ಅಧಿಕಾರ ಜಿಲ್ಲಾ ಪಂಚಾಯ್ತಿಯ ವ್ಯಾಪ್ತಿಗೆ ಬರುವುದಿಲ್ಲ. ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಸರ್ಕಾರಕ್ಕೆ ಬರೆಯಬೇಕು. ಒಂದು ಪಕ್ಷ ಜಿಲ್ಲಾ ಪಂಚಾಯ್ತಿಯಿಂದ ಆ ಅಧಿಕಾರವನ್ನು ಬದಲಾವಣೆ ಮಾಡಬೇಕು ಎಂದರೆ ಸರ್ಕಾರದಿಂದ, ಮಂತ್ರಿಗಳಿಂದ, ಅಥವಾ ಐ.ಎ.ಎಸ್. ಅಧಿಕಾರಿಗಳಿಂದ ಶಿಫಾರಸ್ಸು ಬರುತ್ತದೆ. ಹೀಗಿರುವಾಗ ಇಂಥ ಅಧಿಕಾರ ವಿಕೇಂದ್ರೀಕರಣದಲ್ಲಿ, ಅಲ್ಲಿರುವ ಸಮಸ್ಯೆಗಳನ್ನು ಅಲ್ಲೇ ಬಗೆಹರಿಸುವುದಕ್ಕೆ ಸಾಧ್ಯವೆ? ಎಂಬ ಅನುಮಾನ ನನಗೆ ಮೂಡಿದೆ. ಏಕೆಂದರೆ, ಹಿಂದೆ ಯಾವುದೋ ಒಂದು ಸನ್ನಿವೇಶದಲ್ಲಿ ಒಬ್ಬ ಗ್ರಾಮ ಸೇವಕನನ್ನು ಬದಲಾವಣೆ ಮಾಡಲು ಅವನು ಮಾಡಿರತಕ್ಕಂಥ ತಪ್ಪಿನ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ಕೊಟ್ಟರೂ ಅವನು ಅಲ್ಲಿಂದ ಬದಲಾವಣೆ ಆಗಲಿಲ್ಲ. ಈಗ ಏನಾಗಿದೆ ಎಂದರೆ, ಪ್ರತಿಯೊಬ್ಬ ಶಾಸಕರು ತಮಗೆ ಪರಿಚಿತರು ಅಥವಾ ಗುರ್ತಿರುವವರು ಎಂದು ಎಲ್ಲರಿಗೂ ಶಿಫಾರಸ್ಸು ಮಾಡುತ್ತಿದ್ದಾರೆ. ಹಿಂದೆ ಈ ರೀತಿ ಇರಲಿಲ್ಲ. ಇದರಿಂದಾಗಿ ಒಬ್ಬ ಡಿ.ಸಿ.ಯ ಕೆಳಗಡೆ ಬರತಕ್ಕಂಥ ವಿಲೇಜ್ ಅಕೌಂಟೆಂಟ್‌ರವರನ್ನು ಒಬ್ಬ ಡಿ.ಸಿ. ಕೂಡ ಅಲ್ಲಾಡಿಸುವುದಕ್ಕೆ ಆಗುವುದಿಲ್ಲ. ಇಂಥ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ನಾವುಗಳು ಇದ್ದೇವೆ.

ಆದ್ದರಿಂದ ಸ್ಥಳೀಯ ಸಂಸ್ಥೆಗಳಿಗೆ ನಿಜವಾದ ಅರ್ಥದಲ್ಲಿ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಆಗಬೇಕಾದರೆ ಸ್ಥಳೀಯ ಸಂಸ್ಥೆಗಳು ಅಲ್ಲಿನ ಸಮಸ್ಯೆಗಳಿಗೆ ತೆಗೆದುಕೊಂಡಿರತಕ್ಕಂಥ ತೀರ್ಮಾನಗಳಿಗೆ ಹೆಚ್ಚು ಒತ್ತನ್ನು ಕೊಟ್ಟಾಗ ಮಾತ್ರ ನಿಜವಾದ ಅಧಿಕಾರ ವಿಕೇಂದ್ರೀಕರಣವಾಗುತ್ತದೆ. II ಇಲ್ಲಿ ಹಲವಾರು ಪ್ರಾದೇಶಿಕ ತಾರತಮ್ಯದ ವಿಚಾರವಾಗಿ ಸಾಕಷ್ಟು ಪ್ರಸ್ತಾಪ ಇದೆ. ದಯಮಾಡಿ ನಾನು ಏನು ಹೇಳುತ್ತೇನೆಂದರೆ, ಈ ಪ್ರಾದೇಶಿಕ ತಾರತಮ್ಯ ಎನ್ನುವುದನ್ನು ಬಿಟ್ಟು ಜಿಲ್ಲಾವಾರು, ತಾಲ್ಲೂಕುವಾರು, ಗಣನೆಗೆ ತೆಗೆದುಕೊಂಡರೆ ಒಳ್ಳೆಯದು. ಈಗ ಉದಾಹರಣೆಗೆ ಮಂಡ್ಯ ಜಿಲ್ಲೆ ಬಹಳ ಸಮೃದ್ಧಿ ಎಂದು ಹೇಳಿದರೆ ಮಂಡ್ಯದಲ್ಲಿ ಬಡವರು ಯಾರು ಇಲ್ಲವೆ? ಹಿಂದುಳಿದಿರತಕ್ಕಂಥ ಪ್ರದೇಶ ಯಾವುದೂ ಇಲ್ಲವೆ? ಏಕೆಂದರೆ, ಮಂಡ್ಯ ಜಿಲ್ಲೆಯಲ್ಲಿ ನಮ್ಮ ನಾಗಮಂಗಲ ತಾಲ್ಲೂಕು ಬಹಳ ಹಿಂದುಳಿದಿದೆ. ನಮಗೆ ಹೇಮಾವತಿ ನೀರನ್ನು ಕೊಡುತ್ತೇವೆಂದು ಹೇಳಿದ್ದರೂ ಕೂಡ ಇದುವರೆವಿಗೂ ಪೂರ್ಣ ಪ್ರಮಾಣದಲ್ಲಿ ನೀರನ್ನು ಕೊಡಲಿಕ್ಕಾಗಿಲ್ಲ. ಕೆ.ಆರ್. ಪೇಟೆಯಲ್ಲೂ ಕೂಡ ಇದೇ ಸ್ಥಿತಿ ಇದೆ. ಶ್ರೀ ರಂಗಪಟ್ಟಣದಲ್ಲಿ ಬಹಳ ಹಳೆಯದಾದ ನಾಲೆ ಇದೆ ಎಂದರೆ ಅಲ್ಲಿ ಅರಿಕೇರಿ ಹೋಬಳಿಯಲ್ಲಿ ಹುರಳಿ ಕಾಳು ಬೆಳೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ, ದಯಮಾಡಿ ಪ್ರಾದೇಶಿಕ ತಾರತಮ್ಯ ಎನ್ನುವುದನ್ನು ಬಿಟ್ಟು, ಜಿಲ್ಲಾವಾರು, ತಾಲ್ಲೂಕು ವಾರು ಗಣನೆಗೆ ತೆಗೆದುಕೊಂಡರೆ ಇದರ ಬಗ್ಗೆ ಸಾಕಷ್ಟು ವ್ಯವಸ್ಥೆಯಾಗಿ ಬಹಳ ಉತ್ತಮವಾದ ಕೆಲಸ ಆಗುತ್ತದೆ ಎಂದು ನನಗಾದರು ಅನ್ನಿಸುತ್ತದೆ. ಮತ್ತೆ II ಕಾವೇರಿ ಟ್ರಿಬ್ಯೂನಲ್ ಬಗ್ಗೆ ಸರ್ಕಾರದ ನಿಲುವು ಏನೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ನಿಖರವಾಗಿ ಹೇಳಬೇಕು. ಹಿಂದೆ ಇದ್ದಂಥ ಎಲ್ಲಾ ಸರ್ಕಾರಗಳು ಕಾವೇರಿ ಟ್ರಿಬ್ಯೂನಲ್‌ನ್ನು ಒಪ್ಪಿಕೊಂಡು ಬಂದಿದೆ. ಈಗ ಚೆನ್ನಾಗಿ ಮಳೆ ಬರುತ್ತಿದೆ, ಇದರಿಂದ ಇವತ್ತಿನದಿವಸ ಹೇಗೋ ಪಾರಾಗುತ್ತಿದ್ದೇವೆ. ಮುಂದೆ ಒಂದು ವೇಳೆ ಮಳೆ ಬರದೇ ಇದ್ದಾಗ ಅಥವಾ ಅನಿವಾರ್ಯ ತೊಂದರೆ ಬಂದಾಗ, ಈಗಿರತಕ್ಕಂಥ ಟ್ರಿಬ್ಯೂನಲ್‌ನ್ನು ಸರ್ಕಾರ ಒಪ್ಪುತ್ತದೆಯೇ? ಅಥವಾ ಇದರ ಬಗ್ಗೆ ಸರ್ಕಾರ ಏನಾದರೂ ಬೇರೆ ಯೋಚನೆ ಮಾಡಿದೆಯೇ? ಈ ವಿಷಯದ ಬಗ್ಗೆ ನಾನು ಒಂದು ಸ್ಪಷ್ಟ ಉತ್ತರವನ್ನು ಸರ್ಕಾರದಿಂದ ಬಯಸುತ್ತೇನೆ. ಇನ್ನು ಕೃಷ್ಣ ಮೇಲ್ದಂಡೆ ಯೋಜನೆಯನ್ನು 2000 ಇಸವಿಯೊಳಗೆ ಮುಗಿಸಬೇಕಾಗಿತ್ತು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಆಡಳಿತ ಪಕ್ಷದಲ್ಲಿದ್ದಂಥ ನಾಯಕರು ಮೊದಲು ವಿರೋಧಪಕ್ಷದಲ್ಲಿದ್ದಾಗ ಪ್ರತಿನಿತ್ಯ ನಮಗೆ ಬಯ್ಯುತ್ತಿದ್ದರು. ಆದರೆ, ಇವತ್ತು ಫ್ರೆಂಟ್ ರೋಲ್‌ನಲ್ಲಿ ಯಾರು ಇಲ್ಲದೇ ಇರುವುದರಿಂದ ನಾವು ಯಾರಿಗಾಗಿ ಈ ಭಾಷಣ ಮಾಡಬೇಕು?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು): ಮಾನ್ಯ ಸದಸ್ಯರು ಏನು ವಿಚಾರ ಪ್ರಸ್ತಾಪ ಮಾಡುತ್ತಿದ್ದಾರೆಂದು ನಾವೆಲ್ಲಾ ಕೇಳುತ್ತಿದ್ದೇವೆ, ಹಾಗೆಯೇ ಅದನ್ನು ಬರೆದು ಕೊಳ್ಳುತ್ತಿದ್ದೇವೆ. ಆದ್ದರಿಂದ ಇದರ ಬಗ್ಗೆ ತಾವು ಚಿಂತನೆ ಮಾಡುವುದು ಬೇಡ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ನಮ್ಮ ಸರ್ಕಾರ ಇದ್ದಾಗ ಕೊನೆಯ ವೇಳೆಯಲ್ಲಿ ಈ ರೀತಿ ಇರುತ್ತಿತ್ತು. ಆದರೆ, ನಿಮ್ಮ ಕಡೆ ಪ್ರಾರಂಭದಲ್ಲಿಯೇ ಈ ರೀತಿ ಇದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ಮಾನ್ಯ ಉಪಾಧ್ಯಕ್ಷರೇ, ಎಲ್ಲಾ ಸಚಿವರು ಇಲ್ಲಿದ್ದಾರೆ. ಆದ್ದರಿಂದ, ಮಾನ್ಯ ಚೆಲುವರಾಯಸ್ವಾಮಿಯವರು ಏನು ಹೇಳಿದರೆಂದು ಯಾರಾದರೂ ಒಬ್ಬರು ಹೇಳಲಿ ನೋಡೋಣ. ಅವರು ಯಾರೂ ಸಹ ಬರೆದುಕೊಳ್ಳುತ್ತಿಲ್ಲ.

ಶ್ರೀ ಆರ್. ರೋಷನ್ ಬೇಗ್: ಅದೆಲ್ಲಾ ಇಲ್ಲಿ ರೆಕಾರ್ಡ್ ಆಗುತ್ತಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ನೀವು ಇಲ್ಲದೇ ಇದ್ದರೂ ರೆಕಾರ್ಡ್ ಆಗುತ್ತದೆ, ನೀವು ಇದ್ದರೂ ಸಹ ರೆಕಾರ್ಡ್ ಆಗುತ್ತದೆ. ಆಡಳಿತ ಪಕ್ಷದ ಕಡೆ ಯಾರು ನೋಟ್ ಮಾಡಿಕೊಳ್ಳುತ್ತಿಲ್ಲ, ಹಾಗೆಯೇ ಯಾರೂ ಸಹ ಕೇಳುತ್ತಿಲ್ಲ. ಈಗ ಮಾನ್ಯ ಚಲುವರಾಯಸ್ವಾಮಿಯವರು ಯಾವ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದರು ಎಂಬುದನ್ನು ಹೇಳಿ ನೋಡೋಣ.

ಉಪಾಧ್ಯಕ್ಷರು: ಈಗ ಅದರ ವಿವರ ಬೇಡ, ಮುಖ್ಯವಾದ ವಿಷಯಗಳನ್ನು ರೆಕಾರ್ಡ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ಈ ರೀತಿಯಾದರೆ ನಾವು ಭಾಷಣ ಮಾಡುವುದರಲ್ಲಿ ಯಾವುದೇ ರೀತಿಯ ಅರ್ಥ ಇಲ್ಲ.

ಉಪಾಧ್ಯಕ್ಷರು: ದಯವಿಟ್ಟು ಎಲ್ಲಾ ಮಂತ್ರಿಗಳು ಸದಸ್ಯರ ಅನಿಸಿಕೆಗಳಿಗೆ ಸ್ಪಂದಿಸಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ನಮ್ಮ ಸರ್ಕಾರ ಇದ್ದಾಗ ಕೊನೆಯ ಹಂತದಲ್ಲಿ ಈ ರೀತಿ ಆಗುತ್ತಿತ್ತು. ಆದರೆ, ತಾವು ಬಂದು ಒಂದು ತಿಂಗಳಲ್ಲಿಯೇ ಈ ರೀತಿ ಆದರೆ ಹೇಗೆ?

ಶ್ರೀ ಎನ್. ಚೆಲುವರಾಯಸ್ವಾಮಿ: ಹಿಂದೆ ಮಾಡಿದ್ದನ್ನೇ ಈಗಲೂ ಮಾಡುತ್ತೇವೆಂದು ತಾವು ಹೇಳುವುದಾದರೆ, ನಿಮ್ಮನ್ನು ಜನ ಏತಕ್ಕಾಗಿ ಆರಿಸಿ ಕಳುಹಿಸಬೇಕಾಗಿತ್ತೋ ಎಂಬುದು ತಿಳಿದಿಲ್ಲ. ಹಿಂದೆ ಮಾಡಿದ ತಪ್ಪನ್ನು ಈಗ ಸರಿಮಾಡಿಕೊಳ್ಳುತ್ತೀರೆಂದು ಜನ ಈಗ ನಿಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿದ್ದಾರೆ. ಈ ಒಂದು ಅವಕಾಶದಲ್ಲಿ ದಯಮಾಡಿ ತಾವೆಲ್ಲರೂ ಸರಿಯಾಗಿ ಇದ್ದರೆ ಒಳ್ಳೆಯದು. ಈ ಹಿಂದೆ ಯಾರು ತಪ್ಪು ಮಾಡಿಲ್ಲವೆಂದು ನಾನು ಹೇಳುವುದಿಲ್ಲ. 53 ವರ್ಷಗಳಲ್ಲಿ 40 ವರ್ಷಗಳಷ್ಟು ಕಾಂಗ್ರೆಸ್ ಸರ್ಕಾರ ನಮ್ಮ ರಾಜ್ಯದಲ್ಲಿ ಆಡಳಿತ ನಡೆಸಿದೆ. ಬೇರೆಯವರು ಕೇವಲ 12 ವರ್ಷಗಳು ಮಾತ್ರ ಆಡಳಿತ ನಡೆಸಿದ್ದಾರೆ. ಇದರಲ್ಲಿ ತಾವು ವಿರೋಧಪಕ್ಷದ ಸ್ಥಾನದಲ್ಲಿದ್ದುಕೊಂಡು ಕೆಲಸ ಮಾಡಿದ್ದೀರಿ. ಈಗ ನೀವು ಹಿಂದೆ ಇದ್ದಂಥವರನ್ನು ನೆನಸಿಕೊಳ್ಳುವುದೇ ಬೇಡ. ಹಿಂದೆ ಇದ್ದಂಥ ಸರ್ಕಾರ ಜನತೆಗೆ ಏನು ಕೊಡಬೇಕಾಗಿತ್ತೋ ಅದನ್ನು ಅವರು ಕೊಟ್ಟಿದ್ದಾರೆ. ಈಗ ನಿಮಗೆ ಸಿಕ್ಕಿರತಕ್ಕಂಥ ಅಧಿಕಾರದ ಅವಧಿಯಲ್ಲಿ ಜನರ ಬಗ್ಗೆ ಯೋಚನೆ ಮಾಡಿ, ಜನರಿಗೆ ಒಳ್ಳೆಯದಾಗತಕ್ಕಂಥ ಕೆಲಸವನ್ನು ಮಾಡಬೇಕೇ ಹೊರತು, ಮುಂದೆ ಇರುವವರು ಮಾಡುತ್ತಾರೆಯೇ ಎಂಬುದನ್ನು ಹಾಗೂ ಹಿಂದೆ ಇದ್ದವರು ಮಾಡಿದ್ದಾರೆಯೇ ಎಂಬುದನ್ನು ದಯಮಾಡಿ ಬಿಡಬೇಕೆಂದು ಈ ಸದನದಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. II ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ ಈಗಾಗಲೇ ಆಂಧ್ರಪ್ರದೇಶ ಮತ್ತು ನಮ್ಮ ರಾಜ್ಯದವರು ಕೆಲವು ಸನ್ನಿವೇಶಗಳನ್ನು ಎದುರು ನೋಡಿದ್ದೇವೆ. ಈ ಕಾರ್ಯಕ್ರಮವನ್ನು

2000 ಇಸವಿಯೊಳಗೆ ಮುಗಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಈ ಯೋಜನೆಯನ್ನು ಇನ್ನು ಎಷ್ಟು ದಿವಸದೊಳಗೆ ಮುಗಿಸುವುದಕ್ಕೆ ಕಾಲಾವಕಾಶ ಬೇಕೆಂಬುದನ್ನು ಹಾಗೂ ಹಣಕಾಸಿನ ವ್ಯವಸ್ಥೆ ಬಗ್ಗೆ ಮತ್ತು ಈ ಕಾರ್ಯವನ್ನು ಪೂರ್ಣ ಮಾಡಲಾಗುತ್ತದೆಯೇ ಅಥವಾ ಇಲ್ಲವೋ ಎಂಬುದರ ಬಗ್ಗೆ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. II ಈ ಆಶ್ರಯ ಯೋಜನೆಯಲ್ಲಿ ಇನ್ನು 5 ವರ್ಷದೊಳಗೆ ಎಲ್ಲರಿಗೂ ಮನೆಯನ್ನು ಕೊಡುತ್ತೇವೆಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದೆ. ಇದಕ್ಕೆ ನಾನು ಬಹಳ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ನಾನು ಈ ಸದನದ ಹೊಸ ಸದಸ್ಯನಾಗಿದ್ದು, ಸ್ಥಳೀಯ ಸಂಸ್ಥೆಗಳನ್ನು ನೋಡಿದ ಮಟ್ಟಿಗೆ, ಆಶ್ರಯ ಯೋಜನೆಯ ಅಡಿಯಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಸರ್ಕಾರದಿಂದ 20 ಸಾವಿರ ರೂಪಾಯಿಗಳನ್ನು ಮಂಜೂರು ಮಾಡುತ್ತಾರೆ. ಆದರೆ ಆ ವರ್ಷದಲ್ಲಿಯೇ ಆ ಹಣ ಬಿಡುಗಡೆ ಆಗುತ್ತಿಲ್ಲ. ನಮ್ಮ ಮಂಡ್ಯ ಜಿಲ್ಲೆಯಲ್ಲಿಯೇ 1998-99, 1999-2000, ಈ ಎರಡು ವರ್ಷಗಳಿಗೆ ಸಂಬಂಧಪಟ್ಟಂತೆ ಈ ಯೋಜನೆಯ ಬಾಕಿ ಹಣ ಸರ್ಕಾರದಿಂದ ಬಿಡುಗಡೆ ಆಗಿಲ್ಲ. ನಾವು ಮುಂದೆ ಇದೇ ರೀತಿ ಹೋದರೆ ಪ್ರತಿ ವರ್ಷ ಈ ಒಂದು ಯೋಜನೆಯಲ್ಲಿ ಮನೆ ಕಟ್ಟಿಕೊಳ್ಳಲು ಕೊಡುವ ಹಣ ಬಿಡುಗಡೆ ಆಗದೆ ಇದ್ದರೆ ಮನೆ ಕಟ್ಟುವುದಕ್ಕೆ ನಾವು ಯಾರಿಗೆ ಎಷ್ಟು ತಲುಪಿಸುತ್ತೇವೆ ಎಂಬುದರಲ್ಲಿ ನನಗೆ ಅನುಮಾನವಾಗಿದೆ. ಆದ್ದರಿಂದ, ಇದರ ಬಗ್ಗೆ ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ, ಒಟ್ಟಾರೆ ಆಶ್ರಯ ಯೋಜನೆಯಲ್ಲಿ ಜಿಲ್ಲಾವಾರು ಎಷ್ಟು ಹಣವನ್ನು ಬಿಡುಗಡೆ ಮಾಡಬೇಕೆಂಬುದನ್ನು ಹಾಗೂ ಮುಂದೆ ಇದನ್ನು ಸರಿಪಡಿಸಿಕೊಂಡು ಪ್ರತಿ ವರ್ಷ ಈ ಯೋಜನೆಯಲ್ಲಿ ಬಿಡುಗಡೆ ಆಗತಕ್ಕಂಥ ಹಣವನ್ನು ಆ ವರ್ಷವೇ ಕೊಡುವುದರ ಬಗ್ಗೆ ತಮ್ಮ ನಿಲುವು ಏನೆಂಬುದನ್ನು ದಯಮಾಡಿ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಕೆಲವು ಇಲಾಖೆಗಳಲ್ಲಿರತಕ್ಕಂಥ ಸಣ್ಣ ಪುಟ್ಟ ಅಧಿಕಾರಿಗಳ ಬದಲಾವಣೆಗೆ ಸಂಬಂಧಪಟ್ಟಂತೆ ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿದ್ದೀರಿ. ಅಧಿಕಾರಿಗಳ ವರ್ಗಾವಣೆಯಲ್ಲಿಯೂ ಕೂಡ ವಿಕೇಂದ್ರೀಕರಣ ಮಾಡಬೇಕಾಗುತ್ತದೆ. ವಿಕೇಂದ್ರೀಕರಣ ಮಾಡದೇ ಇದ್ದರೆ ಏನಾಗುತ್ತದೆಂದರೆ, ಇವತ್ತಿನ ದಿವಸ ಒಬ್ಬ ಎ.ಎಸ್.ಐ ಅಥವಾ ಸಬ್ ಇನ್ಸ್‌ಪೆಕ್ಟರ್‌ರವರನ್ನು ಎಸ್.ಪಿ.ಯವರು ವರ್ಗಾವಣೆ ಮಾಡುವುದಕ್ಕೆ ಅಥವಾ ಅವರ ಹತ್ತಿರ ಇರತಕ್ಕಂಥ ಮಾಹಿತಿ ಪ್ರಕಾರ ಅವರನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಸಂದರ್ಭ ಇದ್ದಾಗ ಮೇಲಿನ ಅಧಿಕಾರಿಗಳ ಮಾತನ್ನು ಯಾರೂ ಕೇಳುವುದಿಲ್ಲ. ಹಾಗೆಯೇ ನನಗೆ ಎಂ.ಎಲ್.ಎ. ಬೆಂಬಲವಿರುವುದರಿಂದ ಏನು ಬೇಕಾದರೂ ಮಾಡಬಹುದು, ಒಂದು ವೇಳೆ ಇಲ್ಲಿಂದ ಬದಲಾವಣೆ ಮಾಡಿದರೆ ಮತ್ತೆ ಅದೇ ಜಾಗಕ್ಕೆ ಬರುತ್ತೇನೆ ಎನ್ನತಕ್ಕಂಥ ಉದ್ಧಟತನ ಅವರಲ್ಲಿರುತ್ತದೆ. ಇದರಿಂದ ಅಲ್ಲಿನ ವ್ಯವಸ್ಥೆ ಸರಿಯಾಗುವುದಿಲ್ಲ. ಎಸ್.ಪಿ. ಯವರಿಗೆ ಬೇರೆಯವರು ದೂರನ್ನು ಕೊಟ್ಟರೂ ಮತ್ತು ಈ ವ್ಯವಸ್ಥೆಯನ್ನು ನೋಡಿದರೂ ಸಹ ಈ ಒಂದು ಪದ್ಧತಿಯಿಂದ ಏನು ಪ್ರಯೋಜನವಾಗುವುದಿಲ್ಲ. ಯಾವುದೇ ಸಂದರ್ಭದಲ್ಲಿ ಬದಲಾವಣೆ ಮಾಡತಕ್ಕಂಥ ಅಧಿಕಾರ ಸರ್ಕಾರದಲ್ಲಿ ಇದ್ದಾಗಲೂ, ಸ್ಥಳೀಯವಾಗಿ ಈತನ ಬಗ್ಗೆ ಡಿ.ಸಿ. ಅಥವಾ ಎಸ್.ಪಿ.ಯವರು ದೂರು ಕೊಟ್ಟು ಈತನನ್ನು ಬದಲಾವಣೆ ಮಾಡಬೇಕೆಂದು ಸರ್ಕಾರಕ್ಕೆ ಪತ್ರ ಬರೆದಂಥ ಸಂದರ್ಭದಲ್ಲಿ ಇದರ ಬಗ್ಗೆ ಏಕಾಏಕಿ

ಕ್ರಮವನ್ನು ತೆಗೆದುಕೊಂಡಾಗ ಮಾತ್ರ ಆ ಅಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಕಾನೂನು ಸುವ್ಯವಸ್ಥೆಯೊಳಗೆ ಸರಿಯಾಗಿ ಕೆಲಸ ಮಾಡುವ ಅವಕಾಶ ಸಿಗುತ್ತದೆ. ಸಣ್ಣ ಪುಟ್ಟ ವರ್ಗಾವಣೆಗೂ ಸಹ ವಿಧಾನಸೌಧದಲ್ಲಿರತಕ್ಕಂಥ ಸರ್ಕಾರದ ಕಾರ್ಯದರ್ಶಿಯವರ ಕಛೇರಿಯಲ್ಲಿ ಆಗತಕ್ಕಂಥಾದ್ದನ್ನು ದಯಮಾಡಿ ಕಡಿಮೆ ಮಾಡಬೇಕೆಂದು ಸರ್ಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. II ಈಗಾಗಲೇ ಸಹಕಾರ ಕ್ಷೇತ್ರದ ಬಗ್ಗೆ ಅನೇಕ ಮಾನ್ಯ ಸದಸ್ಯರು ಸಾಕಷ್ಟು ಚರ್ಚೆ ಮಾಡಿದ್ದಾರೆ. ನನ್ನ ಕ್ಷೇತ್ರದ ನಾಗಮಂಗಲ ತಾಲ್ಲೂಕಿನಲ್ಲಿರುವ ಪಿಎಲ್‌ಡಿ ಬ್ಯಾಂಕಿನಲ್ಲಿ ಚುನಾವಣೆ ಆಗಿ 7 ವರ್ಷವಾಗಿದೆ. ಸೆಪ್ಟೆಂಬರ್ 30ನೇ ತಾರೀಖು ಚುನಾವಣೆ ಮಾಡಬೇಕೆಂದು ಇದ್ದರೂ ಸಹ ಯಾವುದಾದರು ಒಂದು ಸಬೂಬನ್ನು ಹೇಳಿಕೊಂಡು ಚುನಾವಣೆಯನ್ನು ಮಾಡದೇ ಇಲ್ಲಿಯವರೆಗೂ ಹಾಗೆಯೇ ಬಂದಿದ್ದಾರೆ. ಇಂಥ ಕಡೆ ತಾವು ನಿಖರವಾಗಿ ಕ್ರಮ ಕೈಗೊಳ್ಳದೇ ಇದ್ದರೆ ಈ ಕ್ಷೇತ್ರಗಳು ಉಳಿಯುವುದಿಲ್ಲ. ಹಾಗೆಯೇ ಇದರಿಂದ ಜನರಿಗೆ ಬಹಳಷ್ಟು ಅನಾಹುತವಾಗುತ್ತದೆ. ಇಂಥ ಒಂದು ನಿರ್ಧಾರಗಳ ಮೇಲೆ ಸರ್ಕಾರ ಒಂದು ತೀರ್ಮಾನಕ್ಕೆ ಬರದೇ ಇದ್ದರೆ ಜನರಿಗೆ ಬಹಳ ತೊಂದರೆ ಆಗುತ್ತದೆ. ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿಯಲ್ಲಿ ಅಧ್ಯಕ್ಷರಾಗಿರುವ ಮಾನ್ಯ ಎಚ್.ಎ. ಪಾಟೀಲ್‌ರವರು ಏನು ಹೇಳಿದ್ದಾರೆಂದರೆ, ಈ ಉದ್ದಿಮೆಗಳಲ್ಲಿ 80 ಪರ್ಸೆಂಟ್ ಕೆಲಸ ನಿರ್ವಹಿಸುತ್ತಿಲ್ಲವೆಂದು ಹೇಳಿದ್ದಾರೆ. ಇವತ್ತು ಉದ್ದಿಮೆಗಳಿಗೆ ಏನು ಸಾಲವನ್ನು ವಿತರಣೆ ಮಾಡಿದ್ದಾರೆ, ಅದರ ಬಗ್ಗೆ ಸಿ.ಓ.ಡಿ. ತನಿಖೆ ಆಗಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇವತ್ತು ಒಂದೊಂದು ಉದ್ದಿಮೆಗಳಿಗೆ ಸುಮಾರು 20 ರಿಂದ 30 ಲಕ್ಷ ರೂಪಾಯಿಗಳವರೆಗೆ ಸಾಲವನ್ನು ವಿತರಣೆ ಮಾಡಿದ್ದು, ಇದರಲ್ಲಿ 80 ಪರ್ಸೆಂಟ್ ಉದ್ದಿಮೆಗಳು ಸ್ಥಳದಲ್ಲಿಯೇ ಇಲ್ಲ. ಏಜೆಂಟ್‌ದಾರರು ಮತ್ತು ಅಧಿಕಾರಿಗಳು ಹಾಗು ಉದ್ದಿಮೆದಾರರ ಮಧ್ಯೆ ಲಕ್ಷಾಂತರ ರೂಪಾಯಿಗಳನ್ನು ಇವತ್ತಿನದಿವಸ ಲಪಟಾಸಿದ್ದಾರೆ. ಇದರ ಬಗ್ಗೆ ನನ್ನ ಹತ್ತಿರ ಒಂದು ಫೈಲ್ ಇದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಆದ್ದರಿಂದ ಇದರ ಬಗ್ಗೆ ತಕ್ಷಣ ಸಿ.ಓ.ಡಿ. ತನಿಖೆ ಆಗಬೇಕು. ಅಧಿಕಾರಿಗಳ ವರ್ಗಾವಣೆ ಮಾಡುವುದರಿಂದ ಇದಕ್ಕೆ ನ್ಯಾಯ ಸಿಗುವುದಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸಂಪೂರ್ಣವಾದಂಥ ತನಿಖೆ ಮಾಡಿ ನ್ಯಾಯ ದೊರಕಿಸಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯಪಡಿಸುತ್ತೇನೆ. II ಇನ್ನು ರಸ್ತೆ ಕೆಲಸವನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗಾಗಲೇ ರಸ್ತೆ ಕಾಮಗಾರಿಗಳ ಕಾರ್ಯಾಚರಣೆ ನಡೆಯುತ್ತಿದೆ. ಮಾನ್ಯ ರಾಮ್‌ದಾಸ್‌ರವರು ನೆನ್ನೆದಿವಸ ಮಾತನಾಡುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ರಸ್ತೆ ಎಷ್ಟು ದಿವಸ ಇರುತ್ತದೆ ಎಂದು ಕೇಳಿದರು. ಇವತ್ತಿನ ದಿವಸ ಇಂಜಿನಿಯರ್, ಕಂಟ್ರ್ಯಾಕ್ಟ್‌ದಾರರಿಗೆ ಜವಾಬ್ದಾರಿ ಇಲ್ಲದೇ ಹೋದರೆ ಆರು ತಿಂಗಳಲ್ಲಿ ರಸ್ತೆಗಳು ಹಾಳಾಗುತ್ತವೆ. ಪ್ರತಿ ವರ್ಷ ಎಲ್ಲಾ ತಾಲ್ಲೂಕುಗಳಿಗೆ ಇಲಾಖಾವಾರು ಕೊಡಬೇಕಾದ ಹಣವನ್ನು ಸರ್ಕಾರ ಹೇಗಿದ್ದರೂ ಕೊಡುತ್ತಾ ಬರುತ್ತದೆ. ಆದರೆ ತೃಪ್ತಿಕರವಾದ ಕೆಲಸ ಇವತ್ತಿನವರೆಗೂ ನಡೆಯುತ್ತಿಲ್ಲ. ಸರ್ಕಾರ ಕೊಡತಕ್ಕಂಥ ಹಣದಲ್ಲಿ ಅಂಕಿಅಂಶಗಳ ಪ್ರಕಾರ ನೋಡಿದಾಗ ಸುಮಾರು 10 ರಿಂದ 20 ಪರ್ಸೆಂಟ್ ಹಣ ಸಹ ಈ ಕಾಮಗಾರಿ ಕೆಲಸಕ್ಕೆ ಉಪಯೋಗ ಆಗುತ್ತಿಲ್ಲ. ನಾನು ಈ ಸದನಕ್ಕೆ ಹೊಸ ಸದಸ್ಯನಾಗಿದ್ದೇನೆ,

ಇಲ್ಲಿ ಬಹಳ ಅನುಭವ ಹೊಂದಿರತಕ್ಕಂಥ ಹಿರಿಯ ರಾಜಕಾರಣಿಗಳಿದ್ದಾರೆ, ಶೇಕಡ 20 ರಷ್ಟು ಮಾತ್ರ ಹಣ ಕಾಮಗಾರಿಗಳಿಗೆ ನ್ಯಾಯ ಆಗುತ್ತದೆಂದು ಇಲ್ಲಿ ಇರತಕ್ಕಂಥ ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯವಾಗಿದೆ. ಒಂದು ವೇಳೆ ಸುಮಾರು 60 ರಿಂದ 70 ಪರ್ಸೆಂಟ್ ಹಣ ಕಾಮಗಾರಿಗೋಸ್ಕರ ಖರ್ಚಾದರೆ, 5 ಅಥವಾ 10 ವರ್ಷಗಳಲ್ಲಿ ಪ್ರತಿ ಊರಿಗೂ ಕುಡಿಯುವ ನೀರಿನ ವ್ಯವಸ್ಥೆ, ರಸ್ತೆಗೆ ಡಾಂಬರೀಕರಣ ಆಗತಕ್ಕಂಥ ವ್ಯವಸ್ಥೆ ನಮ್ಮ ಕಣ್ಣು ಮುಂದೆ ಇರುತ್ತಿತ್ತು. ನಮಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಇನ್ನು 20 ಪರ್ಸೆಂಟ್ ಹಳ್ಳಿಗಳಿಗೆ ರಸ್ತೆಗಳ ಡಾಂಬರೀಕರಣದ ವ್ಯವಸ್ಥೆ ಇಲ್ಲ. ಇವತ್ತಿನದಿವಸ ಈ ಬಗ್ಗೆ ಯಾರಿಗೂ ಜವಾಬ್ದಾರಿ ಇಲ್ಲದೇ ಹೋದರೆ ಈ ರೀತಿ ಆಗುತ್ತದೆ. ಆದ್ದರಿಂದ ಒಂದು ಕೆಲಸ ಮಾಡಿದ ನಂತರ, ಈ ಕಾಮಗಾರಿ ಕೆಲಸ ಎಷ್ಟು ದಿವಸ ಇರಬೇಕು? ಎಷ್ಟು ದಿವಸಗಳಲ್ಲಿ ಈ ಕೆಲಸ ಡ್ಯಾಮೇಜ್ ಆದರೆ ಇದಕ್ಕೆ ಕಾರಣಕರ್ತರು ಯಾರು ಎಂಬುದರ ಬಗ್ಗೆ ಈ ಸರ್ಕಾರ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸುತ್ತದೆ ಎಂಬ ನಂಬಿಕೆಯನ್ನು ನಾನು ಇಟ್ಟುಕೊಂಡಿದ್ದೇನೆ. II ಇನ್ನು ನನ್ನ ಕ್ಷೇತ್ರದಲ್ಲಿ ಮನೆ ಕೊಡುವ ವಿಚಾರದಲ್ಲಿ ಬಹಳಷ್ಟು ಅವ್ಯವಹಾರ ನಡೆದಿದೆ. ಇದರಲ್ಲಿ ಕೆಲವರಿಗೆ ದನಗಳ ಕೊಟ್ಟಿಗೆ ಕಟ್ಟುವುದಕ್ಕೆ ಮತ್ತು ತೋಟದ ಮನೆ ಕಟ್ಟುವುದಕ್ಕೆ ಈ ಯೋಜನೆಯಲ್ಲಿ ಹಣವನ್ನು ಕೊಟ್ಟಿದ್ದಾರೆ. ಇದನ್ನು ತಪ್ಪಿಸಬೇಕಾದರೆ, ಇವತ್ತಿನದಿವಸ ಶಾಸಕರು ಮತ್ತು ಅಧಿಕಾರಿಗಳು ಇಲ್ಲಿ ಅಧ್ಯಕ್ಷರಾಗಿರುವುದರಿಂದ ನಿಜವಾಗಿ ಮನೆ ಇಲ್ಲದಂಥವರಿಗೆ ಮಾತ್ರ ಮಂಜೂರಾತಿ ಕೊಡಬೇಕೇ ಹೊರತು, ಮನೆ ಇದ್ದವರು ಬಂದಾಗ ಅದನ್ನು ನಿಖರವಾಗಿ ತಡೆ ಹಿಡಿಯತಕ್ಕಂಥ ಒಂದು ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಬಗ್ಗೆ ಸರ್ಕಾರ ನಿರ್ದಿಷ್ಟವಾದ ನಿಲುವನ್ನು ಒಂದು ವೇಳೆ ತೆಗೆದುಕೊಳ್ಳದೇ ಹೋದರೆ ಬಡ ಜನರಿಗೆ ಮತ್ತು ರೈತರಿಗೆ ಮನೆ ಕೊಡಬೇಕೆಂದು ಈ ಯೋಜನೆಯನ್ನು ಜಾರಿಗೆ ತಂದಿರುವುದು ಉಪಯೋಗವಾಗುವುದಿಲ್ಲ ಮತ್ತು ಇದರಿಂದ ಮುಂದೆ ಅನಾಹುತವಾಗುತ್ತದೆ. ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ಬಗ್ಗೆ ಒಟ್ಟಾರೆ ಜನ ಬಹಳ ಆಶೆಯನ್ನು ಇಟ್ಟುಕೊಂಡಿದ್ದಾರೆ, ಶ್ರೀ ಎಸ್.ಎಂ. ಕೃಷ್ಣರವರ ಮಂತ್ರಿಮಂಡಲದಲ್ಲಿ ಅನುಭವಿ ಮಂತ್ರಿಗಳು, ವಿರೋಧ ಪಕ್ಷದಲ್ಲಿ ಹಾಗೂ ಆಡಳಿತ ಪಕ್ಷದಲ್ಲಿ ಕೆಲಸ ಮಾಡಿರತಕ್ಕಂಥ ಸಮರ್ಥ ಮಂತ್ರಿಗಳಿದ್ದಾರೆ. ನಾನು ದಯಮಾಡಿ ಚಿಕ್ಕವನಾಗಿ ಒಂದು ವಿಷಯದ ಬಗ್ಗೆ ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅಧಿಕಾರ ಇದ್ದಾಗ ನಮಗೆ ತಪ್ಪು ಮಾಡಿದ್ದು ಗೊತ್ತಾಗುವುದಿಲ್ಲ, ಅದೇ ಅಧಿಕಾರ ಹೋದಾಗ ನಮಗೆ ಇನ್ನೊಬ್ಬರು ತಪ್ಪು ಮಾಡಿದ್ದು ಗೊತ್ತಾಗುತ್ತದೆ. ಅಧಿಕಾರ ಇದ್ದಾಗ ಹಿಂದೆ ಮಾಡಿರುವ ತಪ್ಪನ್ನು ನಾವು ನೋಡಿಕೊಂಡು ಕೆಲಸವನ್ನು ಮಾಡಿದಾಗ ಮಾತ್ರ, ಜನತೆಗೆ ಬಡವರಿಗೆ ಮತ್ತು ಹಳ್ಳಿಗಳಿಗೆ ಏನಾದರೂ ಸಹಾಯವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಹಿಂದೆ ಯಾರೋ ಒಳ್ಳೆಯದನ್ನು ಮಾಡಿರಲಿ ಅಥವಾ ಕೆಟ್ಟದ್ದನ್ನು ಮಾಡಿರಲಿ ಅವರಿಗೆ ಮಾತ್ರ ಒಳ್ಳೆಯದನ್ನು ಮಾಡಿದ್ದೇನೆಂದು ಅನಿಸುತ್ತದೆ. ಕೆಲವು ಕಾರ್ಯಕ್ರಮಗಳನ್ನು ಹಿಂದೆ ಇದ್ದ ಸರ್ಕಾರ ಮಾಡಿದೆ, ಅದನ್ನು ಅವರು ಮೆಚ್ಚಿಕೊಳ್ಳುತ್ತಾರೆ. ಹಿಂದೆ ನೀವು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಹೇಳಿದಾಗ ನೀವು ಅದನ್ನು ಮಾಡಿದ್ದೀರಾ ಎಂದು ಕೇಳದೆ, ಅದನ್ನು ನಾವು ಸರಿಪಡಿಸಿಕೊಂಡು ಮಾಡುತ್ತೇವೆಂದು ಹೇಳಿ, ಜನ ನಿಮ್ಮ ಮೇಲೆ ಇಟ್ಟಿರುವ ವಿಶ್ವಾಸವನ್ನು, ಪ್ರೀತಿಯನ್ನು ನಿಜ ಮಾಡಬೇಕೆಂದು ನಾನು ನಿಮ್ಮಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಸಭೆಯು ಮುಕ್ತಾಯವಾಗಿ ಮಧ್ಯಾಹ್ನ 2.30 ಗಂಟೆಗೆ ಸೇರುವುದು.

(ಸಭೆಯು ಮಧ್ಯಾಹ್ನ: 1.31ಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ: 2.30 ಗಂಟೆಗೆ ಸೇರಲು ನಿಶ್ಚಯಿಸಿತು)

(ಸಭೆಯು 3-02 ಗಂಟೆಗೆ ಪುನರ್ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

+ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯ ಮೇರೆಗೆ ನಾನು ನನ್ನ ಭಾಷಣವನ್ನು ಪ್ರಾರಂಭಿಸುತ್ತೇನೆ. ಆದರೆ ಸಭೆಯಲ್ಲಿ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇಲ್ಲ. ಆದರೂ ನಾನು ತಮ್ಮನ್ನು ಉದ್ದೇಶಿಸಿ ಮಾತನಾಡಬಯಸುತ್ತೇನೆ.

ಅಧ್ಯಕ್ಷರು: ತಾವುಗಳು ನನ್ನನ್ನು ಉದ್ದೇಶಿಸಿಯೇ ಮಾತನಾಡಿ.......

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಸಭಾಧ್ಯಕ್ಷರೇ, ಕಳೆದ ಸರಕಾರದ ಅಧಿವೇಶನದಲ್ಲಿಯು ಕೂಡ ಬೆಳಿಗ್ಗೆ ಮತ್ತು ಮಧ್ಯಾಹ್ನ ಇದೇ ತರಹದಲ್ಲಿ ಆಡಳಿತಪಕ್ಷದವರ ಗೈರುಹಾಜರಿಯು ಆಗುತ್ತಾ ಇತ್ತು. ಅದನ್ನು ಪ್ರತಿಭಟಿಸಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಕಾಗೋಡು ತಿಮ್ಮಪ್ಪನವರು, ಮುಂತಾಗಿ ಎಲ್ಲಾ ಹಿರಿಯ ಮಾನ್ಯ ಸದಸ್ಯರು ಈ ಕುರಿತು ಮಾತನಾಡುತ್ತಿದ್ದರು. ಅವರುಗಳೇ ಇವೊತ್ತು ಮಂತ್ರಿಗಳಾಗಿದ್ದಾರೆ. ಆದರೂ ಗೈರುಹಾಜರಿಯು ಅವರ ಪ್ರಾರಂಭಿಕ ಹಂತದಲ್ಲಿಯೇ ಆಗುತ್ತಿರುವುದು ಸರಿಯಲ್ಲವೆಂದು ನನ್ನ ಅನಿಸಿಕೆ. ತಾವುಗಳು ನಮ್ಮ ರಕ್ಷಣೆಗೆ ಬರಬೇಕು. ಅವರುಗಳು ಉಪಸ್ಥಿತರಿರುವಂತೆ ತಾವುಗಳು ನಿರ್ದೇಶನ ನೀಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೇ, ಕೆಲವು ಹಿರಿಯ ಮಾನ್ಯ ಸದಸ್ಯರುಗಳು ತಮ್ಮ ಸರಕಾರದ ಕೊನೆಯ ಅವಧಿಯಲ್ಲಿ ನಮ್ಮ ಸರಕಾರ ಸತ್ತು ಹೋಗಿದೆ ಎಂದು ಟೀಕಿಸುತ್ತಾ ಇದ್ದರು. ಆದರೆ ಇವರ ಸರಕಾರವು ಪ್ರಾರಂಭದಲ್ಲಿಯೇ ಹೀಗೆ ಮಾಡುವುದನ್ನು ನೋಡಿದರೆ ಇವರು ಹೀಗೆ ಆಗಬಾರದಿತ್ತು ಎಂದು ಅನ್ನಿಸುತ್ತದೆ.

ಅಧ್ಯಕ್ಷರು: ಮಾನ್ಯ ಸದಸ್ಯರು ತಮ್ಮ ಮಾತುಗಳನ್ನು ಪ್ರಾರಂಭಿಸಿ. ಅವರುಗಳು ಎಲ್ಲಾ ಬರುತ್ತಿದ್ದಾರೆ. He is on the way.

ಶ್ರೀ ಆರಗ ಜ್ಞಾನೇಂದ್ರ: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ವಿರೋಧಿಸಿ ನನ್ನ ಮಾತುಗಳನ್ನು ಪ್ರಾರಂಭ ಮಾಡುತ್ತಿದ್ದೇನೆ. ಮಾನ್ಯ ರಾಜ್ಯಪಾಲರ ಭಾಷಣವು ಒಂದು ಸಾಂಪ್ರದಾಯಿಕ ಕ್ರಿಯೆ ಆಗಬಾರದು ಎಂದು ಎಲ್ಲರ ಅಪೇಕ್ಷೆ. ಪ್ರತಿ ಸಾರಿಯೂ ಮಾನ್ಯ ರಾಜ್ಯಪಾಲರ ಭಾಷಣವಾದ ನಂತರ ಇದೇ ಮಾತನ್ನು ನಾವುಗಳು ಉಲ್ಲೇಖ ಮಾಡುತ್ತಾ ಇದ್ದೇವೆ. ಅದು ಸರಕಾರದ ಸದಾಶಯವಾಗಿರಬೇಕು. ಸರಕಾರವು ಮುಂದಿನ ಭವಿಷ್ಯತ್‌ನಲ್ಲಿ ಏನು ಮಾಡುತ್ತದೆ ಎಂಬ ಬಗ್ಗೆ ಅದೊಂದು ನೀಲಿ ನಕಾಷೆಯಾಗಿರಬೇಕು. ಇದು ಎಲ್ಲರ ಅಭಿಪ್ರಾಯವೂ ಆಗಿದೆ. ಆದರೆ ಹೊಸ ಸರಕಾರದ

ಚೊಚ್ಚಲ ಭಾಷಣ ಏನಿದೆ, ಇದರ ಬಗ್ಗೆ ಎಲ್ಲರ ಕುತೂಹಲವು ಸಹಜವಾಗಿಯೇ ಇರುತ್ತದೆ. ಇಡೀ ಕರ್ನಾಟಕ ರಾಜ್ಯದ ಜನತೆಯಲ್ಲಿ ನಿಮ್ಮ ಕುರಿತು ಒಂದು ನಿರೀಕ್ಷೆಯು ಇತ್ತು. ಬಹಳ ಹಿರಿಯರು, ಬಹಳಷ್ಟು ಅನುಭವಸ್ಥರು, ಬಹಳಷ್ಟು ರಾಜಕೀಯ ಪರಿಣತಿಯನ್ನು ಹೊಂದಿರತಕ್ಕಂಥ ಜನರು ಈ ಭಾರಿ ರಾಜ್ಯದ ಅಧಿಕಾರ ಸೂತ್ರವನ್ನು ಹಿಡಿದಿದ್ದಾರೆ ಎನ್ನತಕ್ಕಂಥ ಹಾಗೂ ಅಂಥವರು ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿ ಕುಳಿತಿದ್ದಾರೆ ಎನ್ನುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಒಳ್ಳೆಯ ಭವಿಷ್ಯವನ್ನು ನಿರ್ಣಯಿಸತಕ್ಕಂಥ ಒಂದು ರಾಜ್ಯಪಾಲರ ಭಾಷಣವನ್ನು ಮಾಡಿಸುತ್ತಾರೆ ಎಂಬ ನಿರೀಕ್ಷೆಯನ್ನು ಇಟ್ಟುಕೊಂಡಿದ್ದರು. ಆದರೆ ಅಂಥವರ ಹಿರಿತನ, ಅವರ ಅನುಭವ ಎಲ್ಲಿ ಹೋಯಿತೋ ಏನೋ? ಅವರ ಭಾಷಣದಲ್ಲಿ ಅಂಥ ಒಂದು ಹೆಚ್ಚುಗಾರಿಕೆಯನ್ನು ಎಲ್ಲಿಯೂ ಕಾಣುವುದಕ್ಕೆ ಸಾಧ್ಯವಾಗುತ್ತಿಲ್ಲ. ಕನಿಷ್ಟಪಕ್ಷ ಒಂದು ಒಳ್ಳೆಯ ಭಾಷಣವನ್ನಾದರೂ ಮಾಡಿಸಬಹುದಾಗಿತ್ತು. ಅದನ್ನೂ ಮಾಡಿಸಲಿಲ್ಲ. ಈ ದೇಶದಲ್ಲಿ ಕಾಂಗ್ರೆಸ್‌ನ ಆಡಳಿತವು ಬಹಳ ವರ್ಷಗಳ ಕಾಲ ಆಗಿತ್ತು. ಬೇರೆ ಬೇರೆ ಆಶ್ವಾಸನೆಗಳನ್ನು ಕೊಡುವುದರಲ್ಲಿ, ಘೋಷಣೆಗಳನ್ನು ಕೊಡುವುದರಲ್ಲಿ ಕಾಂಗ್ರೆಸ್ ಎತ್ತಿದ ಕೈ. ಜನರನ್ನು ಕೋಮಾದಲ್ಲಿ ಇಟ್ಟು ಆಡಳಿತವನ್ನು ನಡೆಸತಕ್ಕಂಥ ಒಂದು ಪರಿಣತಿಯು ಅವರಿಗೆ ಇದೆ. ಇಂಥ ಸಂದರ್ಭದಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರ ನೇತೃತ್ವದಲ್ಲಿ ಸರಕಾರವು ರಚನೆಯಾದಾಗ, ಅದಕ್ಕೂ ಕೂಡ ಯಾಕೆ ತೊಂದರೆಯಾಯಿತು? ಎಂಬುದು ನಮ್ಮ ಚಿಂತೆ. ಬರೇ ಭಾಷಣಕ್ಕಿಂತ ಕೆಲಸ ಮಾಡಿ ತೋರಿಸುವುದು ಮೇಲು ಎಂದು ಅವರು ಸಂಕಲ್ಪಿಸಿದ್ದರೆ ಆ ರೀತಿಯಲ್ಲಿ ಅವರು ಮಾಡಲಿ ಎಂದು ನಾನು ಆಶಿಸುತ್ತೇನೆ. ಒಂದು ವೇಳೆ ಇರುವ ಈ ವರ್ಷದ 3-4 ತಿಂಗಳುಗಳಲ್ಲಿ ನಾವು ಹೊಸತನ್ನು, ವಿಶೇಷತನವನ್ನು ಭಾಷಣದಲ್ಲಿ ಸೇರಿಸುವುದಕ್ಕೆ ಆಗಲಿಲ್ಲ ಎಂದು ಅವರು ಹೇಳಬೇಕು. ಈಗಾಗಲೇ ಕಾಂಗ್ರೆಸ್‌ನವರು ಅಧಿಕಾರವನ್ನು ಕಳೆದುಕೊಂಡು ಐದಾರು ವರ್ಷಗಳಾಗಿವೆ, ಈಗ ಪುನಃ ಅಧಿಕಾರದಲ್ಲಿರುವಾಗ ಪ್ರಥಮ ಭಾಷಣದಲ್ಲಿ ನಮ್ಮ ಅವಧಿಯಲ್ಲಿ ಏನು ಮಾಡುತ್ತೇವೆ ಎಂಬುದನ್ನು ಜನಸಾಮಾನ್ಯರಿಗೆ ಹೇಳಬಹುದಾಗಿತ್ತು. ಅಂಥ ಒಂದು ಸಂತೋಷ ತರುವ ಕೆಲಸವನ್ನು ಅವರು ಮಾಡಬಹುದಾಗಿತ್ತು. ಆದರೆ ಅವರು ಮಾಡಲಿಲ್ಲ. ಈಗಾಗಲೇ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಇಲ್ಲಿ ಸಾಕಷ್ಟು ಟೀಕೆ ಟಿಪ್ಪಣಿಗಳು ಆಗಿವೆ. ಅದನ್ನು ಉಲ್ಲೇಖಿಸಿ, ನಮ್ಮನ್ನು ಎಷ್ಟು ಟೀಕೆ ಮಾಡುತ್ತೀರಿ? ನಾವು ಬಂದು ಇನ್ನೂ ಒಂದೆರಡು ತಿಂಗಳುಗಳು ಕೂಡ ಆಗಿಲ್ಲ, ಅದು ನಮಗೂ ಗೊತ್ತಾಗುತ್ತದೆ. ಒಂದು ತಿಂಗಳು ಇನ್ನೂ ಆಗಿಲ್ಲ, ಅವರಿಗೆ ಒತ್ತಡಗಳು ಬಹಳ, ಮಾನ್ಯ ಮುಖ್ಯಮಂತ್ರಿಗಳು ತನ್ನ ಜೀವನದಲ್ಲಿ ಸಿಕ್ಕಂಥ ಇಂತಹ ಒಳ್ಳೆಯ ಅವಕಾಶವನ್ನು ಜನಪರವಾಗಿ ಉಪಯೋಗ ಮಾಡಿಕೊಳ್ಳಬೇಕೆಂಬ ಸದಾಶಯವನ್ನು ಕೂಡ ಅವರು ಹೊಂದಿದ್ದಾರೆ. ತನ್ನ ಪ್ರತಿಭೆ, ಕಾಯಕ್ಷಮತೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೆಂಬ ಕಳಕಳಿಯು ಅವರಲ್ಲಿರುವುದು ಕೂಡ ನಮಗೆ ಗೊತ್ತಿದೆ. ಅವರಿಗೆ ಇರುವ ಒತ್ತಡ ಎಷ್ಟು ಎನ್ನುವುದು ಆರಂಭದಲ್ಲಿಯೇ ನಮಗೆ ಗೊತ್ತಾಗಿದೆ. ಹಾಗಾಗಿ ಈ ಭಾಷಣವನ್ನು ತಯಾರು ಮಾಡಲು ಅರ್ಧಗಂಟೆಯಷ್ಟು ಕುಳಿತುಕೊಳ್ಳುವ ವ್ಯವಧಾನವೂ ಅವರ್‍ಯಾರಿಗೂ ಇಲ್ಲ. ಹಿರಿಯ ಮಾನ್ಯ ಮಂತ್ರಿಗಳು ಒಟ್ಟಾಗಿ ಕುಳಿತು ಭಾಷಣವನ್ನು ತಯಾರು ಮಾಡಿದ್ದರೆ; ಅತ್ಯಂತ ಉತ್ತಮ ಕಾರ್ಯಕ್ರಮಗಳುಳ್ಳ, ಯೋಜನೆಗಳುಳ್ಳ ಉಲ್ಲೇಖವನ್ನು ಭಾಷಣದಲ್ಲಿ ಅಳವಡಿಸಬಹುದಾಗಿತ್ತು. ಅಂಥ ಒಂದು ಪ್ರತಿಭೆಯು ಅವರುಗಳಲ್ಲಿತ್ತು. ಆದರೆ ಅವರೆಲ್ಲ ಒಟ್ಟಾಗಿ ಕುಳಿತು ವಿಚಾರ

ಮಾಡಿ ತಯಾರಿಸುವ ವ್ಯವಧಾನವಿಲ್ಲದೆ ಹೀಗೆ ಆಗಿರಬೇಕು। ಅವರ ಮಂತ್ರಿಮಂಡಲದಲ್ಲಿ ಸಾಕಷ್ಟು ಜನರಿಗೆ ಅವಕಾಶವನ್ನು ಮಾಡಿ ಕೊಟ್ಟಿದ್ದಾರೆ. ಮೇಲ್ಗಡೆಯಿಂದ ಸಾಕಷ್ಟು ಒತ್ತಡ ಇದ್ದರೂ ಒಂದು ಕಾರು, ಬಂಗಲೆ ಸಿಗಲಿ, ಮಂತ್ರಿ ಎಂದು ನಮ್ಮ ಜೊತೆಯಲ್ಲಿ ಇರಲಿ ಎಂಬ ಒಂದು ಸದಾಭಿಪ್ರಾಯದಿಂದ ಅವಕಾಶವನ್ನು ಕೆಲವರಿಗೆ ಕೊಟ್ಟಿದ್ದಾರೆ. ಮಂತ್ರಿಮಂಡಲದಲ್ಲಿ ಹಿರಿಯ, ಕಿರಿಯ ಮಂತ್ರಿಗಳು ಅನೇಕರಿದ್ದಾರೆ. ಇಂಥ ಒಂದು ಅಧಿಕಾರವು ನಾವು ಹುಡುಕಿಕೊಂಡು ಹೋದರೆ ಬರುವುದಿಲ್ಲ, ಇದು ಅದೃಷ್ಟದಿಂದ ಬರುತ್ತದೆ. ಕರ್ನಾಟಕ ರಾಜ್ಯದ ಜನರು ನಿಮಗೆ ಅಚಾನಕ್ ಆಗಿ ಅಧಿಕಾರವನ್ನು ಕೊಟ್ಟಿದ್ದಾರೆ. ಜನತಾ ದಳದವರು ಜಗಳವಾಡಿ ಅಧಿಕಾರ ಕಳೆದುಕೊಂಡರು. ನಾವು ಕೊನೆಯ ಅವಧಿಯಲ್ಲಿ ಕೂಡಿಕೆ ಮಾಡಿಕೊಂಡು, ಅದು ಸರಿಯಾಗದೆ ಜನರು ನಮ್ಮ ಬಗ್ಗೆ ಬೇಸರ ಪಟ್ಟುಕೊಂಡರು. ಹಾಗಾಗಿ ಅನಿವಾರ್ಯವಾಗಿ ಜನರು ಕಾಂಗ್ರೆಸ್‌ನ್ನು ಅಧಿಕಾರಕ್ಕೆ ತರುವಂತಾಯಿತು. ಅವರಿಗೇ ನಾವು ಅಧಿಕಾರಕ್ಕೆ ಬರುತ್ತೇವೆ ಎಂಬ ಬಗ್ಗೆ ಅಂದಾಜು ಇರಲಿಲ್ಲ. ಜನರ ತೀರ್ಪಿನಂತೆ ಅಧಿಕಾರಕ್ಕೆ ಬಂದಿದ್ದಾರೆ. ಅಂಥ ಸಂದರ್ಭದಲ್ಲಿ ತಮಗೆ ಸಿಕ್ಕಂಥ ಒಂದು ಅವಕಾಶವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದಾಗಿತ್ತು. ಆದರೆ ಇನ್ನೂ ಕೂಡ ಕೆಲವು ಮಂತ್ರಿಗಳ ವಿಳಾಸಗಳು ನಮಗೆ ಗೊತ್ತಾಗುತ್ತಿಲ್ಲ. ಅವರ ಮನೆಗೆ ಹೋಗಿ ನಮ್ಮದು ಏನಾದರೂ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳೋಣ ಎಂದರೆ ಅದೂ ಆಗುತ್ತಿಲ್ಲ. ಏಕೆಂದರೆ ಸರಕಾರದವರು ಕೊಟ್ಟ ಮನೆಗಳು 'ವಾಸ್ತು' ಸರಿಯಾಗಿಲ್ಲ ಎಂದು ಕೆಲವು ಮಾನ್ಯ ಸಚಿವರು ಅಲ್ಲಿಗೆ ಹೋಗಿಲ್ಲವಂತೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ, ಹೊಸ ಮಂತ್ರಿಗಳು ಸರ್ಕಾರ ಕೊಟ್ಟ ಮನೆಗೆ ಹೋಗಿಲ್ಲ ಎಂದು ಹೇಳತಕ್ಕಂಥಾದ್ದು ಸರಿಯಲ್ಲ. ಹೊಸ ಮಂತ್ರಿಗಳು ಹೋಗುವ ಮನೆಗಳನ್ನು ಹಳೆಯ ಮಂತ್ರಿಗಳು ಇನ್ನೂ ಬಿಟ್ಟುಕೊಟ್ಟಿಲ್ಲ. ಹೀಗಾಗಿ ಹೊಸಬರು ಅಲ್ಲಿ ಹೋಗುವ ಹಾಗಿಲ್ಲ. ಉದಾಹರಣೆಗೆ ನನಗೆ ಮಂಜೂರಾದ ಮನೆಯಲ್ಲಿ ಮಾನ್ಯ ಸಿಂಧ್ಯಾರವರು ಇನ್ನೂ ವಾಸವಾಗಿದ್ದಾರೆ. ಹಾಗಿರುವಾಗ ಇದರಲ್ಲಿ ಸ್ವಲ್ಪ ವಿಳಂಬವಾಗುತ್ತಿದೆ....

ಶ್ರೀ ಆರಗ ಜ್ಞಾನೇಂದ್ರ: ಒಂದು ವೇಳೆ ಅಂಥ ಅನಿವಾರ್ಯತೆಯಿದ್ದರೆ ನಮ್ಮ ತಕರಾರು ಇಲ್ಲ. ಅನೇಕರು ವಾಸ್ತು ಸರಿಯಾಗಿಲ್ಲ ಎಂದು ಹೋಗುತ್ತಿಲ್ಲವೆಂದು ಪತ್ರಿಕೆಗಳಲ್ಲಿ ಬರುತ್ತಿದೆ.....

ಶ್ರೀ ಕಾಗೋಡು ತಿಮ್ಮಪ್ಪ: ಯಾರೋ ಏನೋ ಹೇಳಿದ್ದಾರೆ ಎಂದು ಗಾಳಿ ಸುದ್ದಿಗಳನ್ನು ಈ ಶಾಸನಸಭೆಯಲ್ಲಿ ಹೇಳುವುದು ಸರಿಯಲ್ಲ.

ಶ್ರೀ ಆರಗ ಜ್ಞಾನೇಂದ್ರ: ವಾಸ್ತು ಸರಿಯಾಗಿಲ್ಲ ಎಂದು ಅಲ್ಲಿ ಕುಂಬಳಕಾಯಿ ಕಡಿಸುವುದು, ಬೇರೆ ಏನೇನೋ ಮಾಡಲು ನಮ್ಮ ಸ್ಥಾನಗಳು ಇಲ್ಲಿ ಶಾಶ್ವತವೇ? ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದಲಾವಣೆಗಳು ಆಗುತ್ತಲೇ ಇರುತ್ತದೆ. ಇನ್ನು ಏನೇನೋ ಆಗುತ್ತಿರುತ್ತದೆ. ನಾವೇ ನೋಡಿದ ಹಾಗೆ ಮೊನ್ನೆ ಮೊನ್ನೆಯವರೆಗೆ ನಮ್ಮ ಜೊತೆಯಲ್ಲಿ ಕುಳಿತಿದ್ದ ನೀವು ಈಗ ಅಧಿಕಾರಕ್ಕೆ ಬಂದಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಯವರು): ಕೆಲವರು ಮನೆಯೊಳಗೆ ಹೋಗುವಾಗ ಯಾವಾಗ ಮಾಡಿ ಹೋಗಿರುವುದು ನಿಮಗೆ ಗೊತ್ತಿಲ್ಲವೆ? ......

ಶ್ರೀ ಆರಗ ಜ್ಞಾನೇಂದ್ರ: ಯಾರ್‍ಯಾರು ಎಲ್ಲೆಲ್ಲಿ ಯಾಗ ಮಾಡಿಸುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ. ಗುಟ್ಟಿನಲ್ಲಿ ಯಾಗ ಮಾಡಿಸುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ: ಅದಿರಲಿ ಈಗ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ. ಮಾನ್ಯ ಅಧ್ಯಕ್ಷರೇ, ಇದು ಸರಳವಾದ ಸತ್ಯ. ಹಳೇ ಮಂತ್ರಿಗಳಿನ್ನೂ ಮನೆ ಖಾಲಿ ಮಾಡಿಲ್ಲ, ಖಾಲಿ ಮಾಡಲು ಕೆಲವಕ್ಕೆ ಸಿದ್ಧತೆ ನಡೆಯುತ್ತಿದೆ. ಇದು ಸರ್ವೇಸಾಮಾನ್ಯ, ಐದು ವರ್ಷಗಳಿಗೊಮ್ಮೆ ನಡೆಯುವ ಬೆಳವಣಿಗೆ. ನೀವೇ ಮುಖ್ಯಮಂತ್ರಿಗಳಾಗಿದ್ದರೆ, ನೀವೇ ಒಂದು ಮನೆಗೆ ಹೋಗಬೇಕಾಗಿದ್ದರೆ ಅಲ್ಲಿ ರಿಪೇರಿ-ಗಿಪೇರಿ ಮಾಡಿಸಿಕೊಳ್ಳಬೇಕಾಗಿತ್ತು. ಇದನ್ನು ಬಾಕಿಯವರು ಮಾಡುತ್ತಿದ್ದಾರೆ, ಅದಕ್ಕೆ ನೀವು ಸ್ವಲ್ಪ ಔದಾರ್ಯ ತೋರಿಸಿ. ಇವೆಲ್ಲ ಸಣ್ಣ ವಿಷಯಗಳು.

ಶ್ರೀ ಆರಗ ಜ್ಞಾನೇಂದ್ರ: ಕೆಲವು ಮಾನ್ಯ ಸಚಿವರಿಗೆ ಮನೆ ಸಿಕ್ಕಿದರೂ ಅವರು ಹೋಗಲಿಲ್ಲ, ಅವರಿಗೆ ವಾಸ್ತು ಸರಿಯಾಗಿಲ್ಲವಂತೆ, ಅವರು ಸರಿಯಾದ ಮನೆ ಹುಡುಕುತ್ತಿದ್ದಾರೆ ಎಂದು ಪತ್ರಿಕೆಗಳೂ ಬರೆಯುತ್ತಿವೆ. ಸಾರ್ವಜನಿಕರು ಹಾಗೆ ಮಾತನಾಡುತ್ತಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ: ವಾಸ್ತವಿಕವಾಗಿ ಇದರಲ್ಲಿ ಏನಾಗಿದೆ ಅಂದರೆ ಈಗ ಬಹಳ ಮನೆಗಳು ಖಾಲಿಯಾಗಿವೆ, ಅವುಗಳಿಗೆಲ್ಲ ರಿಪೇರಿ ನಡೆಯುತ್ತಿದೆ, ಸುಣ್ಣ ಬಣ್ಣ ನಡೆಯುತ್ತಾ ಇದೆ. ಅದಕ್ಕೋಸ್ಕರ ಸ್ವಲ್ಪ ವಿಳಂಬವಾಗಿದೆಯೇ ಹೊರತು ಬೇರಿನ್ನಾವ ಮಹತ್ತರ ಕಾರಣಕ್ಕೂ ವಿಳಂಬವಾಗಿಲ್ಲ.

ಅಧ್ಯಕ್ಷರು: ಸಬ್ಜೆಕ್ಟ್ ಚೇಂಜ್ ಮಾಡಿ.

ಶ್ರೀ ಆರಗ ಜ್ಞಾನೇಂದ್ರ: ಹೀಗೆ ಆದಷ್ಟು ಚುರುಕಾಗಿ ತಮ್ಮ ಆಡಳಿತ ಯಂತ್ರವನ್ನು ಆರಂಭ ಮಾಡಬೇಕು. ಏಕೆಂದರೆ ಒಂದು ತಿಂಗಳಲ್ಲಿ ನೀವೇನೋ ಎಲ್ಲಾ ಮಾಡಿಬಿಡಬೇಕು ಅಂತ ನಾವು ನಿರೀಕ್ಷೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಆರಂಭದಲ್ಲೇ ಆ ಸೂಚನೆ ಚುರುಕುತನ ಕಾಣದೇ ಹೋದರೆ ತುಂಬಾ ಕಷ್ಟವಾಗುತ್ತದೆ. ತಾವು ತಮ್ಮ ಸಚಿವರಿಗೂ ಈ ಸೂಚನೆ ಕೊಟ್ಟರೆ ತುಂಬ ಒಳ್ಳೆಯದಾಗುತ್ತದೆ. ಮಾನ್ಯ ಅಧ್ಯಕ್ಷರೇ, ಇಡೀ ಭಾಷಣದಲ್ಲಿ ನಾನು ಅನೇಕ ಸಂಗತಿಗಳನ್ನು ಕಂಡಿದ್ದೇನೆ. ಎಲ್ಲವನ್ನೂ ಸೇರಿಸಿ ತುರುಕಬೇಕೆಂಬುದು ನನ್ನ ಅಭಿಪ್ರಾಯವಲ್ಲ, ಅತ್ಯಂತ ಅಗತ್ಯವಾದ ಕೆಲವು ವಿಚಾರಗಳನ್ನು ಇದರಲ್ಲಿ ಉಲ್ಲೇಖ ಮಾಡಿದ್ದರೆ ತುಂಬ ಒಳ್ಳೆಯದಿತ್ತು. ನಾವೆಲ್ಲ ಗ್ರಾಮೀಣ ಪ್ರದೇಶದಿಂದ ಬಂದಿರುವ ರೈತರು. II ಇನ್ನು ಈ ಪಶುಸಂಗೋಪನೆ ಬಗ್ಗೆ ಒಂದು ಚಿಕ್ಕ ಉಲ್ಲೇಖವೂ ಈ ಭಾಷಣದಲ್ಲಿ ಇಲ್ಲ. ಅಧ್ಯಕ್ಷರೇ, ತಾವು ಕೋಲಾರದಿಂದ ಬಂದವರು, ಈ ಸಿಲ್ಕ್ ಮತ್ತು ಮಿಲ್ಕ್‌ಗಳ ಆಧಾರದ ಮೇಲೆ ನಿಮ್ಮ ಇಡೀ ಜಿಲ್ಲೆಯ ಕೆಲವು ತಾಲ್ಲೂಕುಗಳು ನಿಂತಿವೆ. ನಮಗೆ ಬೇಕಾದ ಪೌಷ್ಠಿಕ ಆಹಾರ ಹಾಲು, ಗೊಬ್ಬರ, ಗ್ರಾಮೀಣ ಪ್ರದೇಶಗಳ ಸಾರಿಗೆ ಇವತ್ತಿಗೂ ಮಾಡುತ್ತಿರುವುದು ಜಾನುವಾರುಗಳೇ, ಎತ್ತಿನಗಾಡಿಗಳೇ, ಇಷ್ಟೊಂದು ಆಧುನಿಕ ಕಾಲಕ್ಕೂ ಬಂದರೂ ನಮ್ಮ ಭೂಮಿ ಸಾಗುವಳಿ ಮಾಡುತ್ತಿರುವುದು ನಮ್ಮ ಜಾನುವಾರುಗಳೇ. ಅವಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ನನಗೆ ಸಿಕ್ಕ ಅಂಕಿಅಂಶಗಳ ಪ್ರಕಾರ

ಒಟ್ಟು ಜಾನುವಾರು ಸಂಖ್ಯೆ ಹಾಗೂ ಕೃಷಿಗೆ ನಾವು ಖರ್ಚು ಮಾಡುವ ಹಣವನ್ನು ನೋಡಿದಾಗ ಒಂದು ಜಾನುವಾರಿಗೆ 50 ಪೈಸೆ ವರ್ಷಕ್ಕೆ ವೆಚ್ಚ ಮಾಡುತ್ತಿದ್ದೇವೆ. ಒಂದು ಇಂಜೆಕ್ಷನ್ ಮಾಡಬೇಕಾದರೆ ಎಷ್ಟು ಹಣ ಬೇಕಾಗುತ್ತದೆ? ನಾವು ರೈತರಿಗೆ ಏನಾದರೂ ಅನುಕೂಲ ಮಾಡಬೇಕೆಂದಾಗ ಇವು ಅತಿಮುಖ್ಯ ಅಂಶಗಳಲ್ಲವೇ? ಶೇಕಡ 85 ಭಾಗವಿರುವ ಗ್ರಾಮೀಣರಿಗೆ ಯಾವ ರೀತಿ ನಿಮ್ಮ ಸರ್ಕಾರ ಅನುಕೂಲ ಅಥವಾ ನ್ಯಾಯ ಒದಗಿಸಿಕೊಡುತ್ತದೆ? ಹಿಂದಿನ ಸರ್ಕಾರಗಳ ಬಗ್ಗೆಯೂ ಇಲ್ಲಿ ನಾವು ಮಾತನಾಡಿದ್ದೇವೆ. ಈ ಪಶುಸಂಗೋಪನಾ ಇಲಾಖೆ ಇದೊಂದು ತರಹ ಕಡೆಗಣಿಸಿದ ಇಲಾಖೆ.

ಶ್ರೀ ಕಾಗೋಡು ತಿಮ್ಮಪ್ಪ: ನಮ್ಮ ಸ್ನೇಹಿತರು ಇನ್ನೂ ಬೆಳೆಯಬೇಕೆಂದು ಅಪೇಕ್ಷೆಯಿಟ್ಟುಕೊಂಡವರಲ್ಲಿ ನಾನೂ ಒಬ್ಬ. ಯಾಕೆಂದರೆ ಅವರು ಅರಗದಿಂದ ಬಂದವರು. ಎರಡನೇ ಸಲ ಇಲ್ಲಿಗೆ ಆರಿಸಿ ಶಾಸಕರಾಗಿ ಬಂದಿದ್ದಾರೆ. ಅವರು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ಯಾವ ಧಾಟಿಯಲ್ಲಿ ಮಾತನಾಡಬೇಕು ಅಂತ ತಿಳಿದುಕೊಳ್ಳಬೇಕು. ಪೇಜ್ 6ರ 13ನೇ ಪ್ಯಾರಾದಲ್ಲಿ ಏನು ಹೇಳಿದ್ದಾರೆ ಅದು ಎಲ್ಲಾ ಫಾರ್ಮರ್ಸ್‌ಗೆ ಸಂಬಂಧಿಸಿದೆ, ಅದು ಪಶುಸಂಗೋಪನೆ ಇರಬಹುದು, ತೋಟಗಾರಿಕೆ ಆಗಿರಬಹುದು - ಒಟ್ಟಾರೆ ರೈತರ ಪರವಾಗಿ ನಾವು ಏನು ಒಳ್ಳೆಯ ದೃಷ್ಟಿಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ ಎಂದು ಸೂಕ್ಷ್ಮವಾಗಿ ಇಲ್ಲಿ ಕೊಟ್ಟಿದ್ದೇವೆ. ಮುಂದೆ ಇಲಾಖಾ ಬೇಡಿಕೆ ಚರ್ಚೆಗೆ ಬರುತ್ತಲ್ಲ, ಆಗ ಅದರಲ್ಲಿ ನೀವು ವಿವರವಾಗಿ ಮೇವು ಯಾಕೆ ಕೊಟ್ಟಿಲ್ಲ? ಕುರಿ ಯಾಕಿಟ್ಟಿಲ್ಲ? ಎಂದು ಎಲ್ಲಾ ಹೇಳಿರಿ, ಅವಾಗ ಅದಕ್ಕೆ ಅರ್ಥ ಬರುತ್ತದೆ, ಹಾಗೂ ಅದಕ್ಕೆ ಒಂದು ಹೊಸ ಆಯಾಮಾನೂ ಸಿಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ: ನೀವು ಎಲ್ಲವನ್ನೂ ಹೇಳಿದ್ದೀರಿ ಅಂತ ನಾವು ಊಹೆ ಮಾಡಿಕೊಂಡು ಸುಮ್ಮನೆ ಕುಳಿತುಕೊಳ್ಳಬೇಕೆಂದು ಮಾನ್ಯ ತಿಮ್ಮಪ್ಪನವರು ಅಪೇಕ್ಷೆ ಪಡುವುದಾದರೆ ಅವರು ಇಲ್ಲಿ ಕುಳಿತು ಹೀಗೆ ಮಾಡುತ್ತಿದ್ದರು ಅಂತ ಆದರೆ ನಾನೂ ಸುಮ್ಮನಾಗಿಬಿಡುತ್ತೇನೆ.

ಅಧ್ಯಕ್ಷರು: ನೀವು ಅಧ್ಯಕ್ಷರ ಜೊತೆ ಮಾತನಾಡಿ. ಇದಕ್ಕೆಲ್ಲಾ ಸಮಯ ಇಲ್ಲ, ಸಂಜೆ 6 ಗಂಟೆ ಒಳಗೆ ಮಾತನಾಡಬೇಕಾದ ಇನ್ನೂ 10-12 ಜನ ಮಾನ್ಯ ಸದಸ್ಯರು ಇದ್ದಾರೆ. ನಾಳೆ ಅಂತೂ ಯಾರಿಗೂ ಮಾತನಾಡಲು ಬಿಡುವುದಿಲ್ಲ, ಆಕಸ್ಮಾತ್ ಒಬ್ಬರೋ ಇಬ್ಬರೋ ಉಳಿದರೆ ಬರುವ ಜನವರಿಯಲ್ಲಿ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲಿ ಅಷ್ಟೇ.

- ನಗು -

ಶ್ರೀ ಆರಗ ಜ್ಞಾನೇಂದ್ರ: ನಾವೆಲ್ಲ ಗ್ರಾಮೀಣ ಪ್ರದೇಶದಿಂದ ಬಂದವರು, ನಮ್ಮ ತಲೆಯೊಳಗೆ ಅದೇ ತುಂಬಿರುವುದು. ಏನಾದರೂ ಹೇಳಿದರೆ ನಮ್ಮ ಜನಕ್ಕೆ ಸಂತೋಷವಾಗುತ್ತದೇನೋ ಅಂತ ಅಷ್ಟೇ.

ಅಧ್ಯಕ್ಷರು: ಇಲ್ಲಿರುವ 224 ಸದಸ್ಯರಲ್ಲಿ 40 ಮಂದಿ ಮಾತ್ರ ಪಟ್ಟಣ ಪ್ರದೇಶದಿಂದ ಬಂದವರು, ಮಿಕ್ಕವರೆಲ್ಲಾ ಗ್ರಾಮೀಣ ಪ್ರದೇಶದವರೇ.

ಶ್ರೀ ಆರಗ ಜ್ಞಾನೇಂದ್ರ: ಹಾಗಾಗಿಯೇ ಇವರು ಅದಕ್ಕೆ ಏನಾದರೂ ಒತ್ತು ಕೊಡಬೇಕೆಂಬುದೇ ನಮ್ಮ ಸದಾಶಯ. ಇನ್ನೊಂದು ವಿಚಾರವೇನೆಂದರೆ, ಸಾರ್ವಜನಿಕ ಉದ್ದಿಮೆಗಳ ಬಗ್ಗೆ ಹಿಂದಿನ ಸರ್ಕಾರ ಎರಡು ಮೂರು ಪ್ಯಾರಾಗಳನ್ನು ಅದರಲ್ಲಿ ಮೀಸಲಿಟ್ಟಿದ್ದರು. ಸರ್ಕಾರಕ್ಕೆ ಇವು ಬಿಳಿಯಾನೆಗಳಾಗಿವೆ ಅಂತ. ಅದೇನೇ ಇದ್ದರೂ ಸಿಕ್ ಇಂಡಸ್ಟ್ರೀಸ್ ಬಗ್ಗೆ ನಿಮ್ಮ ನಿಲುವೇನು? ಇಂತಹ ಸರ್ಕಾರದ ಪಾಲಿಸಿಗಳು ಇದರಲ್ಲಿ ಬರಬೇಕಾಗುತ್ತದೆಯಲ್ಲ! ಅದು ಎಲ್ಲಿ ಬಂದಿದೆ? ಅಂತಹ 78 ಉದ್ದಿಮೆಗಳು ಅತ್ಯಂತ ನಷ್ಟದಲ್ಲಿವೆ. ಬಡ ಬೋರೇಗೌಡನ ಶ್ರಮದ ಹಣವನ್ನು ತಂದು ಅವನ್ನು ಬೆಳೆಸುವುದಕ್ಕಾಗಿ ವಿನಿಯೋಗ ಮಾಡುತ್ತಿದ್ದೇವಲ್ಲ ಇವುಗಳ ಬಗ್ಗೆ ನಿಮ್ಮ ನಿರ್ದಿಷ್ಟ ಕಾರ್ಯಕ್ರಮಗಳೇನು? ನಿನ್ನೆ ದಿವಸ ಈ ಕೆಎಸ್‌ಆರ್‌ಟಿಸಿ ಬಗ್ಗೆ ಒಂದು ಮಾತು ಬಂತು. ಅವುಗಳನ್ನು ಆರಂಭ ಮಾಡಿರುವ ಹಿನ್ನೆಲೆ ಉದ್ದೇಶ ಏನೆಂದರೆ ಖಾಸಗಿಯವರು ಎಲ್ಲೋ ಒಂದು ಕಡೆ ಹೆರಾಸ್‌ಮೆಂಟ್ ಮಾಡುತ್ತಾರೆ, ಆದರಿಂದ ತೊಂದರೆಯಾಗುತ್ತದೆ ಅದರ ಬದಲಿಗೆ ಸರ್ಕಾರದ ಪರ್ಯಾಯ ವ್ಯವಸ್ಥೆಯಿದ್ದರೆ ಖಾಸಗಿಯವರನ್ನು ನಿಯಂತ್ರಿಸಬಹುದೆಂಬ ಉದ್ದೇಶದಿಂದ ಅದನ್ನು ಮಾಡಿದ್ದಾರೆ. ಅವು ಸರ್ಕಾರದ ಎಲ್ಲ ರಕ್ತವನ್ನೂ ಹೀರುತ್ತವೆಂದಾದರೆ ಅವನ್ನು ಸರಿಮಾಡುವ ದಿಕ್ಕಿನಲ್ಲಿ ಏನಾದರೂ ಪ್ರಯತ್ನ ಮಾಬೇಕು. ಹಾಗೆಯೇ ಶಿವಮೊಗ್ಗ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯದ ಅತ್ಯಂತ ಪ್ರತಿಷ್ಠಿತ ಉದ್ಯಮವಾದ ಎಂಪಿಎಂ ಇದೆ. ಅಲ್ಲಿ ಕೋಟಿಗಟ್ಟಲೆ ಹಣವನ್ನು ನುಂಗಿ ನೀರು ಕುಡಿದಿದ್ದಾರೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅದರ ಬಗ್ಗೆ ಒಂದು ವರದಿ ಕೊಟ್ಟಿತು. ಆಡಳಿತ ಪಕ್ಷದವರೇ ಸಮಿತಿಗೆ ಚೇರ್ಮನ್ ಆಗಿದ್ದರು. ಸಮಿತಿಯವರು ಅದರಲ್ಲಿ - ಅನ್ಯಾಯವಾಗಿದೆ ಎಂದು ಸ್ಪಷ್ಟ ವರದಿ ಕೊಟ್ಟರೂ ನೀವೇನು ಮಾಡಿದ್ದೀರಿ? ಯಾರೋ ಕೆಲವು ಅಧಿಕಾರಿಗಳನ್ನು ಉದ್ಧಾರ ಮಾಡುವುದಕ್ಕಾಗಿ ಆ ಉದ್ದಿಮೆಗಳನ್ನು ನಡೆಸಬೇಕು, ಕೋಟಿಗಟ್ಟಲೆ ಹಣ ನಷ್ಟವಾದರೂ ಅವಕ್ಕೆ ಹಾಕಬೇಕು ಅನ್ನುವುದಾದರೆ ಅದರಿಂದ ತುಂಬ ಕಷ್ಟವಾಗುತ್ತದೆ. ಆದರ ಬಗ್ಗೆ ನಿರ್ದಿಷ್ಟತೆ, ಒಂದು ಸ್ಪಷ್ಟತೆ ಬೇಕು, ಇವನ್ನು ಇಟ್ಟುಕೊಳ್ಳಬೇಕೇ ಅಥವಾ ಖಾಸಗಿಯವರಿಗೆ ವಹಿಸಿಕೊಡಬೇಕೇ? ಅಲ್ಲಿನ ಕಾರ್ಮಿಕರ ಪರಿಸ್ಥಿತಿಯೇನು? ಇಷ್ಟೊಂದು ಹಣ ಅದರಲ್ಲಿ ವಿನಿಯೋಗಿಸಿದ್ದರಿಂದ ಬೇರೆಡೆ ಅಭಿವೃದ್ಧಿ ಕಾರ್ಯಕ್ರಮಗಳು ಹಾಳಾಗುತ್ತಿವೆ. ಇಂತಹ ಒಂದು ಸ್ಪಷ್ಟತೆ ಇವತ್ತು ಅವಶ್ಯಕತೆ ಇದೆ. ಈ ಎಲ್ಲಾ ಸಾರ್ವಜನಿಕ ಉದ್ದಿಮೆಗಳನ್ನು ಸರಿಮಾಡುವಂತಹ ಅಧಿಕಾರಿಗಳನ್ನು ಹುಡುಕಿ ಅತ್ಯಂತ ಆಯಕಟ್ಟಿನ ಜಾಗಗಳಲ್ಲಿ ಅವರನ್ನು ಕೂರಿಸಿಬೇಕಾಗಿದೆ. ಇವತ್ತು ಸುಮ್ಮನೆ ಅವರು ಮೇಜವಾನಿ ಮಾಡುವುದು ಸುಮ್ಮನೆ ಫಾರಿನ್ ಟೂರ್ ಹೊಡೆಯುವುದು, ಈ ರೀತಿ ಸುಖ ಭೋಗಗಳನ್ನು ಅನುಭವಿಸುವ ಮರಿಮಹಾರಾಜರುಗಳಾಗಿದ್ದಾರೆ. ಅಂತಹ ವ್ಯಕ್ತಿಗಳನ್ನು ತತ್‌ಕ್ಷಣವೇ ತೆಗೆದು ಬೇರೆ ಎಲ್ಲಾದರೂ ಹಾಕಬೇಕು. ಅಂತಹ ಉದ್ದಿಮೆಗಳನ್ನು ಇವತ್ತು ನೆಟ್ಟಗೆ ಮಾಡುವ ನಿಟ್ಟಿನಲ್ಲಿ ಸರ್ಕಾರ ವಿಶೇಷವಾದ ಪ್ರಯತ್ನವನ್ನು ಮಾಡಬೇಕು ಎಂಬುದು ನನ್ನ ಆಸೆ. II ಮಾನ್ಯ ಅಧ್ಯಕ್ಷರೇ, ಈ ನೀರಾವರಿ ಯೋಜನೆಗಳು ಎಂದ ತಕ್ಷಣ ಕೃಷ್ಣ, ಕಾವೇರಿ ಎಂಬ ಜಪವನ್ನೇ ನಾವು ಮಾಡುತ್ತಿದ್ದೇವೆ. ಆದರೆ ಸಾಕಷ್ಟು ಹಣ ಅವಕ್ಕೆ ಕೊಡಬೇಕಾಗುತ್ತದೆ. ಸಾಕಷ್ಟು ಹಣ ಕೊಟ್ಟು ಬಚಾವತ್ ಆರ್ಡರ್ ಪ್ರಕಾರ ನಾವು ಅವನ್ನು ಕಾರ್ಯಗತ ಮಾಡಬೇಕಾಗುತ್ತದೆ. ಅದರ ಜೊತೆಗೆ ಈ ಸಣ್ಣ ನೀರಾವರಿ, ಈ ಇಲಾಖೆಗೆ ಬಹಳ ಯುವಕರಾದ ಒಬ್ಬರನ್ನು ಮಂತ್ರಿ ಮಾಡಿದ್ದೀರಿ. ಅವರ ಕೈಯಲ್ಲಿ ಹಣವನ್ನೇ ಕೊಡದೇ ಇದ್ದರೆ ಹೇಗೆ? ನಾವೆಲ್ಲಾ ಮಲೆನಾಡು ಭಾಗದಿಂದ ಬಂದಿರುವವರು

ನಮ್ಮಲ್ಲಿ ನದಿಗಳು ಹರಿಯುತ್ತಿವೆ. ನನ್ನ ಕ್ಷೇತ್ರದಲ್ಲಂತೂ ವರಾಹಿ ಮತ್ತು ತುಂಗ ಎರಡು ನಂದಿಗಳು ಹರಿಯುತ್ತಿವೆ. ನಾವು ಅವುಗಳ ದಡದ ಮೇಲೆ ಕುರಿತು ಕಣ್ಣೀರು ಹಾಕುತ್ತೇವೆ. ಏಕೆಂದರೆ, ಶರಾವತಿ, ವರಾಹಿ, ಮಾಲತಿ - ಇವೆಲ್ಲ ನಮ್ಮನ್ನು ಮುಳುಗಿಸಿವೆ. ಸಾಕಷ್ಟು ಜಮೀನು, ಮನೆ ಕಳೆದುಕೊಂಡು ನಿರ್ಗತಿಕರಾಗಿದ್ದೇವೆ. ಹೋಗಲಿ ಉಳಿದಿರುವವರಿಗಾದರೂ ಅದರಿಂದ ಉಪಯೋಗವಾಗುತ್ತದೆಯೇ? ಚಿಕ್ಕಚಿಕ್ಕ ಲಿಫ್ಟ್ ಇರಿಗೇಶನ್, ಹೆಚ್ಚಿಗೆ ಬೇಡ, 35 ಲಕ್ಷ 50 ಲಕ್ಷ ರೂಪಾಯಿಗಳನ್ನು ಕೊಟ್ಟರೆ 200-300 ಎಕರೆ ಸಾಗುವಳಿ ಆಗಿಬಿಡುತ್ತದೆ. ಇವತ್ತು ಎಲ್ಲಾ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ದೊಡ್ಡ ದೊಡ್ಡ ನದಿಗಳು ಹರಿಯುತ್ತಿವೆ ಅದನ್ನು ಮಾಡಬಹುದು. ನಾವು ಕೃಷ್ಣಾ ಕೊಳದಲ್ಲಿಯೇ ಬರುತ್ತಿದ್ದೇವೆ. ಆ ನೀರನ್ನು ಕೂಡ ಸದುಪಯೋಗ ಮಾಡಿಕೊಂಡ ಹಾಗೆ ಆಗುತ್ತದೆ. ನಮ್ಮ ಸಂಪನ್ಮೂಲಗಳು ಹೆಚ್ಚು ಆಗುತ್ತವೆ. ಆ ಭಾಗದಲ್ಲಿರತಕ್ಕ ರೈತರಿಗೆ ಬದುಕನ್ನು ಕೊಟ್ಟಿರತಕ್ಕ ಪುಣ್ಯಕ್ಕೆ ತಾವು ಪಾತ್ರರಾಗುತ್ತೀರಿ. ಇಂತಹ ಕೆಲಸಗಳನ್ನು ಮಾಡಲಿಕ್ಕೆ ಸಾಕಷ್ಟು ಹಣ ಸರ್ಕಾರದಿಂದ ಕೊಡದೇ ಹೋದರೆ ನಬಾರ್ಡ್‌ನಿಂದ ಅಥವಾ ಇನ್ನೆಲ್ಲಿಂದ ತರಲಿಕ್ಕೆ ಆಗುತ್ತದೆ ಎಂದು ಸರ್ಕಾರ ವಿಚಾರ ಮಾಡಿ ನೋಡಬೇಕಾಗುತ್ತದೆ. ಈ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಈಗಾಗಲೇ ಕೆಲವರು ಹೇಳಿದರು. ನಾನು ಮತ್ತೆ ಮತ್ತೆ ಕೆಲವರು ಹೇಳಿದ್ದನ್ನೇ ಚರ್ವಿತ ಚರ್ವಣ ಮಾಡಲಿಕ್ಕೆ ಹೋಗುವುದಿಲ್ಲ. ನಮ್ಮಲ್ಲಿ ಕೆರೆಗಳಿವೆ. ಗೋಕಟ್ಟೆಗಳು ಇವೆ. ಆದರೆ ಜಾನುವಾರುಗಳಿಗೆ ಕುಡಿಯುವುದಕ್ಕೂ ನೀರು ಇಲ್ಲ, ಹಕ್ಕಿ ಪಕ್ಷಿಗಳಿಗೆ ಕುಡಿಯುವುದಕ್ಕೂ ನೀರು ಇಲ್ಲ. ಆ ಪರಿಸ್ಥಿತಿ ಉಂಟಾಗಿದೆ. ಅವು ಯಾವುದೋ ಮಹಾರಾಜರ ಕಾಲದಲ್ಲಿ ತೋಡಿರತಕ್ಕಂಥ ಕೆರೆಗಳು. ಅವು ನಿಮ್ಮಲ್ಲೂ ಇರಬಹುದು. ಇವತ್ತಿಗೂ ಕೂಡ ಆ ಕೆರೆಗಳ ಹೂಳನ್ನು ತೆಗೆದಿಲ್ಲ. ದಂಡೆ ಕಟ್ಟಲಿಲ್ಲ, ರಿಪೇರಿ ಮಾಡಲಿಲ್ಲ, ತೂಬು ರಿಪೇರಿ ಮಾಡಲಿಲ್ಲ. ಏನೂ ಮಾಡಲಿಲ್ಲ, ಅವೆಲ್ಲಾ ಹಾಗೆಯೇ ಅವಕ್ಕೆ ಎಲ್ಲಿಂದ ಹಣ ತರಬೇಕು? ಅದರ ಬಗ್ಗೆ ತಾವು ಉಲ್ಲೇಖ ಮಾಡಬೇಕಾಗಿತ್ತು. ಅದಕ್ಕೆಲ್ಲ ಹೇಗೆ ಸಂಪನ್ಮೂಲಗಳ ಕ್ರೋಢೀಕರಣ ಮಾಡುತ್ತೇವೆಂದು ಹೇಳಬೇಕಾಗಿತ್ತು. ಸುಮಾರು 75 ಭಾಗದಷ್ಟು ರೈತರು ಇಂತಹ ಒಂದು ಖುಷ್ಕಿ ಬೆಳೆ ಬೆಳೆಯತಕ್ಕಂಥ ಮತ್ತು ಈ ಭಾಗದಲ್ಲಿ ವಾಸ ಮಾಡತಕ್ಕಂಥ ರೈತರು ಇದ್ದಾರೆ. ಅವರಿಗೆ ನೀವೇನಾದರೂ ನ್ಯಾಯ ಕೊಡಬೇಕಾದಂತಹ ಪರಿಸ್ಥಿತಿಯಲ್ಲಿ ಇದಕ್ಕೆ ಹೆಚ್ಚು ಒತ್ತನ್ನು ಕೊಡಬೇಕಾಗಿತ್ತು. ವಿಶೇಷವಾಗಿ ನಾವೆಲ್ಲರೂ ಕೂಡ ತೋಟಗಾರಿಕೆಯ ಬೆಳೆಯ ಮೇಲೆ ಅವಲಂಬಿಸಿದ್ದೇವೆ. ಹಾಗಾಗಿ ತೋಟಗಾರಿಕೆಯ ಬಗ್ಗೆ ಉಲ್ಲೇಖ ಕೂಡ ಇಲ್ಲಿಲ್ಲ. ಇದು ಅತಿ ಹೆಚ್ಚಿನ ಒಂದು ಸಂಪನ್ಮೂಲವನ್ನು ನಮ್ಮ ರಾಜ್ಯ ಸರ್ಕಾರದ ಖಜಾನೆಗೆ ತಂದು ಒದಗಿಸುತ್ತಿದೆ. ನಾನು ಅಡಿಕೆ ಬೆಳೆಯ ಪ್ರದೇಶದಿಂದ ಬಂದಿರತಕ್ಕವನು. ಅದರಿಂದ ಎಷ್ಟು ಹಣ ಬರುತ್ತದೆ ಎಂದು ತಾವು ಅಧಿಕಾರಿಗಳ ಕಡೆಯಿಂದ ವಿವರ ತೆಗೆಸಿ ನೋಡಿ. ಆಗ ಅದು ಎಷ್ಟು ಎಂದು ಗೊತ್ತಾಗುತ್ತದೆ? ಟ್ಯಾಕ್ಸಿನ ರೂಪದಲ್ಲಿ ಎಷ್ಟು ಬರುತ್ತದೆ ಎಂದು ಗೊತ್ತಾಗುತ್ತದೆ. ಎಪಿಎಂಸಿ ರೂಪದಲ್ಲಿ, ಬೇರೆ ಬೇರೆ ಕಡೆಯಿಂದ ತಮಗೆ ಹಣ ಬರುತ್ತಿದೆ. ಇವತ್ತು ಅದಕ್ಕೆ ಬರತಕ್ಕ ರೋಗಗಳು ಏನು ಇವೆ, ಭಯಾನಕವಾದಂತಹ ರೋಗಗಳು ಏನು ಇವೆ? ಈ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇನ್ನು ಕೆಲವು ವರ್ಷಗಳಲ್ಲಿ ಅಡಿಕೆ ಬೆಳೆ ಇರುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಡಿ.ಬಿ. ಚಂದ್ರೇಗೌಡರು ಇಲ್ಲೇ ಇದ್ದರು, ಈಗ ಎಲ್ಲೋ ಹೋಗಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಲ್.ಓಡಿ. ಡಿಸೀಸ್ ಬಂದಿದೆ. ನನ್ನ ತಾಲ್ಲೂಕಿಗೆ ಕೂಡ ಈ ರೋಗ ಚಿಕ್ಕಮಗಳೂರು ಜಿಲ್ಲೆಯಿಂದ ಹಬ್ಬಿದೆ. ಅದು ನನ್ನ ಬಾರ್ಡರ್ ಪ್ರದೇಶ, ದಕ್ಷಿಣ ಕನ್ನಡದಲ್ಲಿದೆ. ಏನೂ ಇಲ್ಲ ಅಂದರೂ 200 ಕ್ವಿಂಟಾಲ್ ಅಡಿಕೆ ಬೆಳೆಯುತ್ತಿರತಕ್ಕವನು ಈಗ ಎರಡು ಕ್ವಿಂಟಾಲ್ ಬೆಳೆಯುತ್ತಿದ್ದಾನೆ, ಕಣ್ಣಲ್ಲಿ ನೀರು ಹಾಕುತ್ತಿದ್ದಾನೆ. ಆ ಮಟ್ಟಕ್ಕೆ ಅವರ ಜೀವನ ಮಟ್ಟವನ್ನು ಏರಿಸಿದ್ದಾಗಿದೆ. ಇವತ್ತೇನು ಅವರೆಲ್ಲಾ ಬೇಡುವಂತಹ ಪರಿಸ್ಥಿತಿಯಲ್ಲಿದ್ದಾರೆ. ಅದರ ಬಗ್ಗೆ ಸಂಶೋಧನೆಯೇ ನಡೆಯಲಿಲ್ಲ. ಅವರು ಏನು ಹೇಳಿದರು? ಹಿಂದಿನ ಸರ್ಕಾರಗಳು ಏನು ಹೇಳಿದವು? ತಮ್ಮ ಸರ್ಕಾರ ಇದ್ದಾಗಲೂ ಹೇಳಿತ್ತು. ಈ ಬಗ್ಗೆ ಒಂದು ಸ್ಕೀಮ್ ಮಾಡಿದ್ದೇವೆ ಎಂದು ನೀವು ಹೇಳಿದ್ದಿರಿ. ಅದೇನು ಅಂದರೆ ಅಂತಹ ರೋಗ ಬಂದಿರತಕ್ಕ ಒಂದು ಮರ ಕಡಿದು ಹಾಕಿದರೆ ನೂರು ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದರು. ಅವನು ಮರ ಕಡಿಯಬೇಕು, ಮರ ಕಡಿಯುತ್ತಾನೆ. ಅದಕ್ಕೆ ಸಬ್‌ಸ್ಟ್ಯೂಟ್ ಏನು? ಮತ್ತೆ ನೆಟ್ಟರೆ ರೋಗ ಬರದಿದ್ದ ಹಾಗೆ ನಾವೇನಾದರೂ ಸಂಶೋಧನಾ ಕೇಂದ್ರಗಳನ್ನು ಮಾಡಬೇಕಾಗುತ್ತದೆ. ವಿಶೇಷವಾಗಿ ಕೇಂದ್ರದ ಅನುದಾನ ಇದಕ್ಕೆ ಬರುತ್ತದೆ. ಅದನ್ನು ಸದ್ಬಳಕೆ ಮಾಡಿಕೊಂಡು, ತೋಟಗಾರಿಕಾ ಬೆಳೆಗಳ ಮೇಲೆ ಅದರ ಮಾರ್ಕೆಟಿಂಗ್ ಮೇಲೆ ವಿಶೇಷವಾಗಿರತಕ್ಕ ಒತ್ತನ್ನು ಕೊಡತಕ್ಕಂಥ ನೀತಿಯನ್ನು, ನಿಯಮವನ್ನು ತಮ್ಮ ಸರ್ಕಾರ ಹಾಕಿಕೊಂಡಿದ್ದರೆ ತುಂಬಾ ಒಳ್ಳೆಯದು ಆಗುತ್ತಿತ್ತು ಎಂದು ನನ್ನ ಅನಿಸಿಕೆ ಇದೆ. II ಹಾಗೆಯೇ ಸಾರ್ವಜನಿಕ ಆರೋಗ್ಯದ ಬಗ್ಗೆ ಈಗಾಗಲೇ ಸಾಕಷ್ಟು ಉಲ್ಲೇಖ ಆಗಿದೆ, ನಾನು ಆ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಆಸ್ಪತ್ರೆಗಳ ಪರಿಸ್ಥಿತಿ ಹೇಗಿದೆ ಅಂದರೆ ನನ್ನ ತಾಲ್ಲೂಕಿನ ಪ್ರಸೂತಿ ತಜ್ಞರು ಇಲ್ಲ. ಅಲ್ಲಿ ಒಬ್ಬರು ಮಹಿಳಾ ವೈದ್ಯರು ಎರಡು ವರ್ಷದಿಂದ ಇಲ್ಲ, ಆ ಹುದ್ದೆ ಖಾಲಿ ಇದೆ. ನಾನು 'ಅವರು ಒಬ್ಬರನ್ನು ಕೊಂದು ಹಾಕಿದರು' ಎಂದು ಹೇಳಿ ಗಲಾಟೆ ಮಾಡಿದೆ. ಅದು ಉದ್ದೇಶ ಪೂರ್ವಕವಾಗಿ ಆಗಿದ್ದು ಇದೆ. ಲಂಚ ಕೊಡಲಿಲ್ಲ ಎಂದು ಹೇಳಿ ಒಬ್ಬ ಹೆಣ್ಣು ಮಗಳು ಹೆರಿಗೆಗೆ ಬಂದಿರತಕ್ಕವಳು ಸತ್ತು ಹೋದಳು, ನಾವು ಗಲಾಟೆ ಮಾಡಿದೆವು. ಸರ್ಕಾರದವರು ಹೋಗಿ ಎನ್‌ಕ್ವೈರಿ ಮಾಡಿದರು. ಇಂಥಿಂಥವರು ಕಾರಣ ಎಂದು ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದರು. ಕೆಲವರನ್ನು ಬೇರೆ ಕಡೆಗೆ ಹಾಕಿದರು. ಅವರಿಗೆಲ್ಲಾ ಈಗ ಟ್ರಾನ್ಸ್‌ಫರ್ ಆಗಿ ಹೋಯಿತು. ಅವರೆಲ್ಲ ಉದ್ಯೋಗದಲ್ಲಿದ್ದು ಈಗ ನನ್ನ ಕಡೆ ನೋಡಿ ನಗುತ್ತಿದ್ದಾರೆ. ಎರಡೂವರೆ ವರ್ಷಗಳಿಂದ ನನ್ನ ತಾಲ್ಲೂಕಿನ ಕೇಂದ್ರ ಆಸ್ಪತ್ರೆಗೆ ಮಹಿಳಾ ವೈದ್ಯರು ಇಲ್ಲ. ತಮ್ಮ ಕ್ಷೇತ್ರದಲ್ಲಿ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಆಗಲೇ ಮಾಜಿ ಮುಖ್ಯಮಂತ್ರಿಗಳ ಕ್ಷೇತ್ರದ ಚನ್ನಾಗಿರಿಯ ಪರಿಸ್ಥಿತಿಯ ಬಗ್ಗೆ ಮಾನ್ಯ ವಡ್ನಾಳ್ ರಾಜಣ್ಣನವರು ಮಾತನಾಡುತ್ತಾ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಕೂಡ ಮಹಿಳಾ ವೈದ್ಯಾಧಿಕಾರಿ ಇಲ್ಲ, ಪ್ರಸೂತಿ ತಜ್ಞರು ಇಲ್ಲ. ನಮ್ಮಲ್ಲಿರತಕ್ಕ ಒಬ್ಬ ಬಡ ಮಹಿಳೆ ಡೆಲಿವರಿಗೆ ನರ್ಸಿಂಗ್ ಹೋಂಗೆ ಹೋಗಿ ಸೇರಿ ಅಲ್ಲಿಂದ ವಾಪಸ್ ಬಿಡಿಸಿಕೊಂಡು ಬರಲು ದುಡ್ಡು ಇಲ್ಲದೇ ಮಾಂಗಲ್ಯವನ್ನು ಅಡವಿಟ್ಟು ಆ ನರ್ಸಿಂಗ್ ಹೋಂನ ಫೀಸ್ ಕಟ್ಟಿ ಹೊರಗೆ ಬಂದಳು. ನಾವು ಗಲಾಟೆ ಮಾಡಿ ಐದು ಜನ ಡಾಕ್ಟರನ್ನು ಹಾಕಿಸಿದೆವು. ಆ ಐದೂ ಜನ ಡಾಕ್ಟರ್‌ಗಳು ಅಲ್ಲಿ ಹೋಗಿ ರಿಪೋರ್ಟ್ ಮಾಡಿಕೊಳ್ಳಲಿಲ್ಲ. ಅವರ ಮೇಲೆ ಸರ್ಕಾರ ಏನೇನೂ ಕ್ರಮ ತೆಗೆದುಕೊಳ್ಳಲಿಲ್ಲ. ಇವತ್ತೂ ಅವರು ಹಾಯಾಗಿದ್ದಾರೆ. ಅವರ ಮೇಲೆ

ಸರ್ಕಾರದ ನಿಯಂತ್ರಣವೇ ಇಲ್ಲ. ಅವರು ಸರ್ಕಾರಕ್ಕೆ ಹೆದರುವುದೇ ಇಲ್ಲ. ನಾವು ಬೆಂಗಳೂರಿನಲ್ಲಿಯೇ ಇರುತ್ತೇವೆ. ಸರ್ಕಾರಿ ಆಸ್ಪತ್ರೆಯಲ್ಲಿ ಸಂಬಳ, ನರ್ಸಿಂಗ್ ಹೋಂನಲ್ಲಿ ಕೆಲಸ. ಇದು ವ್ಯವಸ್ಥಿತವಾಗಿ ಇವತ್ತು ಕೆಲವು ಸರ್ಕಾರಿ ವೈದ್ಯರ ಧೋರಣೆ, ಈ ಪರಿಸ್ಥಿತಿ ನಿರ್ಮಾಣ ಆಗಿ ಹೋಗಿದೆ. ಸರಿಯಾದಂತಹ ಕಂಟ್ರೋಲ್ ಇಲ್ಲದೇ ಹೋದರೆ ನಾವ್ಯಾರೂ ಸಹ ಗೌರವದಿಂದ ಇವತ್ತು ನಮ್ಮ ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ. ಇಂತಹ ಒಂದು ದಯನೀಯವಾಗಿರತಕ್ಕಂಥ ಪರಿಸ್ಥಿತಿಯಲ್ಲಿ ಎಲ್ಲೆಲ್ಲಿ ವೈದ್ಯರ ಹುದ್ದೆಗಳು ಖಾಲಿ ಇವೆ, ಅಲ್ಲಿ ವೈದ್ಯರನ್ನು ಹಾಕಬೇಕು. ಅವರು ನೀವು ಹಾಕಿದಂತಹ ಪ್ರದೇಶಕ್ಕೆ ಹೋಗದೇ ಹೋದರೆ ಶಿಕ್ಷೆ ಕೊಡಬೇಕು. ನಾನು ಸರ್ಕಾರದವರನ್ನು ತಮ್ಮ ಮೂಲಕ ಕೇಳುತ್ತೇನೆ. ಯಾರೇ ಆಗಲಿ ಅವರು ಸರ್ಕಾರದ ಆದೇಶವನ್ನು ಪಾಲನೆ ಮಾಡಬೇಕು. ಅವರು ಸಂಬಳ ತೆಗೆದುಕೊಳ್ಳುವುದಿಲ್ಲವೇ? ಅವರು ಹೋಗಲಿಲ್ಲ ಎಂದರೆ ಕ್ರಮ ತೆಗೆದುಕೊಳ್ಳಬೇಕಲ್ಲ? ಇಲ್ಲಿಯವರೆಗೆ ಎಷ್ಟು ಜನರನ್ನು ಸಸ್ಪೆಂಡ್ ಮಾಡಿದ್ದೀರಿ? ಎಷ್ಟು ಜನರನ್ನು ಡಿಸ್‌ಮಿಸ್ ಮಾಡಿದ್ದೀರಿ? ಇವತ್ತಿಗೂ ಕೂಡ ಅವನ್ನು ಮಾಡಲಿಲ್ಲ. ಅದಲ್ಲದೇ ಆಡಳಿತದಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆ. ಅದನ್ನು ಬಲಗೊಳಿಸುತ್ತಿದ್ದೇವೆಂದು ಹೇಳಿದ್ದಾರೆ. ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯನ್ನು ಬಲಗೊಳಿಸುತ್ತೇವೆಂದು ಇಲ್ಲಿ ಏನು ಉಲ್ಲೇಖ ಮಾಡಿದ್ದಾರೆ, ಅದನ್ನು ಬಲಗೊಳಿಸುವುದು ಎಂದರೆ ಹೇಗೆ? ಅದರಲ್ಲಿ ಎಲ್ಲ ವರ್ಗದ ಜನರೂ ಕೂಡ ಪಾಲುಗೊಳ್ಳುವ ಹಾಗೆ ಮಾಡುತ್ತೇವೆ ಎಂದು. ಬಲಗೊಳಿಸುವುದು ಅಂದರೆ ಪಾಲುಗೊಳ್ಳುವ ಹಾಗೆ ಮಾಡುತ್ತೇವೆಂದು ಅರ್ಥ. ಈಗಾಗಲೇ ಅವರೆಲ್ಲಾ ಪಾಲ್ಗೊಂಡಿದ್ದಾರೆ. ನಮ್ಮ ಪರಿಶಿಷ್ಟ ವರ್ಗದ ಬಂಧುಗಳು ಎಲ್ಲರೂ ಕೂಡ ಛೇರ್ಮನ್ ಆಗಿದ್ದಾರೆ. ಪರಿಸ್ಥಿತಿ ಹೇಗಿದೆ ಎಂದು ಹೇಳಿದರೆ ಜನ ಅವರ ಬಗ್ಗೆ ಲಘುವಾಗಿ ಮಾತನಾಡುವ ಹಾಗೆ ಆಗಿದೆ. ಕೇವಲ ಅವರ ಕೈಗೆ ಅಧಿಕಾರವನ್ನು ಕೊಡುವಂತಹದು ಅಲ್ಲ. ಅವರನ್ನು ಸೂಕ್ತ ರೀತಿಯಲ್ಲಿ ತರಬೇತಿ ಮಾಡಿದ್ದೇವೆಯೇ? ಅಲ್ಲಿರತಕ್ಕಂಥ ಕಾರ್ಯದರ್ಶಿಯನ್ನು ಆಳತಕ್ಕಂಥ ಶಕ್ತಿ ಅಲ್ಲಿರತಕ್ಕ ಛೇರ್ಮನ್‌ಗೆ ಬೇಕು. ಛೇರ್ಮನ್ ಪರ್ಸ್ ಹೊತ್ತುಕೊಂಡು ಕಾರ್ಯದರ್ಶಿ ಹಿಂದೆ ಎಲ್ಲೋ ಬಿಲ್ ಮಾಡಿಸುವುದಕ್ಕೆ ತಾಲ್ಲೂಕು ಪಂಚಾಯಿತಿಗೆ ಓಡಾಡುವಂತಹ ಪರಿಸ್ಥಿತಿ ಆಗುವುದಾದರೆ ನಮ್ಮ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಗೆ ಮರ್ಯಾದೆ ಬರುತ್ತದೆಯೇ ಹೇಳಿ. ಅವರಿಗೆ ಸರಿಯಾದಂತಹ ತರಬೇತಿ ಕೊಡಬೇಕು. ಅವರಿಗೆ ಆಳತಕ್ಕ ಶಕ್ತಿ ತುಂಬಬೇಕು. ಅಲ್ಲಿ ಮಾಹಿತಿ ಲಭ್ಯ ಆಗುವಂತಹ ಕೆಲಸ ಮಾಡಬೇಕು. ಮತ್ತು ಕಾಟಾಚಾರಕ್ಕೆ ಅಲ್ಲಿ ಕಾರ್ಯದರ್ಶಿಗಳನ್ನು ಹಾಕಬಾರದು. ಈಗೇನಾಗಿದೆ ಎಂದರೆ ಅಲ್ಲಿ ಕಳ್ಳ, ಸುಳ್ಳ ಎಲ್ಲರನ್ನೂ ಹಾಕಿ ಬಿಟ್ಟಿದ್ದಾರೆ. ಪಾಪ ಎಲ್ಲರೂ ಅಯೋಗ್ಯರು ಎಂದು ನಾನು ಹೇಳುವುದಿಲ್ಲ. ಹಾಗೆ ಕೆಲವರನ್ನು ಹಾಕಿದ್ದಾರೆ. ಒಂದೊಂದು ಲಕ್ಷ ರೂಪಾಯಿಗಳನ್ನು ತಿಂದುಕೊಂಡು ಹೋದರಲ್ಲ. ಪಂಚಾಯತಿಯಲ್ಲಿ ಇರುವುದೇ ಅಷ್ಟು ದುಡ್ಡು. ಒಂದೊಂದು ಲಕ್ಷ ರೂಪಾಯಿಗಳಷ್ಟು ಹಣ ಒಂದೊಂದು ಪಂಚಾಯಿತಿಯಲ್ಲಿ ದುರುಪಯೋಗ ಆಗಿದೆ. ಆ ಬಗ್ಗೆ ಏನೂ ಕ್ರಮ ಇಲ್ಲ. ಅವರನ್ನು ಹೇಗೆ ಬಲಗೊಳಿಸುತ್ತೀರಿ ಎಂದು ನನಗೆ ಗೊತ್ತಿಲ್ಲ. ಒಟ್ಟಾರೆ ಹೇಳುವುದಾದರೆ ನನ್ನ ತಾಲ್ಲೂಕಿನ ಮೂರ್‍ನಾಲ್ಕು ಪಂಚಾಯಿತಿಯಲ್ಲಿ ಲಕ್ಷಗಟ್ಟಲೆ ಹಣ ದುರುಪಯೋಗ ಆಗಿದೆ. ತಾವು ಮಾಹಿತಿಯನ್ನು ತರಿಸಿಕೊಂಡು ನೋಡಿದರೆ ಅದು ಗೊತ್ತಾಗುತ್ತದೆ.

ಅಂತಹ ಕಾರ್ಯದರ್ಶಿಗಳ ಮೇಲೆ ಏನೂ ಕ್ರಮ ಇಲ್ಲ. ಯಾರ ಮೇಲೆ ಕ್ರಮವೂ ಇಲ್ಲ. ಮೊನ್ನೆ ನಮ್ಮ ಪಕ್ಕದಲ್ಲಿದ್ದ ಒಬ್ಬ ಕಾರ್ಯದರ್ಶಿ ಸತ್ತು ಹೋದ. ಅವನ ಪೆನ್‌ಷನ್ ಆದರೂ ಸೆಟಲ್ ಮಾಡಿಸಿ ಎಂದು ಹೇಳಿದರೆ ಮೂರು ಪಂಚಾಯತಿಯಲ್ಲಿ ಅವನು ಕೆಲಸ ಮಾಡಿದ್ದ, ಮೂರು ಪಂಚಾಯತಿಯಲ್ಲಿ ಮೂರು ಲಕ್ಷ ರೂಪಾಯಿಗಳಷ್ಟು ದುರುಪಯೋಗ ಆಗಿದೆ. ಅವನು ಆ ಮೂರು ಪಂಚಾಯಿತಿಗಳನ್ನು ಬಿಟ್ಟು ಹೊರಗೆ ಬರುವವರೆಗೆ ಅವನು ಸತ್ತು ಹೋಗುವತನಕ ಅವನ ಮೇಲಾಧಿಕಾರಿಗಳು ಇದ್ದರಲ್ಲ, ಅವರೇನು ಮಾಡಿದ್ದರು? ಅವರೇನು ಪರ್ಸೆಂಟೇಜ್ ತೆಗೆದುಕೊಂಡಿದ್ದರೂ ಇವತ್ತು ಅವನ ಹೆಂಡತಿ ಮಕ್ಕಳು ಬೀದಿಯಲ್ಲಿ ಬಿದ್ದಿದ್ದಾರೆ. ಅವನ ಪೆನ್‌ಷನ್ ಸೆಟಲ್ ಆಗುತ್ತಿಲ್ಲ. ಇದು ಬಲಗೊಳ್ಳುವುದು ಅಂದರೆ ಹೇಗೆ? ಸರಿಯಾದಂತಹ ಯಾವುದಾದರೂ ಒಂದು ಪಾಲಿಸಿ ಮಾಡಿ. ಶಕ್ತಿಯುತವಾಗಿ ಅದರ ಮೇಲ್ವಿಚಾರಣೆ, ಮೇಲುಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕು. ಅದನ್ನು ಮತ್ತೆ ಪದೇ ಪದೇ ಬದಲಾವಣೆ ಮಾಡಬಾರದು. ಮಾನ್ಯ ಶಿವಕುಮಾರ್ ಅವರ ಸಹಕಾರಿ ಇಲಾಖೆ ಮತ್ತು ಪಂಚಾಯತಿ ಇಲಾಖೆ, ಇವೆರಡೂ ಕೂಡ ಸರ್ಕಾರ ಬದಲಾವಣೆ ಆದಾಗಲೆಲ್ಲಾ ಇದನ್ನು ಬದಲಾವಣೆ ಮಾಡುತ್ತಾ ಹೋದರೆ ಹೇಗೆ? ಅದನ್ನು ಆಟದ ವಸ್ತುವನ್ನಾಗಿ ಯಾವುದೇ ಸರ್ಕಾರ ಮಾಡಿಕೊಳ್ಳಬಾರದು. ನಮ್ಮ ಗ್ರಾಮೀಣ ಪ್ರದೇಶದ ಅಭಿವೃದ್ಧಿ, ನಮ್ಮ ಗ್ರಾಮೀಣ ಪ್ರದೇಶದ ಜನರ ಆರ್ಥಿಕ ಶಕ್ತಿಯನ್ನು ಹೆಚ್ಚು ಮಾಡತಕ್ಕಂಥ ಈ ಎರಡು ಸಂಸ್ಥೆಗಳು ಎಂದರೆ ಈ ಸಹಕಾರಿ ಇಲಾಖೆ ಮತ್ತು ಪಂಚಾಯತ್ ವ್ಯವಸ್ಥೆ. ಇವೆರಡನ್ನೂ ಕೂಡ ನಿಸ್ಸತ್ವ ಮಾಡುತ್ತಿದ್ದೀರಿ, ಅವುಗಳ ಕುತ್ತಿಗೆ ಹಿಸುಕುವಂತಹ ಕೆಲಸವನ್ನು ದಯವಿಟ್ಟು ಯಾವುದೇ ಸರ್ಕಾರ ಮಾಡಬಾರದು. ಎಷ್ಟು ಸಾರಿ ಬದಲಾವಣೆ? ಒಂದು ಸಾರಿ ಮಂಡಲ್ ಪಂಚಾಯಿತಿ, ಮತ್ತೊಂದು ಸಾರಿ ಗ್ರಾಮ ಪಂಚಾಯಿತಿ ಎನ್ನುವುದು, ಒಂದು ಸಾರಿ ಅವನಿಗೆ ಛೇರ್ಮನ್ ಎಂದು ಕರೆಯುವುದು, ಇನ್ನೊಂದು ಸಾರಿ ಪ್ರಧಾನ ಎಂದು ಕರೆಯುವುದು ಆ ಬೋರ್ಡ್‌ಗಳನ್ನು ಬದಲಾಯಿಸಲಿಕ್ಕೆ, ಆ ಪೇಂಟಿಂಗ್‌ಗೆ ಎಷ್ಟು ಹಣ ಖರ್ಚಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಿ. ಯಾರ ದುಡ್ಡು ಅದು? ಆ ಜನಕ್ಕೆ ಯಾರು ಏನು ಮಾಡಬೇಕು ಎಂದು ಗೊತ್ತಾಗುವುದಿಲ್ಲ. ಅದರಲ್ಲಿ ಹೊಂದಾಣಿಕೆ ಬರದೇ ಇದ್ದರೆ ಕಷ್ಟ ಆಗುತ್ತದೆ. ಇಂತಹ ಒಂದು ಸ್ಥಿತಿಯಲ್ಲಿ ಅದು ಬಲಗೊಳ್ಳಬೇಕಾದರೆ ಸರಿಯಾದಂತಹ ವ್ಯವಸ್ಥಿತವಾದಂತಹ ಪ್ರಯತ್ನದ ಬಗ್ಗೆ ಸಮಗ್ರವಾಗಿ ತಾವು ಕುಳಿತುಕೊಂಡು ಆಲೋಚನೆ ಮಾಡಿ ಇದನ್ನು ಕಾರ್ಯ ರೂಪಕ್ಕೆ ತರಬೇಕು ಎನ್ನುವುದು ನನ್ನ ಅನಿಸಿಕೆ. ಅಭಿವೃದ್ಧಿ ಕಾರ್ಯಕ್ಕೆ ಕಂಪ್ಯೂಟರ್ ಬಳಕೆ, ಇದು ಬಹಳ ಮಹತ್ವದ ಸಂಗತಿ ಎಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಆಂಧ್ರದ ಮುಖ್ಯಮಂತ್ರಿಯವರಾದ ಮಾನ್ಯ ಚಂದ್ರಬಾಬು ನಾಯಿಡು ಅವರು ಆ ವ್ಯವಸ್ಥೆ ಮಾಡಿದ್ದಾರೆ. ಕೇವಲ ಕಂಪ್ಯೂಟರ್‌ನಿಂದ ಅವರು ಪ್ರಗತಿ ಮಾಡಲಿಲ್ಲ. ಅತ್ಯಂತ ಮಹತ್ವದ ಸಂಗತಿಯ ಬಗ್ಗೆ ನಾವು ಇವತ್ತು ಆಲೋಚನೆ ಮಾಡಬೇಕು. ಕೇಂದ್ರ ಸರ್ಕಾರದ ಅಂಕಿ ಸಂಖ್ಯೆಗಳನ್ನು ತರಿಸಿ ಕೇಂದ್ರದಿಂದ ರಾಜ್ಯಕ್ಕೆ ಬರತಕ್ಕ ಅನುದಾನ ಎಷ್ಟು ನೋಡಿ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಸೇರಿ ಜಂಟಿಯಾಗಿ ಮಾಡತಕ್ಕಂಥ ಕಾರ್ಯಕ್ರಮಗಳು ಏನು ಇವೆ, ಅದರಲ್ಲಿ ಅತಿ ಹೆಚ್ಚಿನ ಹಣವನ್ನು ಪಡೆದಿರತಕ್ಕವರು ಮಾನ್ಯ ಚಂದ್ರಬಾಬು ನಾಯಿಡು ಅವರು, ಆಂಧ್ರ

ಪ್ರದೇಶದ ಮಾನ್ಯ ಮುಖ್ಯಮಂತ್ರಿಗಳು. ಇವತ್ತು ನಮ್ಮ ಸರ್ಕಾರಗಳು ಆ ಹಣವನ್ನು ಕೇಂದ್ರದಿಂದ ಪಡೆದುಕೊಳ್ಳಲಿಕ್ಕೆ ಮತ್ತು ಅದನ್ನು ಉಪಯೋಗಿಸಿಕೊಳ್ಳಲಿಕ್ಕೆ ಸಾಧ್ಯ ಆಗುತ್ತಿಲ್ಲ. ನಮ್ಮಲ್ಲಿ ಅರ್ಧ ರಾಜ್ಯ ಸರ್ಕಾರದ ಪಾಲು, ಅರ್ಧ ಕೇಂದ್ರ ಸರ್ಕಾರದ ಪಾಲಿನ ಅನೇಕ ಯೋಜನೆಗಳಿವೆ. ಜಂಟಿಯಾಗಿ ಮಾಡತಕ್ಕಂಥ ಯೋಜನೆಗಳು ಇವತ್ತು ಇವೆ. ಅಂತಹದರಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಜೊತೆಗೆ ಸಂಬಂಧವನ್ನು ಬೆಳೆಸಿ, ಅವರಿಂದ ಹಣವನ್ನು ತಂದು ಎಷ್ಟು ನಮ್ಮ ರಾಜ್ಯಕ್ಕೆ ಹೆಚ್ಚು ಪಾಲನ್ನು ತರಲಿಕ್ಕೆ ಆಗುತ್ತದೋ ಅದನ್ನು ಬಳಸಿಕೊಳ್ಳುವಂತಹದು ತುಂಬಾ ಒಳ್ಳೆಯದಾಗುತ್ತದೆ. ಉದಾಹರಣೆಗೆ ನಬಾರ್ಡ್ ಒಂದರಲ್ಲಿಯೇ ನನಗೆ ಸಿಕ್ಕಂತಹ ಮಾಹಿತಿ ಪ್ರಕಾರ 800 ಕೋಟಿ ರೂಪಾಯಿಗಳನ್ನು ಅವರು ಬಳಸಿಕೊಂಡರು. ನಾವೆಷ್ಟು ಬಳಸಿಕೊಂಡಿದ್ದೇವೆ? ಕರ್ನಾಟಕ 400 ಕೋಟಿ ರೂಪಾಯಿಗಳನ್ನು ಮಾತ್ರ ಬಳಸಿಕೊಂಡಿದ್ದೇವೆ. ನಬಾರ್ಡ್ ಹಣದಲ್ಲಿ ಕೂಡ ಅದನ್ನು ಕೆಲವು ಇಲಾಖೆಗಳು ಸದ್ಬಳಕೆ ಮಾಡಿಕೊಳ್ಳಲಿಲ್ಲ. ಅವು ಸರಿಯಾಗಿ ಕೆಲಸವನ್ನೇ ಮಾಡುತ್ತಿಲ್ಲ. ಬಳಕೆ ಮಾಡಿಕೊಳ್ಳುತ್ತಿಲ್ಲ. ರಾಜ್ಯ ಸರ್ಕಾರ ಇನ್ನಾದರೂ ಕೂಡ ವಿಶೇಷವಾದಂತಹ ಪ್ರಯತ್ನ ಮಾಡಿ ನಮ್ಮ ಮೆಷಿನರಿಗಳನ್ನು ಚುರುಕುಗೊಳಿಸಿ ಆ ಒಂದು ಹಣವನ್ನು ತರಲಿಕ್ಕೆ ವಿಶೇಷವಾಗಿರತಕ್ಕಂಥ ಪ್ರಯತ್ನವನ್ನು ಮಾಡಬೇಕೆಂದು ನನ್ನ ಅನಿಸಿಕೆ ಇದೆ. ಸರ್ಕಾರಿ ಕಛೇರಿಗಳಲ್ಲಿ ಸಾಮಾನ್ಯ ಜನ ಹೋದಾಗ ಅವರ ಕೆಲಸ ಆಗದಿದ್ದರೂ ಸರಿಯೇ, ಕೊನೆಯ ಪಕ್ಷ ಮಾರ್ಯಾದೆಯಾದರೂ ಸಿಗುವಂತಾಗಬೇಕು. ದಯವಿಟ್ಟು ನಿಮ್ಮ ಕಾಲಾದಲ್ಲಾದರೂ ಆ ಕೆಲಸ ಮಾಡಿ. ಪೊಲೀಸ್ ಠಾಣೆಗಳಿಗೆ ಮತ್ತು ತಾಲ್ಲೂಕು ಕಛೇರಿಗಳಿಗೆ ಕಟ್ಟ ಕಡೆಯ ಒಬ್ಬ ಬಡವ ಹೋದಾಗ ಅವನಿಗೆ ಕನಿಷ್ಟ ಕುಳಿತುಕೊಳ್ಳಲು ಹೇಳುವಂಥ ಸೌಜನ್ಯ ಇರುವುದಿಲ್ಲ. ಅಲ್ಲಿ ಖಾಲಿ ಕುರ್ಚಿಗಳಿದ್ದರೂ ಕೂರಲು ಹೇಳುವುದಿಲ್ಲ. ಮಾನ್ಯ ಶಾಸಕರುಗಳೇನಾದರೂ ಹೋದರೆ ಎದ್ದು ನಿಂತು ಕುರ್ಚಿ ಕೊಡುತ್ತಾರೆಯೇ? ಲೋಕಸಭಾ ಸದಸ್ಯರು, ವಿಧಾನಸಭಾ ಸದಸ್ಯರುಗಳಿಗೆ ಹೇಗೆ ಗೌರವ ಕೊಡಬೇಕೆಂಬುದರ ಬಗ್ಗೆ ಸುತ್ತೋಲೆಗಳ ಕಂತೆಯೇ ಇದೆ. ನಾವೇನಾದರೂ ಕಛೇರಿಗಳಿಗೆ ಹೋದಾಗ ಕೆಲವಡೆ ಅವರು ಬೀಡಿ ಹಚ್ಚಿಕೊಳ್ಳುವುದೊಂದು ಬಾಕಿ ಇರುತ್ತದೆ. ನಾವು ಕಛೇರಿಗಳಿಗೆ ಹೋದಾಗಲೂ ಎದ್ದು ನಿಲ್ಲುವುದಿಲ್ಲ, ಕುಳಿತುಕೊಳ್ಳಿ ಎಂದು ಹೇಳುವಂತಹ ಸೌಜನ್ಯ ತೋರಿಸುವುದಿಲ್ಲ. ನಾವು ಕೆಲವೊಮ್ಮೆ ನಿಂತುಕೊಂಡೇ ಮಾತನಾಡಬೇಕಾಗುತ್ತದೆ. ವಿಧಾನ ಸೌಧ ಮತ್ತು ಬಹುಮಹಡಿ ಕಟ್ಟಡಗಳಲ್ಲಿರುವ ಸಚಿವಾಲಯ ಕಛೇರಿಗಳು ಇದಕ್ಕೆ ಆದರ್ಶವಾಗಿರಬೇಕು. ಮಾನ್ಯ ಅಧ್ಯಕ್ಷರೇ, ತಾವು ಯಾವಾಗಲಾದರೂ ಸಾಮಾನ್ಯ ಮನುಷ್ಯನಂತೆ ಈ ಕಛೇರಿಗಳಿಗೆ ಹೋದರೆ ಕೆಲವರು ದೊಡ್ಡ ದೊಡ್ಡ ಕಾದಂಬರಿಗಳನ್ನು ಓದುತ್ತಿರುವುದನ್ನು ಕಾಣಬಹುದಾಗಿದೆ. ಬಹುಮಹಡಿ ಕಟ್ಟಡಗಳ ಪಕ್ಕದಲ್ಲೇ ಕೆಲವೊಂದು ಲೈಬ್ರರಿಗಳು ಪ್ರಾರಂಭವಾಗಿವೆ. ಬೆಳಿಗ್ಗೆ ಕಛೇರಿಗೆ ಹೋಗುವಾಗ ಕಾದಂಬರಿಯನ್ನು ಅಲ್ಲಿಂದ ತೆಗೆದುಕೊಂಡು ಹೋಗುತ್ತಾರೆ. ಸಾಯಂಕಾಲ ಬರುವಾಗ ಕಾದಂಬರಿಯನ್ನು ಲೈಬ್ರರಿಗೆ ಹಿಂತಿರುಗಿಸುತ್ತಾರೆ. ಅದಕ್ಕಾಗಿ ಅಲ್ಲಿಗೆ ತಿಂಗಳಿಗೆ ಎಷ್ಟೋ ಫೀಸ್ ಕಟ್ಟುತ್ತಾರೆ. ಕೇಸ್ ವರ್ಕರ್ಸ್ ಅವರುಗಳಿಗೇನೂ ಕೆಲಸವಿರುವುದಿಲ್ಲ, ಕಾದಂಬರಿಗಳನ್ನು ಓದಿಕೊಂಡೇ ಕುಳಿತಿರುತ್ತಾರೆ. ಅಂಡರ್ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ ಇಷ್ಟೆಲ್ಲಾ ಅಧಿಕಾರಿಗಳಿರುತ್ತಾರೆ, ಇವರುಗಳಿಗೇನೂ ಕೆಲಸವಿರುವುದಿಲ್ಲ, ಇವರು ಕೇವಲ ಒಂದು ಛೋಟಾ ಸಹಿ ಹಾಕಿ ಕಡತವನ್ನು ಹಿಂದಕ್ಕೆ

3.30 ಪಿ.ಎಂ.

ಕಳುಹಿಸುತ್ತಿರುತ್ತಾರೆ. ಕಡತವನ್ನು ಅವರು ಮುಂದಕ್ಕೆ ಕಳುಹಿಸುವುದೇ ಇಲ್ಲ. ನನ್ನಂತಹವರೇನಾದರೂ ಹೋಗಿ ಆ ಕಡತವನ್ನು ಹಿಂಬಾಲಿಸಿದರೆ ಮಾತ್ರ ಆ ಕಡತ ಮುಂದಕ್ಕೆ ಹೋಗುತ್ತದೆ. ಕಡತಗಳು ಮುಂದಕ್ಕೆ ಹೋಗಬೇಕಾದರೆ ಕೆಲವರು ಭಾರ ಹಾಕಬೇಕು, ಟೇಬಲ್ ಅಡಿ ಕೈ ಇಡಬೇಕು. ಈ ರೀತಿ ರಾಜ್ಯದಲ್ಲಿ ಆಗಬಾರದ ಕೆಲಸಗಳು ಇಲ್ಲಿ ಆಗುತ್ತಿವೆ. ಇವತ್ತು ರೆವಿನ್ಯೂ ಇಲಾಖೆಯ ಸೆಕ್ರೆಟರಿ ಒಬ್ಬ ವಿಲೇಜ್ ಅಕೌಂಟೆಂಟ್‌ಗೆ ವರ್ಕ್ ಸ್ಪೀಡ್ ಅಫ್ ಮಾಡು ಎಂದು ಹೇಳಬಹುದು. ಆತ ಅರ್ಜಿ ಇಟ್ಟುಕೊಂಡು ಒಂದು ತಿಂಗಳಾದ ಮೇಲೆ ಅದನ್ನು ಕಸದ ಬುಟ್ಟಿಗೆ ಹಾಕುತ್ತಾನೆ ಎನ್ನುವುದಾದರೆ ಸಚಿವಾಲಯದಲ್ಲಿರುವ ಕಾರ್ಯದರ್ಶಿಗಳ ಕಛೇರಿಗಳಲ್ಲಿ ಏನಾಗುತ್ತದೆ? ನನ್ನ ಕ್ಷೇತ್ರದ ವರಾಹಿ ಪ್ರಾಜೆಕ್ಟ್ ಏರಿಯಾದಲ್ಲಿ ಬರುತ್ತದೆ. 50-60 ಅಡಿ ಆಳದಲ್ಲಿ ಮನೆಗಳು ಮತ್ತು ಜಮೀನುಗಳು ಮುಳುಗಿ ಹೋಗಿ ಜನ ಹುಚ್ಚು ಹಿಡಿದು ತಿರುಗುತ್ತಿದ್ದಾರೆ. ಇವತ್ತಿಗೂ ಕೂಡ ಅವರಿಗೆ ಪರಿಹಾರದ ಹಣ ಕೊಟ್ಟಿಲ್ಲ. ಅನೇಕ ವಿಚಾರಗಳಲ್ಲಿ ಸರ್ಕಾರದ ಆದೇಶಗಳು ಆಗಬೇಕಾಗುತ್ತದೆ. ಯಾವುದೋ ಒಂದು ಕೆಲಸವೊಂದಕ್ಕೆ ನಾನು ಸಚಿವಾಲಯಕ್ಕೆ ಹೋಗಿದ್ದಾಗ ಅಲ್ಲಿದ್ದ ಅಂಡರ್-ಸೆಕ್ರೆಟರಿ ಮತ್ತು ಡೆಪ್ಯುಟಿ ಸೆಕ್ರೆಟರಿಗಳು ಈ ಕಡತ ಅಲ್ಲಿಗೆ ಹೋಗಬೇಕಾಗಿತ್ತು, ಇಲ್ಲಿಗೆ ಹೋಗಬೇಕಾಗಿತ್ತು ಎಂದು ಹೇಳಿದರು. ಸಂಬಂಧಪಟ್ಟವರನ್ನು ಬಿಟ್ಟು ಎಲ್ಲೆಲ್ಲೋ ಕಡತಗಳನ್ನು ಕಳುಹಿಸಿರುತ್ತಾರೆ. ಯಾರಿಗೆ ತಾವೇನು ಕೆಲಸ ಮಾಡಬೇಕೆಂಬುದೇ ಅವರಿಗೆ ಗೊತ್ತಿಲ್ಲ. ವರ್ಷಾನುಗಟ್ಟಲೆ ಕಡತಗಳು ಕೊಳೆಯುತ್ತಾ ಬಿದ್ದಿವೆ. ಅದಕ್ಕೇನು ಮಾಡಬೇಕೆಂಬುದನ್ನು ನಾವು ಇಲ್ಲಿ ಕುಳಿತುಕೊಂಡು ವಿಚಾರ ಮಾಡಬೇಕಾಗುತ್ತದೆ. ಜನರ ಅರ್ಜಿಗಳಿಗೆ ಗೌರವ ಸಿಕ್ಕಬೇಕಾಗುತ್ತದೆ. ಈ ಕೆಲಸವನ್ನು ಎಲ್ಲಾ ಅಧಿಕಾರಿಗಳು ಮಾಡುವಂತೆ ಅವರನ್ನು ಎಚ್ಚರಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕೆಂಬುದು ನನ್ನ ಅನಿಸಿಕೆಯಾಗಿದೆ. ಮಾನ್ಯ ಎಸ್.ಎಂ. ಕೃಷ್ಣರವರು ಪ್ರಥಮ ಬಾರಿಗೆ ರಾಜ್ಯದ ಮುಖ್ಯಮಂತ್ರಿಗಳಾಗಿದ್ದೀರಿ. ಬಹಳ ವರ್ಷಗಳ ಹಿಂದೆಯೇ ತಾವು ಆಗಬೇಕಾಗಿತ್ತು. ಈಗ ನಿಮಗೆ ಮುಖ್ಯಮಂತ್ರಿಗಳಾಗಿದ್ದೀರಿ. ಬಹಳ ವರ್ಷಗಳ ಹಿಂದೆಯೇ ತಾವು ಆಗಬೇಕಾಗಿತ್ತು. ಈಗ ನಿಮಗೆ ಮುಖ್ಯಮಂತ್ರಿಗಳಾಗುವ ಅವಕಾಶ ಸಿಕ್ಕಿದೆ. ಅನೇಕ ಹಿರಿಯ ಮಂತ್ರಿಗಳೆಲ್ಲಾ ನಿಮ್ಮ ಸಹಕಾರಕ್ಕೆ ಇದ್ದಾರೆ. ಹಾಗಾಗಿ ಅವರೆಲ್ಲರ ಅನುಭವವನ್ನು ಕ್ರೋಢೀಕರಿಸಿ ಅತ್ಯುತ್ತಮವಾಗಿರತಕ್ಕಂತಹ ಒಂದು ಸರ್ಕಾರವನ್ನು ಕರ್ನಾಟಕದ ರಾಜ್ಯದ ಜನತೆಗೆ ತಾವು ಕೊಡಬೇಕೆಂಬುದು ನನ್ನ ಆಸೆಯಾಗಿದೆ. ಇದರಲ್ಲಿ ನನ್ನದೂ ಒಂದು ಸ್ವಾರ್ಥ ಇದೆ. ಮಾನ್ಯ ಮುಖ್ಯಮಂತ್ರಿಗಳ ಪಕ್ಷ ಬೇರೆ ಇರಬಹುದು, ಅವರು ನನ್ನ ತಾಲ್ಲೂಕಿನ ಅಳಿಯಂದಿರಾಗಿದ್ದಾರೆ. ' ನಾಡಿಗೆ ಅರಸು ಆದರೂ ತಾಯಿಗೆ ಮಗ ಎನ್ನುವ ಹಾಗೆ ' ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನಮಗೊಂದು ರೀತಿಯ ಸಲುಗೆ ಇದೆ. ನಮ್ಮ ತಾಲ್ಲೂಕಿನ ಅಳಿಯಂದಿರಾದ ಮಾನ್ಯ ಮುಖ್ಯಮಂತ್ರಿಗಳಿಗೆ ಒಳ್ಳೆಯ ಹೆಸರು ಬಂದರೆ ನಮ್ಮ ತಾಲ್ಲೂಕಿನವರೆಲ್ಲರೂ ಸಂತೋಷ ಪಡುತ್ತೇವೆ. ಈ ಒಂದು ದೃಷ್ಟಿಯಿಂದ ಕೂಡ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಒಳ್ಳೆಯ ಹೆಸರು ನಿಮಗೆ ಬರಬೇಕು. ಹಾಗೆಯೇ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಒಂದು ಶಕ್ತಿ ಬರಬೇಕಾಗುತ್ತದೆ. ಸಂವಿಧಾನಕ್ಕೆ 84ನೇ ತಿದ್ದುಪಡಿಯನ್ನು ಇವತ್ತು ಕೇಂದ್ರ ಸರ್ಕಾರ ತಂದಿದೆ, ಅದನ್ನು ನಾವು ಇವತ್ತು ಅಂಗೀಕರಿಸಬೇಕಾಗಿದೆ. ನಾನು ಇವತ್ತು ಒಂದು ರೀತಿಯಿಂದ ಕೇಂದ್ರ ಸರ್ಕಾರದವರನ್ನು ಅಭಿನಂದಿಸುತ್ತೇನೆ. ಸ್ವಾತಂತ್ರ್ಯ

ಬಂದು 53-54 ವರ್ಷಗಳಾದರೂ ಆ ಜನಾಂಗದವರು ಮತ್ತೆ ನಮ್ಮಿಂದ ಭಿಕ್ಷೆ ಬೇಡುವಂತಹ ಪರಿಸ್ಥಿತಿಗೆ ತಂದು ನಿಲ್ಲಿಸಿದ್ದೇವೆ, ಪ್ರಾಮಾಣಿಕವಾಗಿ ಅವರ ಕೆಲಸ ಈ ದೇಶದಲ್ಲಿ ಆಗಲಿಲ್ಲ ಎಂದು ಅತ್ಯಂತ ನೋವು ಆಗುತ್ತದೆ. ಇದಕ್ಕೆ ಹೆಚ್ಚಿನ ಹೊಣೆಗಾರಿಕೆಯನ್ನು ಕಾಂಗ್ರೆಸ್ ಪಕ್ಷ ಹೊರಬೇಕಾಗಿದೆ. ಅತೀ ಹೆಚ್ಚು ಸಂದರ್ಭಗಳಲ್ಲಿ ಆಡಳಿತ ನಡೆಸಿರತಕ್ಕವರು ಕಾಂಗ್ರೆಸ್‌ನವರೇ. ಅತಿ ಹೆಚ್ಚು ಬಾರಿ ಅಧಿಕಾರಕ್ಕೆ ತಮ್ಮನ್ನು ತಂದಿರತಕ್ಕಂತಹ ಜನ ಅವರಾಗಿದ್ದಾರೆ. ನಾವು ಇವತ್ತು ಏನೇ ಹೇಳಿದರೂ ಕೂಡ ಪರಿಶಿಷ್ಟ ಜನಾಂಗದವರು ಇವತ್ತು ನಮ್ಮ ಪಕ್ಷವನ್ನು ಬಿಟ್ಟು ನಿಮ್ಮ ಪಕ್ಷಕ್ಕೇ ಓಟು ನೀಡುತ್ತಾರೆ. ಕಾಂಗ್ರೆಸ್ ಪಕ್ಷ ನಮ್ಮದು ಎಂಬ ಭಾವನೆ ಅವರದು. ಕಾಂಗ್ರೆಸ್ ಏನನ್ನೂ ಮಾಡದೇ ಇದ್ದರೂ ಕೂಡ ಅಮಾಯಕರಾಗಿರತಕ್ಕಂಥ ಈ ಜನ ಓಟು ಹಾಕುವ ಜೀತದಾಳಾಗಿದ್ದಾರೆ. ಇವತ್ತು ಖಾಸಗಿ ವ್ಯಕ್ತಿಗಳಿಂದ ಕಾನೂನು ಪ್ರಕಾರ ಜೀತ ವಿಮುಕ್ತಿ ಮಾಡಿರಬಹುದು. ಆದರೆ ನಿಮ್ಮಿಂದ ಅವರಿಗೆ ಜೀತ ವಿಮುಕ್ತಿಯಾಗಲಿಲ್ಲ. ದಯವಿಟ್ಟು ನಿಮ್ಮ ಕಾಲದಲ್ಲಾದರೂ ಕೂಡ ಈ ಕೆಲಸವನ್ನು ಆ ಜನಾಂಗಕ್ಕೆ ಮಾಡಿ ಎಂದು ತಮ್ಮಲ್ಲಿ ಕೋರುತ್ತೇನೆ. ನಿಮ್ಮಿಂದ ಒಳ್ಳೆಯ ಕೆಲಸವಾಗಲಿ. ನಾವೆಲ್ಲರೂ ಸೇರಿ ಕರ್ನಾಟಕ ರಾಜ್ಯದ ಜನತೆಗೆ ಒಳ್ಳೆಯದನ್ನು ಮಾಡೋಣ. ಒಳ್ಳೆಯ ವಿಚಾರಕ್ಕೆ ಸಲಹೆ ಸಹಕಾರಗಳನ್ನು ಕೊಡಲಿಕ್ಕೆ ಈ ಭಾಗದವರು ಬದ್ಧರಾಗಿದ್ದೇವೆ. ಅನಾವಶ್ಯಕವಾಗಿ ನಾವು ನಿಮ್ಮನ್ನು ವಿರೋಧಿಸುವುದಿಲ್ಲ, ಎಲ್ಲಿ ನೀವು ತಪ್ಪುತ್ತೀರೋ ಅಂತಹ ಕಡೆ ನಾವು ನಿಮ್ಮನ್ನು ವಿರೋಧಿಸುತ್ತೇವೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

7. ಪ್ರಕಟಣೆ:

ಅಧ್ಯಕ್ಷರು: ಈಗೊಂದು ಪ್ರಕಟಣೆ ಇದೆ. ಬೆಳಿಗ್ಗೆ ಮಾನ್ಯ ಮುದ್ದಹನುಮೇಗೌಡರು ಮಾತನಾಡುವಾಗ ' ಇಂಟರ್‌ನಲ್ ಡೆಮಾಕ್ರಸಿ ಆಫ್ ದಿ ಹೌಸ್ ಇರಲಿಲ್ಲ ' ಎಂದು ಹೇಳಿದ್ದರು. ಆ ಪದಗಳನ್ನು ನಾನು ಕಡತದಿಂದ ತೆಗೆದು ಹಾಕುತ್ತಿದ್ದೇನೆ.

8. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ

+ಶ್ರೀ ಎ. ನಾಗರಾಜ್ (ಮಾಲೂರು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಏನು ಅವರ ಅನಿಸಿಕೆಯನ್ನು ಕರ್ನಾಟಕ ರಾಜ್ಯದ ಜನತೆಗೆ ಈ ಸಭೆಯ ಮುಖಾಂತರ ನೀಡಿದ್ದಾರೆ. ಬಹುಶಃ ಹೊಸ ಕಾಂಗ್ರೆಸ್ ಸರ್ಕಾರ ಮುಂದಿನ ಐದು ವರ್ಷಗಳಲ್ಲಿ ಯಾವ ಒಂದು ದಿಕ್ಸೂಚಿಯಲ್ಲಿ ಆಡಳಿತ ನಡೆಸಬೇಕು, ಅದಕ್ಕೆ ವಿರೋಧ ಪಕ್ಷದವರು ಯಾವ ಧಾಟಿಯಲ್ಲಿ ಸರ್ಕಾರಕ್ಕೆ ಮಾರ್ಗಸೂಚಿ ನೀಡಬೇಕೆಂಬ ಒಂದು ವಾದವನ್ನು ನಾನು ಇಲ್ಲಿ ಮುಂದಿಟ್ಟು ನನ್ನ ಕೆಲವಾರು ಅನಿಸಿಕೆಗಳನ್ನು ಈ ಸಭೆಯ ಮುಂದಿಡುವುದಕ್ಕೆ ಇಚ್ಛೆ ಪಡುತ್ತೇನೆ. ಸನ್ಮಾನ್ಯ ವಿರೋಧ ಪಕ್ಷದ ಸದಸ್ಯರೆಲ್ಲರೂ ಭಾಷಣ ಮಾಡುತ್ತಾ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನು ಕಾಂಗ್ರೆಸ್ ಪಕ್ಷ ಚುನಾವಣೆಗೆ ಮುನ್ನ ಪ್ರಣಾಳಿಕೆ ಕೊಟ್ಟಿತ್ತೋ ಅದನ್ನು ಸರಿಯಾಗಿ ಅಳವಡಿಸಲಿಲ್ಲ, ಜನತೆಯನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎಂಬ ಭಾವನೆಗಳನ್ನೂ ಸಹ ವ್ಯಕ್ತಪಡಿಸಿದರು. ಆದರೆ ಅವರು ಯೋಚನೆ ಮಾಡಬೇಕು, ಕೇವಲ 20 ದಿವಸಗಳ ಆಡಳಿತದಲ್ಲಿ ಯಾವ ತರಹವಾದಂತಹ ಹಿಂದಿನ ಸರ್ಕಾರ ಆಡಳಿತದಲ್ಲಿ ದುಷ್ಪರಿಣಾಮಗಳು ಉಂಟಾಗಿದ್ದವೋ ಅವುಗಳನ್ನು ಸರಿಪಡಿಸಿ ಒಂದು ಒಳ್ಳೆಯ ಆಡಳಿತವನ್ನು ನೀಡುವುದರಲ್ಲಿ ಪ್ರಯೋಜನಕಾರಿಯಾದಂತಹ ಸಲಹೆಗಳನ್ನು ವಿರೋಧ ಪಕ್ಷಗಳವರು ಕೊಟ್ಟಿಲ್ಲ ಎಂದು ಹೇಳಿದರೆ ಅತಿಶಯೋಕ್ತಿಯಲ್ಲ. ಮೂಲಭೂತವಾಗಿ ಯಾವುದೇ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ತಕ್ಷಣ ನಮ್ಮ ಆಡಳಿತ ಯೋಜನೆ ಈ ರಾಜ್ಯಕ್ಕೆ ಆರ್ಥಿಕವಾದಂತಹ ಬಲಿಷ್ಠವಾದಂತಹ ಬುನಾದಿ ಇದೆಯೇ? ಅಥವಾ ಹಿಂದಿನ ಸರ್ಕಾರದ ಆಡಳಿತದಿಂದ ಆರ್ಥಿಕ ಬುನಾದಿ ಅಲುಗಾಡಿದೆಯೇ? ಎಂಬ ಒಂದು ಪ್ರಶ್ನೆ ನಮ್ಮ ಮುಂದಿದೆ. ಆದರೆ ಹಿಂದಿನ ಸರ್ಕಾರದ ಆರ್ಥಿಕ ದುಷ್ಪರಿಣಾಮಗಳ ಬಗ್ಗೆ ನಾವು ಮಾತನಾಡಿಕೊಂಡು ಹೋದರೆ ಮುಂದೆ ನಾವೂ ಸಹಾ ಈ ರಾಜ್ಯಕ್ಕೆ ಒಳ್ಳೆಯ ಆಡಳಿತ ಮತ್ತು ಆರ್ಥಿಕವಾದಂತಹ ಸುಧಾರಣೆ ತರುವುದರಲ್ಲಿ ವಿಫಲರಾಗುತ್ತೇವೆಯೋ ಏನೋ ಎನ್ನುವಂತಹ ಒಂದು ಸಂಶಯ ನನ್ನಲ್ಲಿ ಇವತ್ತು ಉದ್ಭವವಾಗುತ್ತಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಯಾವುದೇ ಒಂದು ರಾಜ್ಯ ಪ್ರಗತಿ ಪಥದಲ್ಲಿ ನಡೆಯಬೇಕಾದರೆ ಮೂಲಭೂತವಾಗಿ ಆರ್ಥಿಕವಾದಂತಹ ಒಂದು ಸನ್ನಿವೇಶ ಮತ್ತು ಅದಕ್ಕೆ ಸ್ಪಂದಿಸುವಂತಹ ಆಡಳಿತ ಜೊತೆ ಜೊತೆಗೇ ಏನು ಸಮಸ್ಯೆಗಳಿವೆ ಬೃಹದಾಕಾರವಾಗಿ ಈ ರಾಜ್ಯದ ಜನಸಂಖ್ಯೆಯೇನು ಬೆಳೆಯುತ್ತಿದೆ, ಈ ಮೂರನ್ನೂ ಸಹಾ ಸಮನಾಗಿ ನಾವು ಆಡಳಿತ ಯಂತ್ರದಲ್ಲಿ ನಿಯಂತ್ರಣ ಮಾಡದೇ ಇದ್ದರೆ ನಿಜವಾಗಲೂ ಸಹಾ ನಮ್ಮ ಅನಿಸಿಕೆ ಏನಿದೆ ಅದನ್ನು ಜನತೆಗೆ ಮುಟ್ಟಿಸುವುದರಲ್ಲಿ ನಾವು ವಿಫಲರಾಗುತ್ತೇವೆಯೋ ಏನೋ ಎಂಬ ಮತ್ತೊಂದು ಸಂಶಯ ನನಗೆ ಉದ್ಭವವಾಗುತ್ತದೆ. ಆದರೆ ಆರ್ಥಿಕವಾಗಿ ಇಂತಹ ಒಂದು ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಬಹಳಷ್ಟು ಕಾರ್ಯಕ್ರಮಗಳನ್ನು ಇನ್ನು ಮುಂದೆ ಮಾಡುವಂತಹ ಪರಿಸ್ಥಿತಿಯನ್ನು ನಾವು ಉಂಟು ಮಾಡಿಕೊಳ್ಳುವಂತಹ ಉದ್ದೇಶವೂ ಸಹ ಬೇಕಾಗುತ್ತದೆ. ಇವತ್ತು ಬಹಳಷ್ಟು ಜನ ಸ್ನೇಹಿತರು ಮಾತನಾಡುತ್ತಾ ಸಾರ್ವಜನಿಕ ಉದ್ದಿಮೆಗಳು ಇಡೀ ರಾಜ್ಯದಲ್ಲಿ ಡೌನ್ ಟ್ರೆಂಡ್‌ನಲ್ಲಿ ಕೆಲಸ ಮಾಡುತ್ತಿವೆ ಎಂದು ಹೇಳಿದರು. ಸರ್ಕಾರಿ ಕಾರ್ಖಾನೆಗಳು ಏನಿವೆ,

ಅವು ಆರ್ಥಿಕವಾಗಿ ನಷ್ಟವನ್ನು ಅನುಭವಿಸಿ, ಪ್ರೊಡಕ್ಷನ್ ಮತ್ತು ಮ್ಯಾನೇಜ್‌ಮೆಂಟ್ ಸಮರ್ಪಕವಾಗಿಲ್ಲದೆ, ಇವತ್ತು ಅವುಗಳಿಗೆ ರಾಜ್ಯ ಸರ್ಕಾರದ ಬೊಕ್ಕಸದಿಂದ ನಾವು ಹಣ ಕೊಡುವ ಪರಿಸ್ಥಿತಿ ಉದ್ಭವವಾಗಿದೆ. ನಾವು ತಜ್ಞರ ಸಲಹೆ ಮೇರೆಗೆ ಆ ಡೌನ್ ಟ್ರೆಂಡ್ ಏನಿದೆ ಅದನ್ನು ಇವತ್ತು ಲಾಭದಾಯಕವಾದ ಪರಿಸ್ಥಿತಿಗೆ ಕೊಂಡೊಯ್ಯಬೇಕು. ಮತ್ತೆ ಹಂತ ಹಂತವಾಗಿ ಖಾಸಗೀಕರಣ ಮಾಡುವುದಕ್ಕೆ ಯೋಚನೆ ಮಾಡಿದರೆ ಒಳ್ಳೆಯದೆಂದು ನನಗನ್ನಿಸುತ್ತದೆ. ಈ ಕಮರ್ಷಿಯಲ್ ಟ್ಯಾಂಕ್ಸ್ ಡಿಪಾರ್ಟ್‌ಮೆಂಟ್ ಎಕ್ಸೈಜ್ ಇಲಾಖೆ ಏನಿದೆ, ಇದನ್ನು ಪೂರ್ಣವಾಗಿ ನಿಯಂತ್ರಣ ಮಾಡಿ, ಈ ಎರಡು ಡಿಪಾರ್ಟ್‌ಮೆಂಟ್ ಮೇಲೆ ನಿರ್ದಿಷ್ಟವಾದ ಕಲೆಕ್ಷನ್ ಬರುವ ಬೈಂಡಿಂಗ್ ಹಾಕದೆ ಇದ್ದರೆ ನಾವು ಆರ್ಥಿಕವಾಗಿ ಸುಧಾರಣೆ ಮಾಡುವುದರಲ್ಲಿ ವಿಫಲರಾಗುತ್ತೇವೆ, ಈ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಹಿಂದಿನ ಸರ್ಕಾರ ಜನತೆಯಿಂದ ದೂರ ಹೋಗುವುದಕ್ಕೆ ಕಾರಣವೇನೆಂದರೆ, ಅದರ ನಾನ್-ಪ್ಲ್ಯಾನ್ ಎಕ್ಸ್‌ಪೆಂಡೀಚರ್ ಜಾಸ್ತಿಯಾಯಿತು. ಕಳೆದ ಐದು ವರ್ಷಗಳಲ್ಲಿ ನಾನ್-ಪ್ಲ್ಯಾನ್ ಎಕ್ಸ್‌ಪೆಂಡೀಚರ್ ಎಷ್ಟು ಆಗಿದೆ ಎಂದರೆ, ಯಾವುದೇ ಸರ್ಕಾರಗಳು ಅಷ್ಟು ನಾನ್-ಪ್ಲ್ಯಾನ್ ಎಕ್ಸ್‌ಪೆಂಡೀಚರ್ ಮಾಡಿರಲಿಲ್ಲ. ಆದ್ದರಿಂದ ನಾವು ಸಹ ನಾನ್ ಪ್ಲ್ಯಾನ್ ಎಕ್ಸ್‌ಪೆಂಡಿಚರ್ ಮೇಲೆ ಕಡತವನ್ನು ಹಾಕಬೇಕು. ಮತ್ತು ಹಿಂದೆ ಐದು ವರ್ಷಗಳಲ್ಲಿ ಅಧಿಕಾರಿಗಳು ಮತ್ತು ಮಂತ್ರಿಗಳು ಹೊರ ದೇಶಗಳಿಗೆ ಎಷ್ಟು ಸಾರಿ ಹೋಗಿದ್ದರು ಎಂದರೆ, ಇಂದಿನ ಸರ್ಕಾರವಾಗಲಿ, ಬಹುಶಃ ನಮ್ಮ ಮುಂದಿನ ಸರ್ಕಾರವಾಗಲಿ ಅಷ್ಟು ಮಂತ್ರಿಗಳು ಹೊರದೇಶಕ್ಕೆ ಹೋಗುವುದಕ್ಕೆ ಅನುವು ಮಾಡಿ ಕೊಡುವುದಿಲ್ಲವೆಂದು ಕಾಣುತ್ತದೆ. ಇದು ನಾನ್ ಪ್ಲ್ಯಾನ್ ಎಕ್ಸ್‌ಪೆಂಡೀಚರ್ ಮೇಲೆ ಮತ್ತು ಸ್ಟೇಟ್ ಎಕ್ಸ್‌ಚೆಕರ್ ಮೇಲೆ ಬರ್ಡನ್ ಆಗಿ ಆಡಳಿತ ಕುಸಿತ ಮತ್ತು ಆರ್ಥಿಕವಾಗಿ ಡೌನ್ ಟ್ರೆಂಡ್ ಆಗುವುದಕ್ಕೆ ಮೂಲ ಕಾರಣ. ಸನ್ಮಾನ್ಯ ಮುಖ್ಯಮಂತ್ರಿಯವರು ಕಂಪ್ಯೂಟರ್ ರೆವಲ್ಯೂಷನ್ ಮಾಡುತ್ತೇವೆಂದು ಹೇಳಿದ್ದಾರೆ. ಬಹುಶಃ ಈ ಕಂಪ್ಯೂಟರ್ ರೆವಲ್ಯೂಷನ್ ಮಾಡಬೇಕಾದರೆ ಬರೀ ಅಧಿಕಾರಿಗಳಿಂದ ಸಾಧ್ಯವಿಲ್ಲವೆಂದು ನನಗನ್ನಿಸುತ್ತದೆ. ಕಂಪ್ಯೂಟರ್ ರೆವಲ್ಯೂಷನ್ ಆಗಬೇಕಾದರೆ ಒಬ್ಬ ಪೊಲಿಟಿಕಲ್ ಹೆಡ್ ಏನಿದ್ದಾರೆ, ಒಬ್ಬ ಮಂತ್ರಿಯಾಗಲಿ, ಅವರನ್ನು ಇನ್‌ಛಾರ್ಜ್ ಮಾಡಿ ಇದು ಸಮರ್ಪಕವಾಗಿ ಎಲ್ಲ ಆಯಾಮಗಳಲ್ಲಿ ರಾಜ್ಯದಲ್ಲಿ ಕೆಲಸ ಮಾಡುವ ಪರಿಸ್ಥಿತಿಯನ್ನು ನಾವು ಉಂಟು ಮಾಡಬೇಕಾಗಿದೆ. ಜಿಲ್ಲಾ ಆಡಳಿತದ ಮೇಲೆ ನೇರವಾದ ನಿರ್ಬಂಧನೆ ಇರಬೇಕು. ಮತ್ತು ನೇರವಾದ ಸಂಪರ್ಕ ಸಹ ಜಿಲ್ಲಾ ಆಡಳಿತದ ಮೇಲೆ ರಾಜ್ಯ ಆಡಳಿತ ವಹಿಸಿದರೆ ಮಾತ್ರ ಸರಿಯಾದ ಆಡಳಿತದ ಪ್ರತಿಫಲ ಈ ರಾಜ್ಯದ ಜನತೆಗೆ ಸಿಗುತ್ತದೆ. ಎಲ್ಲ ಡೆವಲಪ್‌ಮೆಂಟ್ ಪ್ರಾಜೆಕ್ಟ್‌ಗಳಾಗಲಿ, ಆರ್ಥಿಕ ಸುಧಾರಣೆಗಳಾಗಲಿ ಸರಿಯಾಗಿ ಫಲಪ್ರದವಾಗಿ ಈ ರಾಜ್ಯದ ಜನತೆಗೆ ಸಿಗಬೇಕಾದರೆ ನಾವು ಈ ಪಾಪುಲೇಷನ್ ಏನಿದೆ ಇದಕ್ಕೆ ಒಂದು ಪಾಲಿಸಿ ಮಾಡಬೇಕಾದ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ತಮಗೆ ಗೊತ್ತಿರಬಹುದು, ಡಾರ್ವಿನ್ ಎಲ್ಸ್‌ಗೆ ಅಮಿಬಾ ಸ್ಟೇಜ್‌ನಿಂದ ಮನುಷ್ಯನ ಸ್ಟೇಜ್ ಆದಮೇಲೆ ಸುಮಾರು ಕೋಟಿ ವರ್ಷಗಳವರೆಗೆ ಈ ಪ್ರಪಂಚದ ಜನಸಂಖ್ಯೆ 30 ಕೋಟಿ ಮಾತ್ರ ಇತ್ತು, ಆದರೆ ಏಸುಕ್ರಿಸ್ತ ಜನಿಸಿದ ಮೇಲೆ ಸುಮಾರು 2,000 ವರ್ಷಗಳಲ್ಲಿ ನಾವು 600 ಕೋಟಿಗೆ ಹೋಗಿದ್ದೇವೆ. ಈ 600 ಕೋಟಿ ಜನಸಂಖ್ಯೆಯ ಸಾಂದ್ರತೆ ಇವತ್ತು ಈ ಭೂಮಿ ಮೇಲೆ

ವಿಪರ್ಯಾಸ ಉಂಟು ಮಾಡುವುದರಲ್ಲಿ ತೊಡಗಿದೆ. ಆದರೆ ಒಂದು ಮಾತನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಏನೆಂದರೆ, ಇಡೀ ರಾಷ್ಟ್ರಕ್ಕೆ ಕಾಂಪ್ರಹೆನ್ಸೀವ್ ಪಾಪುಲೇಷನ್ ಪಾಲಿಸಿ ಬರುವುದಕ್ಕೆ ಇಲ್ಲಿ ಬಹಳ ಆಡಳಿತಾತ್ಮಕ ತೊಂದರೆಗಳಿವೆ. ಆದ್ದರಿಂದ ಕರ್ನಾಟಕಕ್ಕೆ ಒಂದು ಪಾಪುಲೇಷನ್ ಪ್ರಾಜೆಕ್ಟ್ ತರುವಂತಹ ಒಂದು ಆಯಾಮವನ್ನು ನಾವು ಮಾಡಬೇಕಾಗಿದೆ. ಇವತ್ತು ಗೋವಾದಲ್ಲಿ ಬರ್ತ್ ರೇಟ್ ಏನಿದೆ ಅಂದರೆ ಸಾವಿರ ಜನ ಪಾಪುಲೇಷನ್‌ಗೆ 14.2 ಇದೆ, ಉತ್ತರ ಪ್ರದೇಶದಲ್ಲಿ 35.5 ಇದೆ, ಡೆತ್ ರೇಟ್ ಸಹ ಮಿಜೋರಾಂನಲ್ಲಿ 4.8 ಇದೆ, ಮಧ್ಯಪ್ರದೇಶದಲ್ಲಿ 11 ಇದೆ. ಫೀಮೇಲ್ ಲಿಟ್ರಸಿ ಕರ್ನಾಟಕದಲ್ಲಿ 44.3 ಇದೆ, ಆಂಧ್ರದಲ್ಲಿ 32.7 ಪರ್ಸೆಂಟ್ ಇದೆ. ಕೇರಳದಲ್ಲಿ 86.7 ಪರ್ಸೆಂಟ್ ಇದೆ. ತಮಿಳುನಾಡಿನಲ್ಲಿ 52.3 ಪರ್ಸೆಂಟ್ ಇದೆ. ಅರ್ಬನ್ ಪಾಪುಲೇಷನ್ ಕರ್ನಾಟಕದಲ್ಲಿ 30.9 ಪರ್ಸೆಂಟ್ ಇದೆ. ಆಂಧ್ರದಲ್ಲಿ 26.9 ಇದೆ. ಕೇರಳದಲ್ಲಿ 26.4 ಪರ್ಸೆಂಟ್ ಇದೆ. ತಮಿಳುನಾಡಿನಲ್ಲಿ 34.2 ಪರ್ಸೆಂಟ್ ಇದೆ. ಪರ್ ಕ್ಯಾಪಿಟ ಇನ್‌ಕಮ್ ಕರ್ನಾಟಕದಲ್ಲಿ 2,171 ರೂಪಾಯಿಗಳಿದ್ದರೆ, ಆಂಧ್ರದಲ್ಲಿ 1,838 ಇದೆ. ಕೇರಳದಲ್ಲಿ 2,056 ರೂಪಾಯಿಗಳಿದೆ. ಈ ಎಲ್ಲ ಅಂಕಿ ಅಂಶಗಳ ಪ್ರಕಾರ ಇಡೀ ರಾಷ್ಟ್ರಕ್ಕೆ ಕಾಂಪ್ರೆಹೆನ್ಸೀವ್ ಪಾಪುಲೇಷನ್ ಪಾಲಿಸಿ ತರುವುದಕ್ಕೆ ಆಡಳಿತಾತ್ಮಕ ಎಡರು ತೊಡರುಗಳು ಇರುವುದರಿಂದ ಕರ್ನಾಟಕಕ್ಕೆ ಹೊಸ ಸರ್ಕಾರ ತತ್‌ಕ್ಷಣ ಒಂದು ಪಾಪುಲೇಷನ್ ಪಾಲಿಸಿ ತರುವುದಕ್ಕೆ ಪ್ರಯತ್ನ ಮಾಡಬೇಕು. ಇನು ಕೋಲಾರ ಜಿಲ್ಲೆಯ ಶಾಸಕರಾಗಿ ನಾನು ಕೆಲವಾರು ಅನಿಸಿಕೆಗಳನ್ನು ಈ ಸಭೆಯ ಮುಂದಿಡುವುದಕ್ಕೆ ಇಷ್ಟ ಪಡುತ್ತೇನೆ. ತಮಗೂ ಗೊತ್ತಿದೆ, ಕೋಲಾರ ಜಿಲ್ಲೆಯಲ್ಲಿ ಸುಮಾರು ಮೂರುವರೆ ಸಾವಿರ ಕೆರೆಗಳಿವೆ. ಇವತ್ತು ಹೂಳೆತ್ತಬೇಕೆಂದು ಸನ್ಮಾನ್ಯ ಬೈರೇಗೌಡರು ಭಾಷಣ ಮಾಡಿದರು, ಮಾನ್ಯ ಶ್ರೀನಿವಾಸಗೌಡರು ಭಾಷಣ ಮಾಡಿದರು, ನಾವು ಸಹ ಹೇಳುತ್ತಿದ್ದೇವೆ. ಇದುವರೆಗೆ ಕೆರೆಗಳ ಹೂಳೆತ್ತುವ ಕಾರ್ಯಕ್ರಮ ಏನಾಗಿದೆ ಎಂದರೆ, ಅದು ಸರಿಯಾಗಿ ಫಲಪ್ರದ ನೀಡಲಿಲ್ಲ. ಏಕೆಂದರೆ ಆ ಹೂಳೆತ್ತುವ ಕಾರ್ಯಕ್ರಮಕ್ಕೆ ವೈಜ್ಞಾನಿಕವಾದ ಮತ್ತು ತಾಂತ್ರಿಕವಾದ ಒತ್ತನ್ನು ನಾವು ಕೊಟ್ಟಿಲ್ಲ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಬಹುಶಃ ಒಂದು ಕೆರೆ ಹೂಳೆತ್ತುವುದಕ್ಕೆ ಪ್ರಾರಂಭವಾದರೆ, ಅಲ್ಲಿ ಸ್ವಲ್ಪ ಒಂದು ಹದ ಮಳೆ ಬಂದರೆ ನೀರು ತುಂಬಿದಾಗ ಆ ಟ್ಯಾಂಕನ್ನು ಅವರು ಬಿಟ್ಟು ಬಿಡುತ್ತಾರೆ. 3-4 ವರ್ಷ ಆ ಟ್ಯಾಂಕ್ ಸುದ್ದಿಗೆ ಹೋಗುವುದಿಲ್ಲ. ನಮ್ಮ ಸರ್ಕಾರ ಇದ್ದಾಗ ಅಷ್ಟೇ, ಅವರ ಸರ್ಕಾರ ಇದ್ದಾಗ ಅಷ್ಟೇ. ಈ ಬಗ್ಗೆ ನನ್ನ ಅನಿಸಿಕೆ ಏನೆಂದರೆ, ಯಾವುದೇ ಒಂದು ಕೆರೆಗೆ ನೀವು ಹೂಳೆತ್ತುವ ಕಾರ್ಯಕ್ರಮ ಪ್ರಾರಂಭ ಮಾಡುವುದಕ್ಕೆ ಮೊದಲು ಫೀಡಲ್ ಛಾನಲ್ ಏನಿದೆ ಅದನ್ನು ಡೈವರ್ಟ್ ಮಾಡಿ ಪೂರ್ಣವಾಗಿ ಡೀಸಿಲ್ಟಿಂಗ್ ಮಾಡಿದರೆ ಅದರ ಪ್ರಯೋಜನ ಸಿಗುತ್ತದೆಯೇ ಹೊರತು ಸುಮ್ಮನೆ ಟ್ರ್ಯಾಕ್ಟರ್ ನಿಲ್ಲಿಸುವುದು, ಮಣ್ಣು ತೆಗೆಯುವುದು ಮಾಡಿದರೆ ನಿಜವಾಗಿ ಅದು ಅರ್ಧಂಬರ್ಧ ಕೆಲಸವಾಗಿ ಅದರಿಂದ ಯಾರಿಗೂ ಫಲಿತಾಂಶ ಸಿಗುವುದಿಲ್ಲ. ಈ ದಿಶೆಯಲ್ಲಿ ನನ್ನ ಇನ್ನೊಂದು ಅನಿಸಿಕೆ ಏನೆಂದರೆ ಹಿಂದೆ ಈ ವಿಚಾರದಲ್ಲಿ ಒಂದು ಕಮಿಟ್‌ಮೆಂಟ್ ಇತ್ತು. ಅದೇನೆಂದರೆ ಟ್ಯಾಂಕ್ ಅಥಾರಿಟಿಯನ್ನು ಮಾಡಿ ಕೆರೆಗಳ ಸರ್ವತೋಮುಖ ಅಭಿವೃದ್ಧಿ ಮಾಡುತ್ತೇವೆ ಎಂಬುದಾಗಿ ಇತ್ತು. ತಾವು ದಯಮಾಡಿ ಇದಕ್ಕೆ ಸೂಚನೆ ನೀಡಬೇಕು. ತಾವು ತತ್‌ಕ್ಷಣ ಈ ಟ್ಯಾಂಕ್ ಅಥಾರಿಟಿಯನ್ನು ಫಾರಂ ಮಾಡಿ ಕೋಲಾರ ಜಿಲ್ಲೆ ಹಾಗೂ ಬೆಂಗಳೂರು ಡಿವಿಜನ್‌ಗಳು

ಏನಿವೆ, ಇಲ್ಲಿ ಹೆಚ್ಚು ಕೆರೆಗಳು ಇರುವುದರಿಂದ ಆ ದಿಶೆಯಲ್ಲಿ ನಾವೆಲ್ಲರೂ ಕಾರ್ಯೋನ್ಮುಖರಾಗಬೇಕಾಗುತ್ತದೆ. II ಇನ್ನು ಪವರ್ ಪ್ರಾಬ್ಲಂ ಬಗ್ಗೆ ಹೇಳಬೇಕೆಂದರೆ ನೆಕ್ಸ್ಟು ಡಿಫೆನ್ಸ್, ಪವರ್ ಪ್ರಾಬ್ಲಂ ಈ ದೇಶದಲ್ಲಿ ಆಗಿದೆ. ನಾವು ಡಿಫೆನ್ಸ್‌ಗೆ ಹೇಗೆ ಪ್ರಿಯಾರಿಟಿ ಕೊಡುತ್ತೇವೆಯೋ ಅದೇ ರೀತಿಯಲ್ಲಿ ಪವರ್‌ಗೆ ಎರಡನೆಯ ಪ್ರಿಯಾರಿಟಿಯನ್ನು ಕೊಡಬೇಕೆಂಬುದು ನನ್ನ ಅನಿಸಿಕೆಯಾಗಿದೆ. ಇದಕ್ಕೆ ಏಕೆ ಆದ್ಯತೆಯನ್ನು ಕೊಡಬೇಕೆಂದರೆ, ಇದರಲ್ಲಿ ನಾವೇನಾದರೂ ಫೇಲ್ ಆದರೆ ಇಡೀ ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಕುಸಿತವನ್ನು ಕಾಣುತ್ತೇವೆ. ಆದುದರಿಂದ ಈ ದಿಶೆಯಲ್ಲಿ ನಾವು ಗಮನಹರಿಸಬೇಕಾಗುತ್ತದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ಲೋಡ್ ಸೆಕ್ಟರ್ ಆಗಿದೆ, ಈ ಸೆಕ್ಟರ್‌ನಲ್ಲಿ ಯಾವುದೇ ಪೂರ್ಣವಾದ ಜನರೇಟಿಂಗ್ ಸ್ಟೇಷನ್ ಇಲ್ಲ, ಯಲಹಂಕದಲ್ಲಿ ಒಂದು ಜನರೇಟಿಂಗ್ ಸ್ಟೇಷನ್ ಇದೆ. ಅಲ್ಲಿ ಸುಮಾರು 150 ಮೆಗಾವ್ಯಾಟ್ಸ್ ಪವರ್‌ನ ಡೀಸೆಲ್ ಜನರೇಟಿಂಗ್ ಸ್ಟೇಷನ್ ಇದೆ. ಅದನ್ನು ಪಿಕ್ ಲೋಡ್‌ಗೆ ಉಪಯೋಗಿಸುತ್ತಿದ್ದಾರೆ. ಆದರೆ ಸರಿಯಾದಂತಹ ರೀತಿಯಲ್ಲಿ ನಾವು ಪವರ್ ಅನ್ನು ಮ್ಯಾನೇಜ್ ಮಾಡಬೇಕೆಂದರೆ ಜನರೇಟಿಂಗ್ ಸ್ಟೇಷನ್‌ನಿಂದ 400 ಕೆ.ವಿ. ಲೈನ್ ಅನ್ನು ಬೆಂಗಳೂರಿಗೆ ತರಬೇಕಾಗುತ್ತದೆ. ಇಡೀ ರಾಜ್ಯದಲ್ಲೆ ಬಹಳಷ್ಟು ಐ.ಪಿ. ಸೆಟ್ಸ್‌ಗಳನ್ನು ಹೊಂದಿರುವಂತಹ ಜಿಲ್ಲೆ ಎಂದರೆ ಕೋಲಾರ, ಇದು ಎರಡನೆಯ ಸ್ಥಾನದಲ್ಲಿದೆ. ಆದುದರಿಂದ ತಾವು ಅಲ್ಲಿ 400 ಕೆ.ವಿ. ಸಬ್-ಸ್ಟೇಷನ್ ಒಂದನ್ನು ಮಾಡಬೇಕಾಗುತ್ತದೆ. ಈಗಾಗಲೇ 400 ಕೆ.ವಿ. ಸಬ್‌ಸ್ಟೇಷನ್ ಬಗ್ಗೆ ತಜ್ಞರು ಸರ್ವೆ ಮಾಡಿದ್ದಾರೆ, ತಾವು ಇದರ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. II ಇನ್ನು ನಮ್ಮ ಕೋಲಾರ ಜಿಲ್ಲೆಯಲ್ಲಿ ಶಿಕ್ಷಣ ಯಾವ ಮಟ್ಟಕ್ಕೆ ಇಳಿದಿದೆ ಎಂದರೆ ಬಹುಶಃ 7ನೇ ತರಗತಿಯ ಪರೀಕ್ಷೆ, 10ನೇ ತರಗತಿಯ ಪರೀಕ್ಷೆ ಹಾಗೂ ಪಿ.ಯು.ಸಿ. ಪರೀಕ್ಷೆಯಲ್ಲಿ ಸ್ಟೇಟ್ ಆವರೇಜ್ ತೆಗೆದುಕೊಂಡರೆ ನಮ್ಮ ಕೋಲಾರ ಜಿಲ್ಲೆ ಬಹಳ ಕೆಳಗೆ ಇದೆ. ಆದುದರಿಂದ ಇದಕ್ಕೆ ಶಿಕ್ಷಣ ಇಲಾಖೆಯಿಂದ ಸರಿಯಾದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇದಕ್ಕೆ ಏನೇನು ಕಾರ್ಯಕ್ರಮಗಳು ಎಂದರೆ ಡಿಸೆಂಬರ್ ತಿಂಗಳಿಂದ ಮಾರ್ಚ್ ತಿಂಗಳವರೆಗೂ ಪರೀಕ್ಷೆಗೆ ಕೊಡುವಂತಹ ತರಬೇತಿ ಕೊಡುವಂಥಾದ್ದಕ್ಕೆ ಸರ್ಕಾರ ಹೆಚ್ಚಿನ ಒತ್ತನ್ನು ಕೊಡುವಂತೆ ಸಂಬಂಧಪಟ್ಟವರಿಗೆ ಡೈರೆಕ್ಷನ್ ಕೊಡಬೇಕು. ಇದಕ್ಕೆ ಬೇಕಾದಂತಹ ಸ್ಪೆಷಲ್ ಕ್ಲಾಸ್‌ಗಳನ್ನು ಮಾಡಿ, ಇದಕ್ಕೆ ಇಂಡಿವಿಜ್ಯುಯಲ್ ಅಟೆನ್‌ಕ್ಷನ್ ಕೊಡುವಂತಹ ಕಾರ್ಯಕ್ರಮಕ್ಕೆ ಶಿಕ್ಷಣ ಇಲಾಖೆಯವರು ಗಮನ ಕೊಡಬೇಕೆಂದು ನನಗನ್ನಿಸಿದೆ. II ಇನ್ನು ಮೊನ್ನೆ ದಿವಸ ಮಾನ್ಯ ಸಚಿವರಾದ ಶ್ರೀ ಹೆಚ್.ಸಿ. ಶ್ರೀಕಂಠಯ್ಯನವರು ಇಡೀ ಜಿಲ್ಲೆಯಲ್ಲಿ ಪ್ರವಾಸ ಮಾಡಿದರು. ಮಾನ್ಯ ಸಚಿವರು ಜಿಲ್ಲೆಯ ಅಭಾವ ಪರಿಸ್ಥಿತಿಯ ಬಗ್ಗೆ ಅಧ್ಯಯನ ಮಾಡಿದರು. ಎಲ್ಲೆಲ್ಲಿ ಕುಡಿಯುವ ನೀರಿಗೆ ಹಾಹಾಕಾರವಾಗಿದೆ ಮತ್ತು ಸುಮಾರು ಐದು ವರ್ಷಗಳಿಂದ ರಸ್ತೆಗಳ ಅಭಿವೃದ್ಧಿಯಲ್ಲಿ ಎಷ್ಟು ಕುಂಠಿತವಾಗಿದೆ, ಇವೆಲ್ಲವನ್ನೂ ಅಧ್ಯಯನ ಮಾಡಿ ಇದಕ್ಕೆ ಈಗಾಗಲೇ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದು ನಿಜವಾಗಿಯೂ ಆಡಳಿತದಲ್ಲಿ ಒಳ್ಳೆಯ ಸೂಚನೆಯನ್ನು ತರುವಂತಹ ವಿಚಾರವಾಗಿದೆ. ಇನ್ನು ಬಹಳಷ್ಟು ಅನಿಸಿಕೆಗಳನ್ನು ಈ ಸಭೆಯ ಮುಂದಿಡುವಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಆದರೂ ತಾವು ನನಗೆ ಈ ಸಭೆಯಲ್ಲಿ ಮಾತನಾಡಲು ಇಷ್ಟು ಅವಕಾಶವನ್ನು ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು): ಮಾನ್ಯ ಅಧ್ಯಕ್ಷರೆ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇಲ್ಲಿ ಒಂದು ಸರ್ಕಾರ ಅಧಿಕಾರಕ್ಕೆ ಬಂದಾಗ ಅದು ಪೂರ್ಣಾವಧಿ ಸರ್ಕಾರ ನಡೆಸಿದರೆ ಆಗ ನಾವು ಮಾನ್ಯ ರಾಜ್ಯಪಾಲರ ಭಾಷಣವನ್ನು ಕೇಳುತ್ತೇವೆ. ಹಾಗೆ ಪ್ರಥಮ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಐದು ವರ್ಷಗಳಲ್ಲಿ ಯಾವ ರೀತಿಯಲ್ಲಿ ಆಡಳಿತ ನಡೆಸುತ್ತದೆನ್ನುವುದನ್ನು ತೋರಿಸುವಂತಹ ಒಂದು ಚಿತ್ರಣವನ್ನು ಕೊಡುತ್ತೇವೆ. ಇನ್ನು ಐದು ವರ್ಷಗಳ ಮೊದಲು ಕೊಡುವಂತಹ, ಆ ವರ್ಷ ಯಾವ ರೀತಿಯಲ್ಲಿ ಆಡಳಿತ ನಡೆಸುತ್ತಾರೆನ್ನುವುದರ ಚಿತ್ರಣವನ್ನು ನಾವು ನೋಡುತ್ತಾ ಬಂದಿದ್ದೇವೆ. ಆದರೆ ಸುಮಾರು ವರ್ಷಗಳಿಂದ ರಾಜ್ಯಪಾಲರ ಭಾಷಣವನ್ನು ಹಾಗೂ ಆಯವ್ಯಯವನ್ನು ಮಂಡನೆ ಮಾಡುವಂಥಾದ್ದನ್ನು ನೋಡಿದಾಗ ಈ ಎರಡಕ್ಕೂ ತಾಳೆ ಹಾಕುವಂತಹ ಪರಿಸ್ಥಿತಿ ನಿರ್ಮಾಣವಾಗುವುದನ್ನು ನಾವು ನೋಡುತ್ತಾ ಬಂದಿದ್ದೇವೆ. ಹಾಗಾಗಿ ಈ ರಾಜ್ಯಪಾಲರ ಭಾಷಣಕ್ಕೂ ಮತ್ತು ಸರ್ಕಾರದ ಆಡಳಿತ ವೈಖರಿಗೂ ಸಮೀಪವಿರಬೇಕೆಂಬುದು ನನ್ನ ಮನವಿಯಾಗಿದೆ. ಇದನ್ನು ಈ ಸರ್ಕಾರ ಮಾಡುತ್ತದೆಂಬ ವಿಶ್ವಾಸದಿಂದ ನಾನು ಹೇಳುತ್ತೇನೆ. ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ಓದುವಂತಹ ಸಂದರ್ಭದಲ್ಲಿ ಪ್ಯಾರ:6ರಲ್ಲಿ ಓದಿದೆ, ಇಲ್ಲಿ ಹಲವಾರು ಕಾರಣಗಳಿಂದಾಗಿ ರಾಜ್ಯದಲ್ಲಿ ಪ್ರಾದೇಶಿಕವಾಗಿರುವಂತಹ ಅಸಮತೋಲನವನ್ನು ಸರ್ಕಾರ ಗುರುತಿಸಿದೆ ಎನ್ನುವುದನ್ನು ನೋಡಿ ನನಗೆ ಬಹಳಷ್ಟು ಸಂತೋಷವಾಯಿತು. ಇದರಲ್ಲಿ ನನ್ನ ಜಿಲ್ಲೆಯೂ ಸೇರಿಸಬಹುದು. ನನ್ನ ಜಿಲ್ಲೆಗೆ ಆಗಿರುವಂತಹ ಅನ್ಯಾಯವನ್ನು ಸರಿಪಡಿಸಿಕೊಡಬಹುದೆಂದು ನಾನು ಚಿಂತನೆ ಮಾಡುತ್ತಿದ್ದೇನೆ. ಮಾನ್ಯ ಎಸ್.ಜಿ. ನಂಜಯ್ಯನಮಠ್‌ರವರು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಒಂದು ಭಾಗದಲ್ಲಿರುವಂತಹ ಚಿತ್ರಣವನ್ನು ಮಾತ್ರ ಸಭೆಯ ಮುಂದಿಟ್ಟು ಅವರು ವಂದನೆಯನ್ನು ಸಲ್ಲಿಸುವಂಥಾದ್ದಕ್ಕೆ ಪ್ರಯತ್ನ ಮಾಡಿದರು. ಆದರೆ ನನ್ನ ಅನಿಸಿಕೆಯ ಪ್ರಕಾರ ಚಿಕ್ಕಮಗಳೂರು ಜಿಲ್ಲೆಯ ಬಗ್ಗೆ ಹೇಳುವುದಾದರೆ, ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಯಾವುದೇ ಸರ್ಕಾರಗಳಿಂದ ಅಲ್ಲಿ ದೊಡ್ಡ ದೊಡ್ಡ ಅಭಿವೃದ್ಧಿ ಕಾರ್ಯಕ್ರಮಗಳು ಯಾವುದು ನಡೆಯಲಿಲ್ಲ. ಇದಕ್ಕೆ ನಮ್ಮಲ್ಲಿ ಒಂದು ಗಾದೆ ಇದೆ, ಏನೆಂದರೆ " ದುಡಿಯುವ ಮಗನಿಗೆ ಸ್ವಲ್ಪ ಜಾಸ್ತಿ ಊಟಕ್ಕೆ ಇಡು " ಎಂದು ಹೇಳುತ್ತಾರೆ. ನಮ್ಮ ಜಿಲ್ಲೆ ದುಡಿಯುವ ಮಗನಾದರೂ ಸಹಿತ ಅದನ್ನು ಉಪವಾಸಕ್ಕೆ ಕೆಡವುತ್ತಿದ್ದಾರೆ. ಈ 40 ವರ್ಷಗಳಲ್ಲಿ ಬಂದಂತಹ ಎಲ್ಲಾ ಸರ್ಕಾರಗಳು ಇದೇ ರೀತಿಯಲ್ಲಿ ಉಪವಾಸವನ್ನು ಕೆಡುವುತ್ತಾ ಬಂದಿದ್ದಾರೆ. ನಮ್ಮ ಜಿಲ್ಲೆ ಯಾವ ರೀತಿಯಾಗಿ ಸರ್ಕಾರಕ್ಕೆ ಆದಾಯವನ್ನು ಕೊಡುತ್ತಿದೆ ಎಂದರೆ ನನ್ನ ಜಿಲ್ಲೆಯಲ್ಲಿ ಸುಮಾರು 80,417 ಎಕರೆ ಕಾಫಿ ತೋಟವಿದೆ. ಈ ಕಾಫಿ ತೋಟದಲ್ಲಿ 75,640 ಟನ್ ಕಾಫಿಯನ್ನು ಬೆಳೆಯುತ್ತಿದ್ದಾರೆ, ಇದರಿಂದ ಕೇಂದ್ರಸರ್ಕಾರಕ್ಕೆ 1,346 ಕೋಟಿ ರೂಪಾಯಿಗಳ ವಿದೇಶಿ ವಿನಿಮಯ ದೊರೆಯುತ್ತಿದೆ. ಸುಮಾರು ಎಂಟು ನೂರು ಕೋಟಿ ರೂಪಾಯಿಗಳು ಕೇಂದ್ರಸರ್ಕಾರಕ್ಕೆ ಆದಾಯ ಬರುತ್ತಿದೆ. ರಾಜ್ಯ ಸರ್ಕಾರಕ್ಕೆ ನಲವತ್ತು ಕೋಟಿ ರೂಪಾಯಿಗಳ ಆದಾಯ ನನ್ನ ಜಿಲ್ಲೆಯಿಂದ ಬರುತ್ತಿದೆ. ಅದೇ ರೀತಿಯಲ್ಲಿ 'ಟೀ' ಯಿಂದಲೂ ಸ್ವಲ್ಪ ಭಾಗ ಮತ್ತು ಅಡಿಕೆಯಿಂದ ಬಹಳಷ್ಟು ಆದಾಯ ಬರುತ್ತಿದೆ, ಮತ್ತೆ ಭತ್ತ, ಏಲಕ್ಕಿ, ಮೆಣಸಿನಿಂದಲೂ

ಆದಾಯವನ್ನು ಕೊಡುತ್ತಿದ್ದೇವೆ. ಇದರ ಜೊತೆಗೆ ಕೆಮ್ಮಣ್ಣುಗುಂಡಿಯಿಂದ ನಾವು ವಿ.ಎಸ್.ಐ.ಎಲ್.ಗೆ ಎಪ್ಪತ್ತು ಸಾವಿರ ಟನ್ ಕಬ್ಬಿಣದ ಅದಿರನ್ನು ಪ್ರತಿವರ್ಷ ಕೊಡುತ್ತಿದ್ದೇವೆ. ಇದರಿಂದಲೂ ಸಹ ಸುಮಾರು ಎಪ್ಪತ್ತು ಲಕ್ಷ ರೂಪಾಯಿಗಳ ಆದಾಯ ಸರ್ಕಾರಕ್ಕೆ ಬರುತ್ತಿದೆ. ಇದೇ ರೀತಿಯಲ್ಲಿ ಕುದುರೆಮುಖ ಕಬ್ಬಿಣದ ಅದಿರು ಕಾರ್ಖಾನೆಗೆ ನಾವು ಕಬ್ಬಿಣದ ಅದಿರನ್ನು ಕೊಟ್ಟು ಎಪ್ಪತ್ತೇಳು ಕೋಟಿ ರೂಪಾಯಿಗಳ ಆದಾಯವನ್ನು ಕಂಪೆನಿಯವರಿಗೆ ಮಾಡುತ್ತಿದ್ದೇವೆ. ಈ ಕಂಪೆನಿಗೆ ನಿವ್ವಳ ಆದಾಯ ಇಪ್ಪತ್ತೈದು ಕೋಟಿ ರೂಪಾಯಿಗಳು ಇದೆ. ನಮ್ಮ ಜಿಲ್ಲೆಯು ಇಷ್ಟೆಲ್ಲಾ ಆದಾಯವನ್ನು ಕೊಡುತ್ತಿದೆ. ಈ ಸರ್ಕಾರಗಳು ಬಂದು 40-42 ವರ್ಷಗಳಿಂದ ನಮ್ಮ ಜಿಲ್ಲೆಗೆ ಏನು ಮಾಡಿದೆ ಎನ್ನುವುದನ್ನು ಹೇಳಬೇಕಾಗುತ್ತದೆ. ನನ್ನ ಜಿಲ್ಲೆಯಲ್ಲಿ ಐದು ನದಿಗಳು ಹುಟ್ಟುತ್ತವೆ. ಇವತ್ತು ಬಯಲು ಸೀಮೆಯಲ್ಲಿ ಯಾವುದೇ ನೀರಾವರಿ ಕಾರ್ಯಕ್ರಮಗಳನ್ನು ರೂಪಿಸಿಲ್ಲ. ರಾಜ ಮಹಾರಾಜರು ಕಟ್ಟಿಸಿರುವಂತಹ ಅಯ್ಯನ್ ಕೆರೆ ಮತ್ತು ಮಗದ ಕೆರೆಗಳು ಇವೆ, ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ 1300 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿರುವಂಥಾದ್ದು ನನಗೆ ಹೆಮ್ಮೆ ಅನಿಸುತ್ತಿದೆ. ನನ್ನ ಜಿಲ್ಲೆಯಲ್ಲಿರತಕ್ಕಂಥ ಜನರು ಏನು ಕೇಳುತ್ತಿದ್ದಾರೆಂದರೆ ರಾಜಮಹಾರಾಜರು ಕಟ್ಟಿರುವಂತಹ ಈ ಎರಡು ಕೆರೆಗಳಿಗೆ ಕನಿಷ್ಟ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಕೊಟ್ಟು ಚಾನಲ್‌ಗಳನ್ನು ರಿಪೇರಿ ಮಾಡಿಸಿ ಈ ಕೆರೆಗಳ ಅಭಿವೃದ್ಧಿ ಮಾಡುವಂತಹ ಕಾರ್ಯಕ್ರಮಗಳನ್ನು ಮಾಡಲಿಲ್ಲವೆಂದರೆ ಹೇಗೆ ಎಂದು ಕೇಳುತ್ತಾರೆ. ಆದುದರಿಂದ ಈ ಕೆರೆಗಳ ಅಭಿವೃದ್ಧಿಗಾಗಿ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡು ಆ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. II

ಇನ್ನು ನನ್ನ ಜಿಲ್ಲೆಯಲ್ಲಿ ಐದು ನದಿಗಳು ಹರಿಯುತ್ತಿದ್ದರೂ ಸಹಿತ ಅತಿವೃಷ್ಟಿ ಹೆಚ್ಚು ಆಗುತ್ತಿದೆ, ಮತ್ತೆ ಮಲೆನಾಡು ಪ್ರದೇಶಗಳಲ್ಲಿ ಭೂಮಿ ಸವಕಲು ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ಭೂಮಿ ಸವಕಲು ಆಗಿ ನೀರು ಕೊಡುವಂತಹ ಜಿಲ್ಲೆಗಳಿಗೆ, ಬಯಲು ಸೀಮೆಗಳಿಗೆ ನೀರು ಕೊಟ್ಟು ನೀರಾವರಿ ಪ್ರದೇಶವನ್ನಾಗಿ ಮಾಡುವಂಥಾದ್ದು ಆಗಿಲ್ಲವೆಂಬುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇನ್ನೊಂದು ವಿಷಯವೆಂದರೆ ನನ್ನ ಜಿಲ್ಲೆ ಶ್ರೀಮತಿ ಇಂದಿರಾಗಾಂಧಿಯವರಿಗೆ ಪುನರ್‌ಜನ್ಮ ಕೊಟ್ಟಂಥ ಜಿಲ್ಲೆ. ಅವರು ಇಲ್ಲಿ ರಾಜಕೀಯವಾಗಿ ಮತ್ತೆ ಪುನರ್‌ಜನ್ಮ ಪಡೆದರೂ ಸಹಿತ ಸಾಮಾಜಿಕವಾಗಿ, ಆರ್ಥಿಕವಾಗಿ ಎಲ್ಲವನ್ನೂ ಕೊಟ್ಟಂಥ ಜಿಲ್ಲೆ ರಾಜಕೀಯವಾಗಿ ಸಹ ಇಂಥ ಮಹಾನ್‌ವ್ಯಕ್ತಿಯನ್ನು ಕೊಟ್ಟಂಥ ಸಂದರ್ಭದಲ್ಲೂ ಸಹ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಾವು ಇಲ್ಲಿ ಕಾಣುತ್ತಿಲ್ಲ. ಅದೇ ರೀತಿ, ಅಲ್ಲಿ ಯಾವುದೇ ಒಂದು ಉನ್ನತ ಶಿಕ್ಷಣಕ್ಕೆ ಅನುಕೂಲವಾಗತಕ್ಕಂಥ ಮೆಡಿಕಲ್ ಕಾಲೇಜಾಗಲೀ, ಇಂಜಿನಿಯರಿಂಗ್ ಕಾಲೇಜಾಗಲೀ ಸರ್ಕಾರದ ವತಿಯಿಂದ ಸ್ಥಾಪನೆಯಾಗಿಲ್ಲ. ನಮ್ಮ ಜಿಲ್ಲೆಯಲ್ಲಿರತಕ್ಕಂಥ ಒಂದೇ ಒಂದು ಇಂಜಿನಿಯರಿಂಗ್ ಕಾಲೇಜು ಆದಿಚುಂಚನಗಿರಿ ಮಠದಿಂದ ಪ್ರಾರಂಭವಾಗಿರತಕ್ಕಂಥಾದ್ದೇ ಹೊರತು ಸರ್ಕಾರದಿಂದ ಯಾವುದೇ ಕಾರ್ಯಕ್ರಮವಾಗಿಲ್ಲ. ಒಂದು ಹಾರ್ಟಿಕಲ್ಚರ್ ಕಾಲೇಜನ್ನು ಮೂಡಿಗೆರೆಯಲ್ಲಿ ಸ್ಥಾಪನೆ ಮಾಡಿದ್ದರು. ಅದೂ ಕೂಡ ಅರ್ಧಂಬರ್ಧ ವ್ಯವಸ್ಥೆ ನಡೆದು ಪರಿಪೂರ್ಣ ಮಟ್ಟದಲ್ಲಿ ಅದನ್ನು ಪ್ರಾರಂಭ ಮಾಡಲು ಆಗಲಿಲ್ಲ. ನಮ್ಮ ಜಿಲ್ಲೆಯಲ್ಲಿ ಕೆಮ್ಮಣ್ಣುಗುಂಡಿ, ಹೊರನಾಡು, ಶೃಂಗೇರಿ, ಅಮೃತಾಪುರ, ಅಂಗಡಿ ಇದೆ. ಇಂಥ ಬಹಳಷ್ಟು ಪವಿತ್ರವಾಗಿರತಕ್ಕಂಥ

4.00 ಪಿ.ಎಂ.

ಕ್ಷೇತ್ರಗಳಿದ್ದರೂ ಸಹ ಪ್ರಾವಾಸೋದ್ಯಮ ಇಲಾಖೆಯಿಂದ ಕಳೆದ 40 ವರ್ಷಗಳಿಂದ ಒಂದೇ ಒಂದು ಕಾರ್ಯಕ್ರಮವನ್ನು ಯಾರೂ ರೂಪಿಸಲಿಲ್ಲ. ನಮ್ಮಲ್ಲಿ ಇಷ್ಟೆಲ್ಲಾ ನೋವಿದ್ದರೂ ಸಹ, ಈ ಸಲ ಒಂದು ಒಳ್ಳೆಯ ಸರ್ಕಾರ ಬಂದಿದೆ, ಆ ಸರ್ಕಾರ ನಮ್ಮ ಎಲ್ಲಾ ವಿಷಯಗಳಿಗೆ ಸ್ಪಂದನ ಮಾಡುತ್ತದೆ ಎಂದು ತಿಳಿದರೆ, ಯಾವುದೇ ಹಂತದಲ್ಲೂ ಸಹ ನಮ್ಮ ಜಿಲ್ಲೆಯ ಬಗ್ಗೆ ಯಾವುದೇ ಮಾತನ್ನು ರಾಜ್ಯಪಾಲರ ಭಾಷಣದಲ್ಲಾಗಲೀ ಅಥವಾ ಸರ್ಕಾರದ ವತಿಯಿಂದ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಂಡನೆ ಮಾಡಿರತಕ್ಕಂಥವರಾಗಲೀ ವಿಷಯವನ್ನು ಪ್ರಸ್ತಾಪ ಮಾಡದೇ ಇರುವುದು ನಮಗೆ ನೋವಾಗಿರತಕ್ಕಂಥ ಸಂಗತಿ. ಯಾವುದೇ ಕಾರಣದಿಂದ ನಮಗೆ ಬೇರೆ ರಾಜ್ಯ ಮಾಡಿಕೊಡಿ, ಮಲೆನಾಡು ರಾಜ್ಯ ಮಾಡಿಕೊಡಿ, ನಮ್ಮದೇ ಆಗಿರತಕ್ಕಂಥ ರಾಜ್ಯವನ್ನು ನಾವು ಮಾಡಿಕೊಂಡರೆ, ನಾವು ಸ್ವಿಟ್ಜರ್ಲೆಂಡ್ ರೀತಿಯಲ್ಲಿ ಇರಬಹುದು ಎನ್ನುವ ಭಾವನೆ ನಮ್ಮಲ್ಲಿ ಇಲ್ಲ. ನಾವು ಈ ರಾಜ್ಯದವರು, ಎಷ್ಟೇ ಕಷ್ಟವಾದರೂ ಸಹ ನಾವು ಈ ರಾಜ್ಯದಲ್ಲೇ ಇರುತ್ತೇವೆ. ಇನ್ನು ಮುಂದೆಯಾದರೂ ಸಹ ಅತ್ಯುತ್ತಮವಾಗಿರತಕ್ಕಂಥ ಸೌಲಭ್ಯಗಳನ್ನು ನಮ್ಮ ಜಿಲ್ಲೆಯ ಆದಾಯಕ್ಕೆ ತಕ್ಕಂತೆ ಮಾಡಿಕೊಡಿ. ಆದಾಯವನ್ನು ಪೂರ್ತಿ ಕೊಡಿ ಎಂದು ನಾವು ಕೇಳುವುದಿಲ್ಲ. ಕನಿಷ್ಟ ಕೆಲವು ಕಾರ್ಯಕ್ರಮಗಳನ್ನಾದರೂ ರೂಪಿಸದೇ ಹೋದರೆ ದುಡಿಯುವ ಮಗನನ್ನು ಉಪವಾಸ ಕೆಡವಿದ ಹಾಗೆ ಆಗುತ್ತದೆ. ಆ ದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳನ್ನಾದರೂ ಶಿಕ್ಷಣ ಕ್ಷೇತ್ರದಲ್ಲಿ, ಪ್ರವಾಸೋದ್ಯಮ ಕ್ಷೇತ್ರದಲ್ಲಿ, ನೀರಾವರಿ ಕ್ಷೇತ್ರದಲ್ಲಿ ರೂಪಿಸಲು ಈ ಸರ್ಕಾರ ಕಾಳಜಿ ವಹಿಸಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಪ್ರತಿಸಾರಿಯೂ ಸಹ ವಿಧಾನಪರಿಷತ್ತಿನಲ್ಲಿ ಮತ್ತು ಇಲ್ಲಿ, ಉತ್ತರ ಕರ್ನಾಟಕಕ್ಕೆ ಬಹಳ ಅನ್ಯಾಯವಾಗಿದೆ ಎಂದು ಹೇಳುತ್ತಲೇ ಇದ್ದಾರೆ, ನಾವು ಕೇಳುತ್ತಲೇ ಇದ್ದೇವೆ. ನಮ್ಮ ಜಿಲ್ಲೆಗೆ ಆಗಿರತಕ್ಕಂಥ ಅನ್ಯಾಯದ ಬಗ್ಗೆ ಹೇಳಬೇಕೆಂದರೆ, ನಮ್ಮ ಜಿಲ್ಲೆಗೆ ಏನೂ ಅಭಿವೃದ್ಧಿಕಾರ್ಯಗಳು ಏನು ಆಗಿಲ್ಲ. ಏನಾದರೂ ಆಗಿದ್ದರೆ ತಾನೇ ಅನ್ಯಾಯವಾಗಿದೆ ಎಂದು ಹೇಳುವುದು. ಏನೂ ಆಗಿಲ್ಲ ಎಂದರೆ ಅನ್ಯಾಯವಾಗುವ ಪ್ರಶ್ನೆಯೇ ಇಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ, ಒಂದು ಜಿಲ್ಲೆಯಿಂದ ಎಷ್ಟು ಆದಾಯ ಬರುತ್ತದೆ, ಎಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡುತ್ತೇವೆ ಎನ್ನುವ ಬಗ್ಗೆ ಪ್ರತಿ ಹತ್ತು ವರ್ಷಕ್ಕೆ ಒಂದು ಸಾರಿ ಒಂದು ಶ್ವೇತ ಪತ್ರವನ್ನು ಹೊರಡಿಸಲಿ. ಆಗ ಯಾರ್‍ಯಾರ ನೋವು ಎಷ್ಟು ಇದೆ ಎನ್ನುವುದು ಗೊತ್ತಾಗುತ್ತದೆ. ಉತ್ತರ ಕರ್ನಾಟಕವನ್ನು ಬೇರೆ ಮಾಡಿಕೊಳ್ಳುತ್ತೇವೆ, ಕೊಡಗು ರಾಜ್ಯವನ್ನು ಬೇರೆ ಮಾಡಿಕೊಳ್ಳುತ್ತೇವೆ ಎನ್ನುವ ಮಾತುಗಳೆಲ್ಲಾ ಏಕೆ ಬರಬೇಕು? ಒಂದು ಸಾರಿ ನಾವು ಕರ್ನಾಟಕ ರಾಜ್ಯ ಎಂದು ಒಪ್ಪಿಕೊಂಡ ಮೇಲೆ ಪ್ರತಿ ಜಿಲ್ಲೆಯಲ್ಲಿ ಆಗಿರತಕ್ಕಂಥ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಅದರ ಬಗ್ಗೆ ಒಂದು ಶ್ವೇತ ಪತ್ರವನ್ನು ಹೊರಡಿಸಿ ಅಂತಿಮವಾಗಿರತಕ್ಕಂಥ ತೆರೆಯನ್ನು ಎಳೆಯಬೇಕು ಎಂದು ಸರ್ಕಾರದಲ್ಲಿ ನನ್ನದೊಂದು ಮನವಿ. ನನ್ನ ಸ್ನೇಹಿತರಾದ ಮಾನ್ಯ ಆರಗ ಜ್ಞಾನೇಂದ್ರ ಅವರು ವಿಕೇಂದ್ರೀಕರಣದ ಬಗ್ಗೆ ಮಾತನಾಡಿದರು. ಒಂದೊಂದು ಸರ್ಕಾರ ಬಂದಾಗ ಒಂದೊಂದು ರೀತಿಯಾಗಿರತಕ್ಕಂಥ ವಿಕೇಂದ್ರೀಕರಣ ನೀತಿಯನ್ನು ಅನುಸರಿಸಿಕೊಂಡು ಬಂದಿದೆ. ಈ ಮುಂಚೆ ಗ್ರಾಮ ಪಂಚಾಯಿತಿ ವ್ಯವಸ್ಥೆ ಇತ್ತು. ಆಮೇಲೆ ಮಂಡಲ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ವ್ಯವಸ್ಥೆ ಬಂತು. ಅದನ್ನು ತೆಗೆದು ಹಾಕಿ ತ್ರೀ ಟೈಯರ್ ಸಿಸ್ಟಂ ಎಂದು ಗ್ರಾಮ ಪಂಚಾಯಿತಿ,

ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಎಂದು ಮಾಡಿದರು. ಆಮೇಲೆ ಗ್ರಾಮ ಪಂಚಾಯಿತಿಗಳು ಒಟ್ಟಾಗಿ ದೊಡ್ಡ ದೊಡ್ಡ ಗ್ರಾಮ ಪಂಚಾಯಿತಿಗಳನ್ನು ಮಾಡಬೇಕು ಎಂದು ಬಂತು. ಈಗ ಮತ್ತೆ ಸರ್ಕಾರ ಬೇರೆ ನೀತಿಯನ್ನು ಅನುಸರಿಸುತ್ತಿದೆ. ಈ ರೀತಿ ಪ್ರತಿ ಐದು ವರ್ಷಕ್ಕೊಮ್ಮೆ ಬದಲಾವಣೆ ಮಾಡುತ್ತಾ ಹೋದರೆ ಯಾವ ಸಂಘ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡಲು ಸಾಧ್ಯವಿದೆ? ಇದಕ್ಕೆ ನಿರ್ದಿಷ್ಟವಾಗಿರತಕ್ಕಂಥ ಯಾವುದಾದರೊಂದು ವ್ಯವಸ್ಥೆ ಬಂದು ಅವು ಎರಡು ಮೂರು ಟರ್ಮ್ ಕೆಲಸ ಮಾಡಿದರೆ ಆಗ ನಾವು ಅದರಲ್ಲಿನ ಲೋಪದೋಷಗಳನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಇದನ್ನು ಬಲಪಡಿಸಲು ಅನುವಾಗುವಂತೆ, ಕನಿಷ್ಟ ಎರಡು ಮೂರು ಟರ್ಮ್ ಆದರೂ ವಿಕೇಂದ್ರೀಕರಣ ವ್ಯವಸ್ಥೆ ಇರಬೇಕು ಎನ್ನತಕ್ಕಂಥಾದ್ದು ನನ್ನ ಒಂದು ಮನವಿ. ಚುನಾವಣೆಯ ಸಮಯದಲ್ಲಿ ತಾವು ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ನೋಡಿದ್ದೇವೆ, ನಗರ ಪ್ರದೇಶಗಳಲ್ಲಿ ಬಹಳಷ್ಟು ಹಣವನ್ನು ಅಂಡರ್‌ಗ್ರೌಂಡ್ ಡ್ರೈನೇಜ್, ರಸ್ತೆ ಇವೆಲ್ಲಕ್ಕೂ ನಾವು ಖರ್ಚು ಮಾಡುತ್ತೇವೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಏನಾಗಿದೆ ಎಂದರೆ ಗ್ರಾಮಗಳಲ್ಲಿರತಕ್ಕಂಥ ಕೊಳಚೆ ಹೊರಗೆ ಬರಲು ಆಗದೇ ಇರುವಂಥ ಪರಿಸ್ಥಿತಿ ಇದೆ. ಇದೇ ಪರಿಸ್ಥಿತಿ ಇನ್ನು ಐದಾರು ವರ್ಷಗಳ ಕಾಲ ಮುಂದುವರೆದರೆ ಪ್ರತಿ ಹಳ್ಳಿಗಳೂ ಸಹ ಕೊಳಗೇರಿಗಳಾಗಿ ಮಾರ್ಪಾಟು ಆಗತಕ್ಕಂಥ ಸ್ಥಿತಿ ಇದೆ. ಹಾಗಾಗಿ ನನ್ನ ಮನವಿ ಎಂದರೆ, ವಿಶೇಷವಾಗಿರತಕ್ಕಂಥ ಒಂದು ಕಾರ್ಯಕ್ರಮವನ್ನು ಗ್ರಾಮ ನೈರ್ಮಲ್ಯಕ್ಕಾಗಿ, ಗ್ರಾಮದಲ್ಲಿರತಕ್ಕಂಥ ಕೊಳಚೆ ನೀರನ್ನು ಹೊರಹಾಕಲು ಮತ್ತು ರಸ್ತೆ ಮಾಡಲು ವಿಶೇಷವಾಗಿರತಕ್ಕಂಥ ಅನುದಾನವನ್ನು ಗ್ರಾಮಪಂಚಾಯಿತಿಗೆ ಕೊಡತಕ್ಕಂಥ ನಿಟ್ಟಿನಲ್ಲಿ ಮಾಡಿ, ಗ್ರಾಮಗಳ ನೈರ್ಮಲ್ಯವನ್ನು ಕಾಪಾಡಲು ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಕೊನೆಯದಾಗಿ, ಅತಿವೃಷ್ಟಿಯಿಂದಾಗಿ ನಮ್ಮ ಜಿಲ್ಲೆಯಲ್ಲಿ ಸುಮಾರು 11.5 ಕೋಟಿ ರೂಪಾಯಿಗಳಷ್ಟು ಲುಕ್ಸಾನು ಆಗಿದೆ. ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟು, ಮಾನ್ಯ ಕಂದಾಯ ಸಚಿವರು ನನ್ನ ಜಿಲ್ಲೆಗೆ ಬಂದು ಹೋಗಿದ್ದಾರೆ. ಆದರೆ ಕೊಟ್ಟಿರುವ ಒಂದು ಕೋಟಿ ರೂಪಾಯಿ ಯಾವುದಕ್ಕೂ ಸಾಲದಾಗಿದೆ. ಹಾಗಾಗಿ ಇವತ್ತು ಇದಕ್ಕೆ ವಿಶೇಷವಾಗಿರತಕ್ಕಂಥ ಅನುದಾನವನ್ನು ಬಿಡುಗಡೆ ಮಾಡಿ ರಸ್ತೆ ಸಂಪರ್ಕ ಮತ್ತು ಕೆರೆಕಟ್ಟೆಗಳ ದುರಸ್ತಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿಸಿಕೊಡಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ನೀರಾವರಿ ಬಗ್ಗೆ ಮತ್ತು ಕೆ.ಇ.ಬಿ. ಬಗ್ಗೆ ಅನೇಕ ಜನ ಸ್ನೇಹಿತರುಗಳು ಮಾತನಾಡಿದ್ದಾರೆ. ನನ್ನ ಜಿಲ್ಲೆಗೆ ಅಬ್ಬೆ ಜಲಪಾತದಿಂದ ಬರತಕ್ಕಂಥ ನೀರಾವರಿ ಸೌಲಭ್ಯವನ್ನು ಮಾಡಿಕೊಡಬೇಕು ಎನ್ನತಕ್ಕಂಥಾದ್ದು ಒಂದು ಮನವಿ. 2 -3 ಸಬ್ ಸ್ಟೇಷನ್‌ಗಳನ್ನು ಮಾಡಿಕೊಟ್ಟು, ಕೆ.ಇ.ಬಿ. ಉತ್ತಮ ಸ್ಥಿತಿಯಲ್ಲಿ ವಿದ್ಯುತ್ತನ್ನು ಜನಗಳಿಗೆ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು ಎನ್ನುವ ಮಾತನ್ನು ಹೇಳಿ, ಸರ್ಕಾರ ಈ ನಿಟ್ಟಿನಲ್ಲಿ ನಮ್ಮ ಕೆಲವಾರು ಅನಿಸಿಕೆಗಳಿಗಾದರೂ ಸ್ಪಂದನ ಮಾಡಿ ನಮ್ಮ ಜಿಲ್ಲೆಗೆ ಮತ್ತು ನನ್ನ ಕ್ಷೇತ್ರಕ್ಕೆ ಆಗಬೇಕಾಗಿರತಕ್ಕಂಥ ಕೆಲಸಗಳನ್ನು ಮಾಡಿಕೊಡಬೇಕು ಎನ್ನುವ ಮಾತನ್ನು ಹೇಳಿ, ಇಷ್ಟು ಮಾತನಾಡಲು ನನಗೆ ಸಮಯ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ): ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ನಾನು ವಿರೋಧಿಸುತ್ತಾ, ಇವತ್ತು ಕರ್ನಾಟಕ ರಾಜ್ಯದಲ್ಲಿ ಜನಸಾಮಾನ್ಯರು ನಮ್ಮ ನಿರೀಕ್ಷೆಗೆ ಮೀರಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲವನ್ನು ಸೂಚಿಸಿದ್ದರಿಂದ ಅನಿರೀಕ್ಷಿತವಾಗಿ ಆಡಳಿತಕ್ಕೆ ಬಂದಿರುವುದಕ್ಕೋಸ್ಕರ ಅವರನ್ನು ಅಭಿನಂದಿಸುತ್ತಾ, ರಾಜ್ಯದ ಮುತ್ಸದ್ಧಿ ರಾಜಕಾರಣಿ, ಹಿರಿಯರಾದಂಥ ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿ ರಾಜ್ಯಕ್ಕೆ ಒಂದು ಒಳ್ಳೆಯ ಸರ್ಕಾರ, ಒಂದು ಒಳ್ಳೆಯ ಆಡಳಿತವನ್ನು ಕೊಡುತ್ತಾರೆ ಎಂದು ಹೇಳಿ ಜನಸಾಮಾನ್ಯರು ಬಹಳ ಹೆಚ್ಚಿನ ರೀತಿಯಲ್ಲಿ ನಿರೀಕ್ಷೆ ಮಾಡುತ್ತಿದ್ದಾರೆ. ಆದರೆ ಮೊದಲಲ್ಲೇ, ಪ್ರಥಮ ಬಾರಿಗೆ ಮಂತ್ರಿಮಂಡಲವನ್ನು ರಚನೆ ಮಾಡುವಾಗ ಅವರು ಎಡವಿದ್ದಾರೇನೋ ಎನ್ನುವ ಒಂದು ಅಪನಂಬಿಕೆ ಜನಸಾಮಾನ್ಯರಲ್ಲಿ ಬಂದಿದೆ.

(ಈ ಹಂತದಲ್ಲಿ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಮಾನ್ಯ ಕೆಂಗಲ್ ಹನುಮಂತಯ್ಯನವರು ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿದ್ದಾಗ, ಯಾವುದೇ ಒಂದು ಸರ್ಕಾರ ರಚನೆಯಾಗಬೇಕಾದರೆ ಇರತಕ್ಕಂಥ ವಿಧಾನಮಂಡಲದ ಸದಸ್ಯರ ಪೈಕಿ ಶೇ.10ರಷ್ಟು ಸದಸ್ಯರನ್ನೊಳಗೊಂಡಂಥ ಒಂದು ಮಂತ್ರಿಮಂಡಲವನ್ನು ರಚನೆ ಮಾಡಬೇಕು ಎಂದು ತೀರ್ಮಾನವನ್ನು ಆವತ್ತು ಕೊಟ್ಟಿದ್ದರು, ಅದನ್ನು ಅನುಷ್ಠಾನಕ್ಕೆ ತರಲು ಬದ್ಧರಾಗಿರಬೇಕಾಗಿರತಕ್ಕಂಥ ಒಂದು ಪಕ್ಷ, ಕಳೆದ ಸರ್ಕಾರ ಜಂಬೋಜೆಟ್ ಸರ್ಕಾರ ಎಂದು ವಿರೋಧ ಪಕ್ಷದಲ್ಲಿ ಕುಳಿತು ಟೀಕೆ ಮಾಡುತಿತದ್ದಂಥ ಸಂದರ್ಭ ನೆನಪಿಗೆ ಬರುತ್ತದೆ. ಆದರೆ ಇವತ್ತು ಅವರು ಆಡಳಿತ ಪಕ್ಷಕ್ಕೆ ಬಂದ ಮೇಲೆ ಜಂಬೋಜೆಟ್ ಹೋಗಿ ಏರ್‌ಬಸ್ ಮಂತ್ರಿಮಂಡವಾಗಿರತಕ್ಕಂಥಾದ್ದನ್ನು ನೋಡಿದರೆ ಕಳೆದ ಸರ್ಕಾರಕ್ಕೂ ಈ ಸರ್ಕಾರಕ್ಕೂ ಏನೂ ಭಿನ್ನವಿಲ್ಲ ಎನ್ನುವ ಒಂದು ಸಾಮಾನ್ಯ ಅಭಿಪ್ರಾಯ ಬರತಕ್ಕಂಥಾದ್ದು ಸಹಜವಾಗಿದೆ. ಈಗಾಗಲೇ 42 ಮಂದಿ ಸಚಿವರುಗಳಿದ್ದರೂ ಕೂಡ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳತಕ್ಕಂಥ ಊಹಾಪೋಹಗಳು ಹರಡಿರುವುದನ್ನು ನೋಡಿದರೆ ನಿಜಕ್ಕೂ ಕೂಡ ನಮ್ಮ ಕರ್ನಾಟಕದಲ್ಲಿ ಒಳ್ಳೆಯ ಆಡಳಿತವನ್ನು ನಿರೀಕ್ಷೆ ಮಾಡತಕ್ಕಂಥಾದ್ದು ಮೂರ್ಖತನವಾಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಮಾನ್ಯ ರಾಜ್ಯಪಾಲರ ಭಾಷಣವನ್ನು ಓದಿದಾಗ ಅದರಲ್ಲಿ ಮುಂದಿನ ಒಂದು ವರ್ಷಕ್ಕೆ ಸರ್ಕಾರದ ಕಾರ್ಯಕ್ರಮ ಯಾವ ರೀತಿ ಇರಬೇಕು ಎನ್ನುವ ಮಾರ್ಗಸೂಚಿಯನ್ನು ಕೊಡುವುದರ ಬದಲು ಇದು ಒಂದು ರಾಜಕೀಯ ಭಾಷಣದ ರೀತಿಯಲ್ಲಿ, ಬಹಳ ಲಘುವಾಗಿ ಇರತಕ್ಕಂಥಾದ್ದನ್ನು ನೋಡಿದರೆ ಆಶ್ಚರ್ಯ ಕೂಡ ಆಗುತ್ತದೆ. ಯಾವುದೇ ಒಂದು ಇಲಾಖೆಯ ಕಾರ್ಯಕ್ರಮವನ್ನು ಮತ್ತು ಅದರ ಸಂಪನ್ಮೂಲವನ್ನು ಕ್ರೋಢೀಕರಿಸುವಂಥ ರೀತಿ ಮತ್ತು ಅದು ಯಾವ ಯಾವ ಬಾಬಿಗೆ ಏನೇನು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎನ್ನುವ ಸವಿಸ್ತಾರವಾದಂಥ ಒಂದು ನೀತಿಯನ್ನು, ಸೂಚನೆಯನ್ನು ಕೊಡುವುದರಲ್ಲಿ ಪೂರ್ತಿ ವಿಫಲವಾಗಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಸಮಯದ ಮಿತಿ ಇರುವುದರಿಂದ ನಾನು ಪ್ರಥಮವಾಗಿ, ಇಂದು ಬೆಳಿಗ್ಗೆ ಚರ್ಚೆಯಾದಂಥ ಈರುಳ್ಳಿ ಮತ್ತು ಇತರ ವ್ಯವಸಾಯ ಪದಾರ್ಥಗಳ ಬೆಲೆ ಕುಸಿದು ಜನಸಾಮಾನ್ಯರಿಗೆ, ಅದರಲ್ಲೂ ರೈತರಿಗೆ

ಅನ್ಯಾಯವಾಗಿರುವುದರ ಬಗ್ಗೆ ಗಮನವನ್ನು ಸೆಳೆಯಲು ನಾನು ಇಷ್ಟಪಡುತ್ತೇನೆ. ಈ ಸದನದ ಸದಸ್ಯರ ಪೈಕಿ ಶೇಕಡ 75 ಭಾಗ ಗ್ರಾಮೀಣ ಪ್ರದೇಶಗಳಿಂದ ಬಂದಿರತಕ್ಕಂಥವರು, ಒಂದು ರೀತಿಯಲ್ಲಿ ರೈತಾಪಿವರ್ಗದವರೇ ಆಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಆದರೆ ಇದುವರೆಗಿನ 50 ವರ್ಷಗಳ ಇತಿಹಾಸದಲ್ಲಿ ಬಂದಂತಹ ಸರ್ಕಾರಗಳನ್ನು ನೋಡಿದಾಗ ಯಾವುದೇ ಸರ್ಕಾರ ಬಂದರೂ ಕೂಡ ರೈತರ ಬಗ್ಗೆ ವೇದಿಕೆಯ ಮೇಲೆ ಭಾಷಣಗಳನ್ನು ಮಾಡುತ್ತಾರೆ, ಅದೇ ರೀತಿ ಸರ್ಕಾರವನ್ನು ರಚನೆ ಮಾಡಿದಾಗ ವಿಧಾನಸಭೆಯಲ್ಲಿ ಕೂಡ ರೈತರ ಬಗ್ಗೆ ಅನೇಕ ಸಲ ಚರ್ಚೆಗಳಾಗುತ್ತವೆ. ಆದರೆ ಇದರ ಫಲಿಂತಾಶ ಮಾತ್ರ ಶೂನ್ಯವಾಗಿರುತ್ತದೆ. ರೈತ ಬಹಳ ನಿರಾಶೆಗೊಂಡಿದ್ದಾನೆ. ರೈತ ಬೆಳೆದಂಥ ಪದಾರ್ಥಗಳಿಗೆ ಈ ದೇಶದಲ್ಲಿ, ರಾಜ್ಯದಲ್ಲಿ ಸರಿಯಾದ ಬೆಲೆಯನ್ನು ಕಟ್ಟುವಂಥ ಸ್ವಾತಂತ್ರ್ಯ ಅವನಿಗೆ ಇಲ್ಲ. ಈ ವಿಷಯವನ್ನು ಅನೇಕ ಸಲ ಪ್ರಸ್ತಾಪ ಮಾಡಿದರೂ ಕೂಡ ಯಾವುದೇ ಸರ್ಕಾರ ಬಂದರೂ ರೈತರ ಬಗ್ಗೆ ಏಕೆ ಕಾಳಜಿ ವಹಿಸುತ್ತಿಲ್ಲ ಎಂಬುದು ನನಗಂತೂ ಅರ್ಥವಾಗುತ್ತಿಲ್ಲ. ಸರ್ಕಾರ ಮನಸ್ಸು ಮಾಡಿದರೆ ಅದೇನೂ ದೊಡ್ಡ ಕೆಲಸವಾಗುವುದಿಲ್ಲ. ಒಂದು ಸಿಕ್ ಇಂಡಸ್ಟ್ರಿ ಬಂದಾಗ ಅದನ್ನು ಸರಿದೂಗಿಸಲು ಸಾವಿರಾರು ಕೋಟಿ ರೂಪಾಯಿಗಳನ್ನು ವೇವ್ ಆಫ್ ಮಾಡುವ ಹಾಗೆ, ರೈತನು ಬೆಳೆದ ಪದಾರ್ಥಗಳ ಬೆಲೆ ಕುಸಿದಾಗ ಅವನಿಗೆ ನಷ್ಟವಾಗದ ರೀತಿಯಲ್ಲಿ ಸರ್ಕಾರದ ಕಡೆಯಿಂದ ನೂರಾರು ಕೋಟಿ ರೂಪಾಯಿಗಳು ಖರ್ಚಾದರೂ ಪರವಾಗಿಲ್ಲ, ಈ ಹಣದಿಂದ ರೈತರಿಗೆ ಅನುಕೂಲ ಮಾಡಿ ಅವನನ್ನು ಉಳಿಸಿಕೊಂಡರೆ ಮುಂದಿನ ವರ್ಷ ಅವನು ನಮಗೆ ಅನ್ನ ಕೊಡುತ್ತಾನೆ ಎನ್ನುವ ಸಾಮಾನ್ಯ ಪರಿಜ್ಞಾನವನ್ನು ಇಟ್ಟುಕೊಂಡು ರೈತನಿಗೆ ಸಮಯಕ್ಕೆ ಸರಿಯಾಗಿ ಸಹಕಾರವನ್ನು ಮತ್ತು ಬೆಂಬಲ ಬೆಲೆಯನ್ನು ಕೊಡುವುದು ಬಹಳ ಸೂಕ್ತ. ಈ ಆಲೂಗಡ್ಡೆ, ಮೆಣಸಿನಕಾಯಿ, ಈರುಳ್ಳಿ, ಹೊಗೆಸೊಪ್ಪು, ಮುಸುಕಿನಜೋಳ ಹೀಗೆ ಇವುಗಳ ಬೆಂಬಲ ಬೆಲೆಯನ್ನು ನೋಡಿದಾಗ ಅದು ಎಷ್ಟು ಬೆಂಬಲ ಬೆಲೆ ಇದೆಯೆಂದರೆ ಮಾರ್ಕೆಟಿನಲ್ಲಿ ಒಂದು ವಸ್ತುವಿಗೆ 100 ರೂಪಾಯಿಗಳು ಇದ್ದರೆ ಅದೇ ವಸ್ತುವಿನ ಬೆಂಬಲ ಬೆಲೆ 25 ರೂಪಾಯಿಗಳು ಆಗಿರುತ್ತದೆ. ಉದಾಹರಣೆಗೆ ಒಂದು ಕೇಜಿ ಹೊಗೆಸೊಪ್ಪನ್ನು ಬೆಳೆಯಬೇಕಾದರೆ ಸುಮಾರು 50 ರೂಪಾಯಿಗಳು ಖರ್ಚಾಗುತ್ತದೆ ಮತ್ತು ಅದೇ ಒಂದು ಕೇಜಿಗೆ ಮಾರ್ಕೆಟಿನಲ್ಲಿ 68 ರೂಪಾಯಿಗಳಿಗೆ ಮಾರಾಟವಾಗುತ್ತದೆ. ಆದರೆ ಇದರ ಬೆಂಬಲ ಬೆಲೆ ಕೇವಲ 25 ರೂಪಾಯಿಗಳು ಆಗಿರುತ್ತವೆ. ಈ ನೀತಿಯನ್ನು, ತೀರ್ಮಾನವನ್ನು ಯಾರು ಮಾಡುತ್ತಾರೆಂದರೆ ಮೆಣಸಿನಕಾಯಿ ಗಿಡವೋ ಅಥವಾ ಮರವೋ ಎನ್ನುವುದು ಸಹ ಗೊತ್ತಿಲ್ಲದಿರುವ ಐ.ಎ.ಎಸ್. ಅಧಿಕಾರಿಗಳು ದೆಹಲಿಯಲ್ಲಿ ಕುಳಿತುಕೊಂಡು ತೀರ್ಮಾನ ಮಾಡುತ್ತಾರೆ, ಅದನ್ನು ಜನಪ್ರತಿನಿಧಿಗಳು ಒಪ್ಪಿಕೊಂಡು ಜಾರಿಗೆ ತರುತ್ತಾರೆ. ಅದೇ ರೀತಿ ರಾಜ್ಯಸರ್ಕಾರ, ಕೇಂದ್ರಸರ್ಕಾರ ಆ ಅಧಿಕಾರಿಗಳು ಕೊಟ್ಟಂಥ ತೀರ್ಮಾನಕ್ಕೆ ಅನುಮೋದನೆ ಕೊಟ್ಟು ಹೊಗೆಸೊಪ್ಪಿಗೆ 25 ರೂಪಾಯಿಗಳು ಎಂದು ನಾವು ತೀರ್ಮಾನ ಮಾಡುತ್ತೇವೆ. ಆದರೆ ಅದನ್ನು ಬೆಳೆಯುವುದಕ್ಕೆ 50 ರೂಪಾಯಿಗಳು ಖರ್ಚಾಗುವಾಗ ಅದಕ್ಕೆ ಬೆಂಬಲ ಬೆಲೆ ಎಂದು 25 ರೂಪಾಯಿಗಳನ್ನು ಕೊಡುವುದು ಯಾವ ನ್ಯಾಯ? ಅದೇ ರೀತಿ ಇನ್ನಿತರ ಪದಾರ್ಥಗಳ ಬೆಂಬಲ ಬೆಲೆಯನ್ನು ನಿಗದಿಪಡಿಸುವಾಗಲೂ ಇದೇ ರೀತಿಯಾಗಿದೆ. ಆದ್ದರಿಂದ ಬೆಂಬಲ ಬೆಲೆ ನೀತಿಯನ್ನು ಪುನರ್‌ಪರಿಶೀಲಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಬೆಂಬಲ ಬೆಲೆಯನ್ನು ನಿಗದಿಪಡಿಸುವಾಗ ಅದು ಆ ಬೆಲೆ ಪ್ರಾಕ್ಟಿಕಲ್ ಆಗಿರಬೇಕು. ವ್ಯವಸಾಯ

ಇಲಾಖೆ ಇದೆ, ತಜ್ಞರುಗಳು ಇದ್ದಾರೆ, ರಿಸರ್ಚ್ ಸ್ಟೇಷನ್‌ಗಳು ಇವೆ, ಇವರೆಲ್ಲರೂ ಸಮಾಲೋಚನೆ ಮಾಡಿ ರೈತರಿಗೆ ಬೆಂಬಲ ಬೆಲೆಯನ್ನು ವೈಜ್ಞಾನಿಕವಾಗಿ ರೂಪಿಸಬೇಕು, ಈ ವಿಚಾರದಲ್ಲಿ ಸರ್ಕಾರ ಮುಂದಾಗಬೇಕು ಎಂದು ಹೇಳುತ್ತೇನೆ. II ಇನ್ನು 'ಬಳ್ಳಾರಿಯ ಅಭಿವೃದ್ಧಿಗೆ 3300 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ' ಎಂದು ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಪತ್ರಿಕಾ ಹೇಳಿಕೆ ಕೊಡ ಬಂತು. ಅದರ ಬಗ್ಗೆ ಇಲ್ಲಿ ಪ್ರಸ್ತಾವನೆ ಕೂಡ ಆಗಿದೆ. ಬಹಳ ಸಂತೋಷ. ಏಕೆಂದರೆ ಬಳ್ಳಾರಿ ಜಿಲ್ಲೆ ಬಹಳ ಹಿಂದುಳಿದಿರುವಂಥ ಪ್ರದೇಶವಾಗಿದೆ. ಆ ಜಿಲ್ಲೆಗೆ ಎಷ್ಟು ಹಣ ಕೊಟ್ಟರೂ ಕೂಡ ಅದು ಕಡಿಮೆ ಎಂದು ಹೇಳಿದರೆ ತಪ್ಪಾಗಲಾರದು. ಅದೇ ರೀತಿ ಎಲ್ಲಾ ಜಿಲ್ಲೆಗಳಿಗೂ ಹಣವನ್ನು ಕೊಟ್ಟರೆ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಅದೇ ರೀತಿಯ ಉದಾರ ನೀತಿ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಂದ ಎಲ್ಲಾ ಜಿಲ್ಲೆಗಳಿಗೂ ಬರಬೇಕು ಎಂದು ಹೇಳುತ್ತಾ, ಈ 3300 ಕೋಟಿ ರೂಪಾಯಿಗಳಲ್ಲಿ 2500 ಕೋಟಿ ರೂಪಾಯಿಗಳ ಥರ್ಮಲ್ ಪ್ಲಾಂಟ್‌ನ ಕೆಲಸವನ್ನು ಹಿಂದಿನ ಸರ್ಕಾರ ಕಳೆದ 2 ವರ್ಷಗಳ ಹಿಂದೆಯೇ ಪ್ರಾರಂಭ ಮಾಡಿದೆ ಎಂದು ನನಗೆ ತಿಳಿದುಬಂದಿದೆ. ಈಗಾಗಲೇ ಹಿಂದಿನ ಸರ್ಕಾರ 2500 ಕೋಟಿ ರೂಪಾಯಿಗಳನ್ನು ವ್ಯವಸ್ಥಿತ ರೀತಿಯಲ್ಲಿ ನಡೆಯತಕ್ಕಂಥ ಕೆಲಸಕ್ಕೆ ಮಂಜೂರು ಮಾಡಿರತಕ್ಕಂಥಾದ್ದನ್ನು ಈಗ ಹೊಸ ಸರ್ಕಾರ ಅಳವಡಿಸಿಕೊಂಡು, 3300 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳತಕ್ಕಂಥಾದ್ದು ಎಷ್ಟು ಸಮಂಜಸ? ಎಂದು ನಾವು ಇಲ್ಲಿ ತಿಳಿಯಬೇಕಾಗಿದೆ. II ಇನ್ನು ಅತಿವೃಷ್ಟಿ ಬಗ್ಗೆ ಈಗಾಗಲೇ ನಾವೆಲ್ಲ ಚರ್ಚೆ ಮಾಡಿದ್ದೇವೆ. ಕಳೆದ ಒಂದು ತಿಂಗಳಿನಲ್ಲಿ ಅನೇಕ ಜಿಲ್ಲೆಗಳಲ್ಲಿ ಮಳೆ ವಿಪರೀತವಾಗಿ ಕೋಟ್ಯಾಂತರ ರೂಪಾಯಿಗಳ ಆಸ್ತಿಪಾಸ್ತಿ ನಷ್ಟವಾಗಿದ್ದರೂ ಕೂಡ ಅಲ್ಲಿ ಪರಿಹಾರ ಕಾರ್ಯಗಳು ಇನ್ನೂ ಕೂಡ ಪ್ರಾರಂಭವಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮೈಸೂರಿಗೆ, ಹುಣಸೂರಿಗೆ ಬರುತ್ತೇನೆಂದು ಹೇಳಿ ಕಾರ್ಯಕ್ರಮ ಕೊಟ್ಟಿದ್ದರೂ ಕೂಡ ಅನಿವಾರ್ಯ ಕಾರಣಗಳಿಂದ ಅವರು ಬರಲಿಕ್ಕೆ ಆಗಲಿಲ್ಲ. ಸನ್ಮಾನ್ಯ ಕಂದಾಯ ಸಚಿವರು ಹುಣಸೂರಿಗೆ ಬಂದು ಬಹಳಷ್ಟು ಆಶ್ವಾಸನೆಗಳನ್ನು ಕೊಟ್ಟರು. ಮಾನ್ಯ ಕಂದಾಯ ಮಂತ್ರಿಗಳು ಬಹಳ ಹಸನ್ಮುಖಿಗಳಾಗಿದ್ದರು, ಅತಿವೃಷ್ಟಿ ಬಂದಾಗಲೂ ಹಸನ್ಮುಖಿಗಳು, ಕೆರೆಗಳು ಒಡೆದುಹೋಗಿದ್ದು, ಅನೇಕ ರಸ್ತೆಗಳು ಚರಂಡಿ ಆಗಿಬಿಟ್ಟಿವೆ, ಚಾನಲ್‌ಗಳು ಆಗಿಬಿಟ್ಟಿದ್ದು ಅದನ್ನು ಇನ್ಸ್‌ಪೆಕ್ಷನ್ ಮಾಡುವಾಗಲೂ ಕೂಡ ಅವರು ಹಸನ್ಮುಖಿಗಳಾಗಿ ನಗುತ್ತಾ ಇರುತ್ತಾರೆ, ಏನೂ ಆಗಿಲ್ಲವಲ್ಲ ಎಂದು ಹೇಳುತ್ತಾರೆ. ನಮ್ಮ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸುಮಾರು ಎರಡೂವರೆ ಕೋಟಿ ರೂಪಾಯಿಗಳಷ್ಟು ಆಸ್ತಿಪಾಸ್ತಿ ಹಾನಿಯಾಗಿದೆ. ಜಿಲ್ಲಾಪರಿಷತ್, ಸಣ್ಣ ನೀರಾವರಿ ಇಲಾಖೆ ಪಿ.ಡಬ್ಲ್ಯೂಡಿ. ಇಲಾಖೆ ಇಷ್ಟೂ ಇರುವಾಗ ಕೇವಲ 5 ಲಕ್ಷದಿಂದ 7.5 ಲಕ್ಷ ರೂ.ಗಳನ್ನು ಪರಿಹಾರಕ್ಕಾಗಿ ಕೊಡುತ್ತೇನೆ ಕಣಯ್ಯಾ ಎಂದು ನನಗೆ ಹೇಳಿದರು. ಸುಮಾರು ಎರಡೂವರೆ ಕೋಟಿ ರೂಪಾಯಿಗಳಷ್ಟು ನಷ್ಟವಾಗಿರುವಾಗ ಕೇವಲ ಐದೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟರೆ ಅದನ್ನು ಎಲ್ಲಿಗೆ ಖರ್ಚುಮಾಡುವುದು? ಅಲ್ಲಿ ಒಡೆದು ಹೋಗಿರತಕ್ಕಂಥ ನಾಲೆಗಳಿಗೆ ಕೇವಲ ಸಿಮೆಂಟ್, ಮರಳು ಮೂಟೆಗಳನ್ನು ತಂದುಹಾಕುವುದಕ್ಕೆ ಸಾಲುವುದಿಲ್ಲ ಸ್ವಾಮಿ, ಸ್ವಲ್ಪ ಉದಾರವಾಗಿ ಕೋಟಿಗಟ್ಟಲೆ ಹಣ ಕೊಡಿ ಎಂದು ಕೇಳಿದೆ. ಅಲ್ಲಿ ಅಷ್ಟೊಂದು ಗಂಭೀರವಾದ ಪರಿಸ್ಥಿತಿ ಇದೆ. ಇದರಿಂದಲಾದರೂ ಕೂಡ ಅಲ್ಲಿ ಕೆಲಸಕಾರ್ಯಗಳು ಆಗಲಿ, ಒಡೆದು ಹೋಗಿರುವ ಕೆರೆಕಟ್ಟೆಗಳನ್ನು

ಸರಿಪಡಿಸಿದರೆ ಅನುಕೂಲವಾಗುತ್ತದೆ, ಅಲ್ಲಿ ರೈತರು ಬಹಳ ತೊಂದರೆಯಲ್ಲಿದ್ದಾರೆ, ರೈತರು ಬಹಳ ನೊಂದಿದ್ದಾರೆ. ಅತಿವೃಷ್ಟಿಯಲ್ಲಿ ನೊಂದಿರತಕ್ಕಂಥವರಿಗೆ ಪರಿಣಾಮಕಾರಿಯಾಗಿ ಪರಿಹಾರ ಕಾರ್ಯಗಳನ್ನು ಮಾಡಿದಾಗ ನಮ್ಮ ಜನತೆ ತಮಗೆ ಖಂಡಿತವಾಗಿ ಸನ್ಮಾನ ಮಾಡುತ್ತಾರೆ ಇದರಲ್ಲಿ ಅತಿಶಯೋಕ್ತಿ ಏನೂ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಅತೀ ಜರೂರಾಗಿ ಆಗಬೇಕಾದಂಥ ಕೆಲಸಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ. ಮೈಸೂರು ಜಿಲ್ಲೆಯ ನಮ್ಮ ಪಿರಿಯಾಪಟ್ಟಣ ಕ್ಷೇತ್ರ ಇಡೀ ಕರ್ನಾಟಕದಲ್ಲಿ ಬಹಳ ಹಿಂದುಳಿದಂಥ ಕ್ಷೇತ್ರವಾಗಿದೆ. ಇದು ಕೊಡಗಿನ ಬಾರ್ಡರ್‌ನಲ್ಲಿದೆ. ಮೈಸೂರಿನಿಂದ ಕೊಡಗಿಗೆ ಹೋಗುವಾಗ ಈ ಕ್ಷೇತ್ರದ ಮಾರ್ಗವಾಗಿ ಸುಮಾರು ಐದಾರು ಜನ ಮಂತ್ರಿಗಳು ಹೋಗುತ್ತಾರೆ. ಹಿಂದಿನ ಸರ್ಕಾರದಲ್ಲಿ ಕೂಡ ಐದು ಜನ ಮಂತ್ರಿಗಳು ಈ ಮಾರ್ಗವಾಗಿ ಕೊಡಗಿಗೆ ಹೋಗುತ್ತಿದ್ದರು. ಹುಣಸೂರು ದಾಟಿ ಪಿರಿಯಾಪಟ್ಟಣ ಗಡಿ ಬರುತ್ತಿದ್ದ ಹಾಗೆ ಯಾವ ಕಾಂಟೆಸಾ ಕಾರು, ಸಚಿವರ ಕಾರು, ಯಾವುದೇ ಬಸ್ಸುಗಳು ಆಗಲಿ ದಡ ದಡ ಎನ್ನುವ ಶಬ್ಧ ಶುರು ಮಾಡಿಬಿಡುತ್ತದೆ. ಆಗ ಅವರಿಗೆ ಪಿರಿಯಾಪಟ್ಟಣ ಕ್ಷೇತ್ರಕ್ಕೆ ತಲುಪಿದ್ದೇವೆ ಎಂದು ಅರ್ಥವಾಗುತ್ತದೆ. ಇದು ನಮ್ಮ ದುರಾದೃಷ್ಟವೋ ಏನೋ ಗೊತ್ತಿಲ್ಲ. ಇದು ರಾಜ್ಯದ ಹೆದ್ದಾರಿ ರಸ್ತೆಯಾಗಿದ್ದು ಕಳೆದ ಹತ್ತಾರು ವರ್ಷಗಳಿಂದ ಈ ರಸ್ತೆಯಾದ್ಯಂತ ಹಳ್ಳಕೊಳ್ಳಗಳು ಉಂಟಾಗಿದ್ದು ಕಳೆದ ಐದು ವರ್ಷಗಳಲ್ಲಿ ಏನೂ ಕೂಡ ಕೆಲಸ ಆಗಿಲ್ಲ. ಹಿಂದೆ ಮಾಡಿದಂಥ ರಸ್ತೆಯಲ್ಲಿನ ಹೊಂಡಗಳನ್ನು ಇನ್ನೂ ಮುಚ್ಚುವುದಕ್ಕಾಗಿಲ್ಲ. ನಮ್ಮ ತಾಲ್ಲೂಕಿನಲ್ಲಿ ಜನರು, ರೈತರು - ' ನಿಮ್ಮ ತಂದೆ ಕಾಲದಲ್ಲಿ ಮಾಡಿದಂಥ ಶಾಲೆಗಳು, ರಸ್ತೆಗಳ ರಿಪೇರಿ ಮಾಡಿಯೇ ಇಲ್ಲ ' ಎಂದು ಹೇಳುತ್ತಾರೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ - ಕಳೆದ ಐದು ವರ್ಷಗಳಲ್ಲಿ ಅನೇಕ ರಸ್ತೆಗಳಿಗೆ ತಿಪ್ಪೆ ಸಾರಿಸಿದ ಹಾಗೆ ಟಾರ್‌ನ್ನು ಹಾಕಿದರು, ಅದು 2-3 ತಿಂಗಳಿಲ್ಲಿ ರಸ್ತೆಯಿಂದ ಕಿತ್ತು ಬಂದುಬಿಟ್ಟಿದೆ. The quality of work is very poor. ರಸ್ತೆಯ ಗುಣಮಟ್ಟ, ಕೆಲಸದ ಗುಣಮಟ್ಟ ಬಹಳ ಕಳಪೆ ಮಟ್ಟದಲ್ಲಿ ಇದೆ. ಇದಕ್ಕೆ ಬಹಳಷ್ಟು ಕೋಟಿ ರೂಪಾಯಿಗಳನ್ನು ಕೊಟ್ಟರೂ ಕೂಡ ಕಳಪೆ ಗುಣಮಟ್ಟದಲ್ಲಿ ಕೆಲಸ ಮಾಡಿದರೆ ಏನು ಪ್ರಯೋಜನ? ಆದ್ದರಿಂದ ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳು ಈ ಸಮಸ್ಯೆಗೆ ಸ್ಪಂದಿಸಿ, ರಸ್ತೆಗಳ ದುರಸ್ತಿ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಿ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಿ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಪಿರಿಯಾಪಟ್ಟಣಕ್ಕೆ ಬಂದರೆ ಇದು ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಹೌದೋ ಅಥವಾ ಅಲ್ಲವೋ ಎನ್ನುವ ಅನುಮಾನ ಬರುತ್ತದೆ. ಏಕೆಂದರೆ ಎಲ್ಲಾ ಸರ್ಕಾರಿ ಕಚೇರಿಗಳು ಬೇರೆ ಬೇರೆ ಕಡೆ ಇವೆ. ದಯಮಾಡಿ ಸನ್ಮಾನ್ಯ ಕಂದಾಯ ಸಚಿವರು ಇಲ್ಲಿಗೆ ಒಂದು ಮಿನಿ ವಿಧಾನಸೌಧವನ್ನು ಮಂಜೂರು ಮಾಡಿಕೊಡಬೇಕು. ಇದರಿಂದ ಆ ಊರಿಗೆ ಶೋಭೆ ಬರುತ್ತದೆ, ಜನಸಾಮಾನ್ಯರಿಗೆ ಅದರಲ್ಲೂ ರೈತಾಪಿ ಜನಗಳಿಗೆ ತಮ್ಮ ಎಲ್ಲಾ ಕೆಲಸಗಳನ್ನು ಒಂದೇ ಕಡೆ ಮಾಡಿಸಿಕೊಂಡು ಹೋಗುವಂಥ ಒಂದು ಅನುಕೂಲಕರ ಕೆಲಸವಾಗುತ್ತದೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ನಮ್ಮ ತಾಲ್ಲೂಕಿನಲ್ಲಿ ಹೊಗೆಸೊಪ್ಪು ಜಾಸ್ತಿ ಬೆಳೆಯುವುದರಿಂದ ಅವುಗಳನ್ನು ದಾಸ್ತಾನು ಮಾಡಲು ಬ್ಯಾರನ್‌ಗಳು ಜಾಸ್ತಿ ಇವೆ. ವರ್ಷಕ್ಕೆ 10-15 ಬ್ಯಾರನ್‌ಗಳಿಗೆ ಬೆಂಕಿ ಬಿದ್ದು ಬಹಳಷ್ಟು ನಷ್ಟವಾಗುತ್ತದೆ. ಬೆಂಕಿ ಹತ್ತಿಕೊಂಡಿತು ಎಂದು ಅಗ್ನಿಶಾಮಕ ದಳದವರಿಗೆ ಫೋನ್ ಮಾಡಿದರೆ

ಅವರು ಕುಶಾಲ ನಗರದಿಂದ ಬರುವ ಹೊತ್ತಿಗೆ ನಮ್ಮ ಜನರೆಲ್ಲ ನೀರು ಹಾಕಿ ಆರಿಸುತ್ತಾರೆ ಮತ್ತು ಬಹಳಷ್ಟು ನಷ್ಟ ಅನುಭವಿಸುತ್ತಿದ್ದಾರೆ. ಹುಣಸೂರಿನಲ್ಲಿ ಮತ್ತು ಕುಶಾಲನಗರದಲ್ಲಿ ಅಗ್ನಿಶಾಮಕ ಠಾಣೆಗಳು ಇವೆ. ಹಾಗೆಯೇ ಪಿರಿಯಾಪಟ್ಟಣಕ್ಕೆ ಅಗ್ನಿಶಾಮಕ ದಳದ ಠಾಣೆಯನ್ನು ಸ್ಥಾಪನೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಇನ್ನು ಪಿರಿಯಾಪಟ್ಟಣದಲ್ಲಿಯ ಹೆದ್ದಾರಿ ರಸ್ತೆ ಬಹಳ ಕಿರಿದಾಗಿದ್ದು ಅಲ್ಲಿ ಜನಸಂದಣಿ, ವಾಹನ ಸಂಚಾರ ಜಾಸ್ತಿ ಆಗಿರುವುದರಿಂದ ಅಲ್ಲಿಗೆ ಬೈಪಾಸ್ ರಸ್ತೆ ಬಹಳ ಅವಶ್ಯಕವಾಗಿ ಬೇಕಾಗಿದೆ. ಆದ್ದರಿಂದ ಬೈಪಾಸ್ ರಸ್ತೆಯನ್ನು ಮಾಡಲು ಕ್ರಮ ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಎಲ್ಲಕ್ಕಿಂತ ಹೆಚ್ಚಾಗಿ ಕಾವೇರಿ ನದಿಯಿಂದ ಕುಡಿಯುವ ನೀರಿನ ವ್ಯವಸ್ಥೆಯನ್ನು ಪಿರಿಯಾಪಟ್ಟಣಕ್ಕೆ ಒದಗಿಸಲು ಹಿಂದಿನ ಸರ್ಕಾರ ಕ್ರಮವನ್ನು ತೆಗೆದುಕೊಂಡು 3 ಕೋಟಿ ರೂಪಾಯಿಗಳನ್ನು ಮಂಜೂರಾತಿಯನ್ನು ಮಾಡಲಾಗಿದೆ ಎನ್ನುವ ಆರ್ಡರ್ ಕಾಪಿಯನ್ನು ನಾನು ನೋಡಿದ್ದೇನೆ. ಅಲ್ಲಿಂದ ಇಲ್ಲಿಯವರೆಗೆ ಅಂದರೆ 2-3 ವರ್ಷಗಳಿಂದ ಏನೂ ಕೆಲಸ ಆಗಿಲ್ಲ. ಆ ದೃಷ್ಟಿಯಿಂದ ಈಗಿನ ಸರ್ಕಾರ ಅದನ್ನು ಕೈಗೆತ್ತಿಕೊಂಡು ತುರ್ತಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು. ಸುಮಾರು 20 ಹಳ್ಳಿಗಳು ಮತ್ತು ಪಿರಿಯಾಪಟ್ಟಣ ಟೌನ್‌ಗೆ ಮಂಜೂರಾತಿ ಆಗಿರತಕ್ಕಂಥ ಕುಡಿಯುವ ನೀರಿಗೆ ಸಂಬಂಧಪಟ್ಟ ಕೆಲಸವನ್ನು ಹೆಚ್ಚಿನ ಮುತುವರ್ಜಿ ವಹಿಸಿ ಮಾಡಿಸಬೇಕು ಮತ್ತು ಹಣವನ್ನು ಮಂಜೂರು ಮಾಡಬೇಕೆಂದು ನಮ್ಮ ತಾಲ್ಲೂಕಿನ ಜನತೆಯ ಪರವಾಗಿ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ಈ ವಿದ್ಯುತ್ ಮತ್ತು ಪಿರಿಯಾಪಟ್ಟಣಕ್ಕೆ ಬಹಳ ನಂಟು, ಏಕೆಂದರೆ ಪ್ರತಿದಿನ ಎರಡು ಸಲ ಅಥವಾ ಮೂರು ಸಾರಿ ಕರೆಂಟ್ ಕಡಿತವಾಗುತ್ತದೆ. ಈ ರೀತಿ ಪ್ರತಿ ದಿನ ಒಂದೊಂದು ಗಂಟೆ ಕರೆಂಟ್ ಹೋಗಲಿಲ್ಲ ಎಂದರೆ ಅಲ್ಲಿರುವ ಜನಗಳಿಗೆ ಆಶ್ಚರ್ಯವಾಗುತ್ತದೆ. ಜನಗಳೇ ಫೋನು ಮಾಡಿ ಇವತ್ತು ಏಕೆ ಕರೆಂಟ್ ಹೋಗಿಲ್ಲವೆಂದು ಕೇಳುತ್ತಾರೆ. ಇದರಿಂದ ಅಲ್ಲಿನ ಕರೆಂಟ್ ಅವ್ಯವಸ್ಥೆಯ ಆಗರದಿಂದಾಗಿ ಮೋಟಾರ್‌ಗಳು ಹಾಳಾಗಿ ಹೋಗುತ್ತಿವೆ, ಇದರ ಜೊತೆಗೆ ಅಲ್ಲಿನ ವೋಲ್ಟೇಜ್ ಕೂಡ ಬಹಳ ಕಡಿಮೆ ಇದ್ದು ಸೀಮೆ ಎಣ್ಣೆ ಬುಡ್ಡಿಯ ದೀಪ ಉರಿದಂತೆ ಉರಿಯುತ್ತವೆ. ಆದ್ದರಿಂದ 400 ಕೆ.ವಿ.ವಿ. ರಿಸೀವಿಂಗ್ ಸಬ್ ಸ್ಟೇಷನ್ ಹಾಕಬೇಕು ಎನ್ನುವ ಒಂದು ಪ್ರಪೋಸಲ್ ಏನು ಇದೆ, ಇದು ಕೇವಲ ಪ್ರಪೋಸಲ್ ಆಗಿಯೇ ಉಳಿದಿದೆ, ಇದನ್ನು ಕಾರ್ಯಗತ ಮಾಡಿ ನಮ್ಮ ತಾಲ್ಲೂಕಿನ ಜನತೆಗೆ ವಿದ್ಯುತ್‌ನ ಸರಬರಾಜು ಸಮರ್ಪಕವಾಗಿ ಮಾಡಬೇಕು ಎಂದು ಸರ್ಕಾರದ ಗಮನ ಸೆಳೆಯುತ್ತೇನೆ. ಇದರ ಜೊತೆಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೃಷ್ಣಾ ಮತ್ತು ಕಾವೇರಿಯ ವಿಷಯವಾಗಿ ಪ್ರಸ್ತಾಪಿಸಿದ್ದೀರಿ. ಒಂದು ಸಂತೋಷದ ಸಂಗತಿ ಏನೆಂದರೆ, ಇವತ್ತಿನ ನೀರಾವರಿ ಸಚಿವರಾದ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಹಿಂದೆ ಈ ಎರಡು ವಿಷಯಗಳಿಗೆ ಸಂಬಂಧಪಟ್ಟಂತೆ ಬಹಳಷ್ಟು ಮಾತುಗಳನ್ನು ಆಡಿದ್ದನ್ನು ನಾನು ಇಂದು ನೆನಪಿಸಿಕೊಳ್ಳುತ್ತೇನೆ. ಎರಡು ಸಾವಿರ ಇಸವಿಯೊಳಗೆ ಬಚಾವತ್ ಕಮಿಟಿ ತೀರ್ಪಿನ ಪ್ರಕಾರ ಕೃಷ್ಣಾ ನದಿ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು, ಹೀಗಿದ್ದರೂ ಈ ಸರ್ಕಾರ ಏನು ಮಾಡುತ್ತಿಲ್ಲವೆಂದು ಬಹಳ ಚೆನ್ನಾಗಿ ಆಗ ಮಾತನಾಡುತ್ತಿದ್ದರು. ಇಂಥವರು ಇದೇ ಖಾತೆಗೆ ಸಚಿವರಾಗಿದ್ದರಿಂದ ಕೃಷ್ಣಾ ಮತ್ತು ಕಾವೇರಿಯ ನದಿಯ ಸಂಪೂರ್ಣ ನೀರನ್ನು ಬಳಸಿಕೊಳ್ಳುವಂತಹ ಒಂದು ಬದ್ಧತೆ ಈ ಸರ್ಕಾರಕ್ಕೆ ಇರಬೇಕಾಗುತ್ತದೆ. ಈ ಕಾವೇರಿ ನದಿಯ

ನೀರಿನ ಬಳಕೆಯಲ್ಲಿ ಏನು ಈ ಪಿರಿಯಾಪಟ್ಟಣ ಏತ ನೀರಾವರಿ ಯೋಜನೆ ಇದೆ ಇದು ಸುಮಾರು 90 ಕೋಟಿ ರೂಪಾಯಿಗಳ ಯೋಜನೆಯಾಗಿದ್ದು ಇದು ಸುಮಾರು 10 ವರ್ಷಗಳಿಂದ ನೆನಗುದಿಗೆ ಬಿದ್ದಿದೆ, ಯಾವ ಕೆಲಸ ಕಾರ್ಯವಾಗುತ್ತಿಲ್ಲ. ಇದಕ್ಕಾಗಿ ಇಲ್ಲಿಯವರೆಗೆ ಕೇವಲ 20 -25 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ, ಇನ್ನು ಸುಮಾರು 70 ಕೋಟಿ ರೂಪಾಯಿಗಳ ಕೆಲಸ ಹಾಗೆಯೇ ಬಾಕಿ ಉಳಿದಿದೆ. ಇದೇ ರೀತಿ ನಿಧಾನವಾಗಿ ಹೋದರೆ ಈ ಯೋಜನೆ ಪೂರ್ಣವಾಗುವುದಿಲ್ಲ, ಈ ಯೋಜನೆಯಿಂದ ಸುಮಾರು 30 ಸಾವಿರ ಎಕರೆ ನೀರಾವರಿಯಾಗತಕ್ಕಂಥಾದ್ದು ಇದೆ. ಈ ಯೋಜನೆಗೆ ತಕ್ಷಣಕ್ಕೆ 15 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಲ್ಲಿ ಇನ್ನಾರು ತಿಂಗಳೊಳಗೆ ಸುಮಾರು 15 - 20 ಕೋಟಿ ಸಾವಿರ ಎಕರೆಗೆ ನೀರಾವರಿಯನ್ನು ಕೊಡಬಹುದು, ಇದರ ಹೆಗ್ಗಳಿಕೆಗೆ ಈ ಒಂದು ಸರ್ಕಾರಕ್ಕೆ ಬರಬಹುದು. ಈ ದೃಷ್ಟಿಯಿಂದ ಇದಕ್ಕೆ 15 ರಿಂದ 20 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಮುಂದಿನ ಏಪ್ರಿಲ್‌ವರೆಗೆ ಸುಮಾರು 21 ಕಿಲೋ ಮೀಟರ್ ಅಂದರೆ 20 ಸಾವಿರ ಎಕರೆಗೆ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಇದರ ಬಗ್ಗೆ ಮಾನ್ಯ ನೀರಾವರಿ ಮಂತ್ರಿಗಳು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಬೇಕು ಎಂದು ಈ ಸಂದರ್ಭದಲ್ಲಿ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಐದು ವರ್ಷಗಳ ಹಿಂದೆ ಇದೇ ಕಾಂಗ್ರೆಸ್ ಸರ್ಕಾರ ಇದ್ದಾಗ ನಮ್ಮ ತಾಲ್ಲೂಕಿಗೆ ಪ್ರಥಮ ದರ್ಜೆ ಕಾಲೇಜು ಅನ್ನು ಮಂಜೂರು ಮಾಡಿ ಆರು ರೂಮುಗಳನ್ನು ಕಟ್ಟುವುದಕ್ಕೆ ಸ್ಯಾಂಕ್ಷನ್ ಮಾಡಿ, ಅದನ್ನು ಕಟ್ಟಿಸಲಿಕ್ಕೆ ಪ್ರಾರಂಭ ಮಾಡಿದ ಮೇಲೆ ಸುಮಾರು ಐದು ಅಡಿ ಗೋಡೆಯಾಗಿ ಅಲ್ಲಿಂದ ಮೇಲಕ್ಕೇಳದೆ ಕೆಲಸ ಸ್ಥಗಿತಗೊಂಡು ಕೇವಲ ಮೋಟು ಗೋಡೆಯಾಗಿ ನಿಂತಿದೆ. ತದನಂತರ ಬಂದಂಥ ಜನತಾದಳ ಸರ್ಕಾರ ಅರ್ಧವಾಗಿರುವ ಈ ಕಟ್ಟಡವನ್ನು ಮುಗಿಸದೇ ಪುನಃ ಬೇರೆ ಮಂಜೂರಾತಿ ನೀಡಿ ಪುನಃ 5 ರೂಮುಗಳನ್ನು ಕಟ್ಟಿಸಿದರು. ಇದರಿಂದಾಗಿ ಆ ಐದು ರೂಮುಗಳು ಸಂಪೂರ್ಣವಾಗಿ ಮುಗಿದೆವು. ಆದರೆ ಕಾಂಗ್ರೆಸ್ ಸರ್ಕಾರ ಮಂಜೂರು ಮಾಡಿದ್ದ ಆ ಆರು ರೂಮುಗಳು ಪೂರ್ಣವಾಗದೇ ಇನ್ನೂ ಮೋಟು ಗೋಡೆಗಳಾಗಿ ಹಾಗೆಯೇ ನಿಂತಿವೆ. ಇದರಿಂದಾಗಿ ಅಲ್ಲಿ ಏನು ಪ್ರಥಮ ದರ್ಜೆ ಕಾಲೇಜು ನಡೆಯುತ್ತದೆ ಇದನ್ನು ಎಲ್ಲಿ ನಡೆಸಬೇಕು ಎಂಬುದು ತೋಚದೆ ಬ್ಲಾಕ್ ಬೋರ್ಡ್ ಆಪರೇಷನ್ ಸ್ಕೀಮ್‌ನಲ್ಲಿ ಪ್ರೈಮರಿ ಸ್ಕೂಲ್ ಕಟ್ಟಿಸಿದಂಥ ಒಂದು ಬಿಲ್ಡಿಂಗ್‌ನಲ್ಲಿ ಈ ಕಾಲೇಜು ಹುಡುಗರು ಓದುತ್ತಿರುವುದು ಬಹಳ ಶೋಚನೀಯವಾಗಿದೆ. ಆದ್ದರಿಂದ ಪುನಃ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ನಿಮ್ಮ ಪೀರಿಯಡ್‌ನಲ್ಲಿ ಮಂಜೂರಾದ ಏನು ಆರು ರೂಮುಗಳು ಹಾಗೇ ಇವೆ ಅವುಗಳನ್ನು ಸಂಪೂರ್ಣಗೊಳಿಸಿ ಮುಂದಿನ ಏಪ್ರಿಲ್ ತಿಂಗಳೊಳಗಾಗಿ ಕಾಲೇಜನ್ನು ಅಲ್ಲಿಗೆ ತೆರವು ಮಾಡಿಸಲು ಅನುಕೂಲ ಮಾಡಿಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. II ಇನ್ನು ರೈತರ ಬಗ್ಗೆ ಮಾತನಾಡುವುದಾದರೆ, ಈ ಕೃಷಿ ಮಾರುಕಟ್ಟೆಯ ಬಗ್ಗೆ ಏನನ್ನೂ ಪ್ರಸ್ತಾಪಿಸಿಲ್ಲ. ಈ ಕೃಷಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ಎ.ಪಿ.ಎಂ.ಸಿ. ಬಿಲ್ಡಿಂಗ್‌ಗಳು ಎಲ್ಲಾ ತಾಲ್ಲೂಕುಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಬಹಳ ಅಂದವಾಗಿ ಗೋಡನ್‌ಗಳನ್ನು ಕಟ್ಟಿಸಿದ್ದಾರೆ. ಆದರೆ ಇನ್ನು ಕೆಲವು ಕಡೆ ಬಿದ್ದು ಹೋಗುವ ಸ್ಥಿತಿಯಲ್ಲಿವೆ. ಆದರೆ ಇದರಿಂದ ರೈತರಿಗೆ ಮಾತ್ರ ಯಾವ ಪ್ರಯೋಜನವಾಗುತ್ತಿಲ್ಲ. ಯಾವುದೇ ಒಬ್ಬ ರೈತ

ತಾಲ್ಲೂಕು ಮಾರ್ಕೆಟ್ ಯಾರ್ಡ್‌ನಲ್ಲಿ ಹೋಗಿ ತಾನು ಬೆಳೆದಿರತಕ್ಕಂಥ ಮಾಲನ್ನು ಮಾರಿ ಒಳ್ಳೆಯ ದರವನ್ನು ಪಡೆಯುವಲ್ಲಿ ಸಂಪೂರ್ಣವಾಗಿ ವಿಫಲನಾಗಿದ್ದಾನೆ. ಇದನ್ನು ಸರಿಪಡಿಸುವುದಕ್ಕೆ ಹಿಂದೆ ಇದ್ದಂಥ ಎಲ್ಲಾ ಸರ್ಕಾರಗಳು ವಿಫಲವಾಗಿವೆ. ಎ.ಪಿ.ಎಂ.ಸಿ.ಯಲ್ಲಿ ಸಾಕಷ್ಟು ಹಣ ಇದೆ, ಹಣ ಮಾತ್ರ ಖರ್ಚಾಗುತ್ತಿದೆ, ಕೇವಲ ಬಿಲ್ಡಿಂಗ್, ಗೋಡೌನ್ ಕಟ್ಟಿಕೊಂಡು ಇವೆಯೇ ವಿನಾಃ ಇದರಿಂದಾಗಿ ರೈತನಿಗೆ ಏನು ಪ್ರಯೋಜನವಾಗುತ್ತಿಲ್ಲ. ಆದ್ದರಿಂದ ಕೂಡಲೇ ಈ ಕಡೆಗೆ ತಾವು ಗಮನಹರಿಸಿ ಎಲ್ಲೆಲ್ಲಿ ಎ.ಪಿ.ಎಂ.ಸಿ. ಬಿಲ್ಡಿಂಗ್‌ಗಳು ಪೂರ್ಣವಾಗಿವೆ ಅಲ್ಲಿ ರೈತರು ತಾನು ಬೆಳೆದಿರತಕ್ಕಂಥ ಮಾಲನ್ನು ತಂದರೆ ಸರಿಯಾದ ಬೆಲೆಯನ್ನು ಕೊಡಿಸತಕ್ಕಂಥ ವ್ಯವಸ್ಥೆಯಾಗಬೇಕು ಎಂದು ನಾನು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಪಿರಿಯಾಪಟ್ಟಣದಲ್ಲಿ ಈ ಎ.ಪಿ.ಎಂ.ಸಿ. ಬಿಲ್ಡಿಂಗ್‌ಗಳು ರೆಡಿಯಾಗಿದೆ, ಇನ್ನು ಐದು ವರ್ಷ ಕಳೆದರೆ ಇವು ಬಿದ್ದು ಹೋಗುತ್ತವೆ, ದಯಮಾಡಿ ತಾವು ಇದರ ಕಡೆಗೆ ಗಮನ ಕೊಡಬೇಕು. ನಮ್ಮಲ್ಲಿ ಮುಸುಕಿನ ಜೋಳ ಬಹಳ ಅಧಿಕೃತವಾಗಿ ಬೆಳೆಯತಕ್ಕಂಥ ಬೆಳೆ, ಇದರ ಮಾರುಕಟ್ಟೆಗೆ ಎ.ಪಿ.ಎಂ.ಸಿ. ವತಿಯಿಂದ ಅನುಕೂಲ ಮಾಡಿಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಪುನಃ ಕೇಳಲಿಚ್ಛಿಸುತ್ತೇನೆ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಚಾಮರಾಯ ಕೋಟೆ ಏತ ನೀರಾವರಿ ಎನ್ನುವ ಒಂದು ಯೋಜನೆ ಇದೆ, ಈ ಯೋಜನೆಯಲ್ಲಿ 75 ಹಾರ್ಸ್‌ಪವರ್ ನಿಂದ ಕಾವೇರಿ ನದಿಯ ನೀರನ್ನು ಏತ್ತಿ ಸುಮಾರು 40 ರಿಂದ 50 ಎಕರೆ ನೀರಾವರಿ ಕೆಲಸವನ್ನು ಕಳೆದ 20 ವರ್ಷಗಳಿಂದ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಕಳೆದ ಐದು ವರ್ಷಗಳಲ್ಲಿ ಅಲ್ಲಿರತಕ್ಕಂಥ ಮೋಟಾರನ್ನು ಕದ್ದುಕೊಂಡು ಹೋಗಿದ್ದಾರೆ, ಅಲ್ಲಿರತಕ್ಕಂಥ ವೈರನ್ನು ಕದ್ದುಕೊಂಡು ಹೋಗಿದ್ದಾರೆ, ಇದರಿಂದಾಗಿ ಅಲ್ಲಿನ ಜನರು ಸರ್ಕಾರವನ್ನು ಸರಿಮಾಡಿಕೊಡಿ ಎಂದು ಸುಮಾರು ಐದು ವರ್ಷಗಳಿಂದ ಬೇಡಿಕೊಳ್ಳುತ್ತಿದ್ದಾರೆ. ಎಷ್ಟು ಬೇಡಿಕೊಂಡಿದ್ದರೂ ಅಲ್ಲಿನ ರೈತರಿಗೆ ನೀರು ಕೊಡುವುದಕ್ಕೆ ಆಗಿಲ್ಲದೇ ಇರುವುದರಿಂದ ಅಲ್ಲಿನ ರೈತರು ಕಂಗಲಾಗಿದ್ದಾರೆ. ಆದ್ದರಿಂದ ಹಿಂದೆ ನೀವೇ ಮಾಡಿರತಕ್ಕಂಥ ಈ ಯೋಜನೆಗೆ ಪುನಃ ನೀವೇ ಪುನಃಶ್ಚೇತನ ಕೊಟ್ಟು ಈ ಯೋಜನೆಯನ್ನು ಪುನಃ ಕಾರ್ಯಗತಗೊಳಿಸಬೇಕು ಎಂದು ಈ ಸಂದರ್ಭದಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ಈ ರಾಜ್ಯಪಾಲರ ಭಾಷಣವನ್ನು ನಾನು ವಿರೋಧಿಸುತ್ತಾ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬಹಳವಾಗಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿದ್ದೇವೆ ಎಂದು ಹೇಳಿರುತ್ತೀರಿ, ಆದರೆ ನಾನು ಇಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಈಗಿರುವ ಆ್ಯಕ್ಟ್‌ನಲ್ಲಿ ಒಬ್ಬ ಜಿಲ್ಲಾಪರಿಷತ್ Executive Officer is not President, but it is the Executive Officer. ತಾಲ್ಲೂಕು ಪಂಚಾಯ್ತಿಯಲ್ಲೂ ಕೂಡ ತಾಲ್ಲೂಕಿನ ಅಧ್ಯಕ್ಷರು ಏನು ಇದ್ದಾರೆ, ಇವರಿಗೆ ಕೇವಲ ಮೀಟಿಂಗ್ ಪ್ರಿಸೈಡ್ ಮಾಡುವುದು, ಇಷ್ಟು ವಿಷಯ ಬಿಟ್ಟರೆ, ಜೆಡ್‌ಪಿ ಆಗಲಿ, ತಾಲ್ಲೂಕು ಪಂಚಾಯತ್‌ನಲ್ಲಿ ಆಗಲಿ, ಅಲ್ಲಿರತಕ್ಕಂಥ ಅಧಿಕಾರ ಎಲ್ಲವೂ ಎಕ್ಸಿಕ್ಯೂಟಿವ್ ಹೆಡ್‌ಗೆ ಬಿಟ್ಟಿದ್ದು. ಕೇವಲ ಅಧಿಕಾರ ಮಾತ್ರ ಬ್ಯೂರಾಕ್ರಸಿಯವರ ಹತ್ತಿರ ವಿಕೇಂದ್ರೀಕರಣವಾಗಿದೆಯೇ ವಿನಹ ಜನಪ್ರತಿನಿಧಿಗಳ ಹತ್ತಿರ ಇದು ಆಗಿಲ್ಲ. ಈ ರೀತಿಯ ಅನೇಕ ಸಮಸ್ಯೆಗಳು ಇರುವುದರಿಂದ ಇದಕ್ಕೊಂದು ಸದನ ಸಮಿತಿ ಮಾಡಿ, ಸಮಗ್ರವಾದ ಬದಲಾವಣೆಯನ್ನು ಮಾಡಿ, ನಿಜವಾದ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯನ್ನು ತರಬೇಕು

ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. II ಇನ್ನು ಅಬಕಾರಿ ವಿಷಯದ ಬಗ್ಗೆ ಇದರಲ್ಲಿ ಎಲ್ಲೂ ಪ್ರಸ್ತಾಪಿಸಿಲ್ಲ, ಈ ಬಗ್ಗೆ ತಮ್ಮ ಸರ್ಕಾರದ ನೀತಿ ಏನು? ಮಹಾತ್ಮ ಗಾಂಧೀಜಿಯವರ ತತ್ವದಂತೆ ಪಾನ ನಿರೋಧ ನೀತಿಯನ್ನು ಅನುಷ್ಠಾನಕ್ಕೆ ತರಬೇಕು ಎನ್ನುವ ಗುರಿ ಈ ಕಾಂಗ್ರೆಸ್‌ಗೆ ಇದೆ. ಈಗ ತಾವು ಧೈರ್ಯ ಮಾಡಿ ಇದನ್ನು ಜಾರಿಗೊಳಿಸಬಹುದು. ನಾನು ಈ ಸದನದ ಮುಖಾಂತರ ಹೇಳುವುದೇನೆಂದರೆ ಇಡೀ ರಾಜ್ಯದ ಜನರಿಗೆಲ್ಲರಿಗೂ ಅನುಕೂಲವಾಗಬೇಕು, ಪ್ರತಿಯೊಬ್ಬರು ಸಾಮಾಜಿಕವಾಗಿ, ಆರ್ಥಿಕವಾಗಿ ಬೆಳೆಯಬೇಕು, ಅನ್ನುವುದಾದರೆ ಈ ಪಾನ ನಿರೋಧ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಈ ಒಂದು ದಿಶೆಯಲ್ಲಿ ಈ ಸರ್ಕಾರದವರು ಒಂದು ಪಾಲಿಸಿ ಮಾಡಿ ಇದನ್ನು ಧೈರ್ಯವಾಗಿ ಮಾಡುವುದಕ್ಕೆ ಮುಂದೆ ಬರಬೇಕು ಎಂದು ನಾನು ಈ ಸದನದ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಬಯಸುತ್ತೇನೆ. II ಕೊನೆಯದಾಗಿ ಶೌಚಾಲಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ನಾವು ಗ್ರಾಮ ನೈರ್ಮಲ್ಯದ ಬಗ್ಗೆ ಹೆಚ್ಚಾಗಿ ಮಾತನಾಡುತ್ತೇವೆ. ವಿಶ್ವಬ್ಯಾಂಕಿನಿಂದ ಇದಕ್ಕಾಗಿ ಹೆಚ್ಚು ಹಣ ಸಾಲದ ರೂಪದಲ್ಲಿ ಬರುತ್ತದೆ. ಆದರೆ ಹಳ್ಳಿಗಳಲ್ಲಿ ಹೋದಾಗ ಶೌಚಾಲಯಗಳು ಇಲ್ಲದೇ ಬೀದಿ ಬೀದಿಗಳಲ್ಲಿ ಶೌಚಾಲಯ ಮಾಡುವಂತಹ ವ್ಯವಸ್ಥೆಯನ್ನು ನೋಡಿದರೆ ಎಂಥವರ ಮನಸ್ಸು ಕೂಡ ಕರಗುತ್ತದೆ. ಈಗ ನಾವು ಏನು ಮಾಡುತ್ತಿದ್ದೇವೆಂದರೆ ಕೇವಲ ಎರಡು ಸಾವಿರ ರೂಪಾಯಿಗಳನ್ನು ಶೌಚಾಲಯ ನಿರ್ಮಾಣ ಮಾಡುವುದಕ್ಕೆ ಕೊಟ್ಟರೆ ಅಷ್ಟೇ ಹಣಕ್ಕೆ ಅದನ್ನು ಪೂರ್ಣ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾವು ಕೋಟ್ಯಾಂತರ ರೂಪಾಯಿಗಳನ್ನು ಯಾವ್ಯಾವುದೋ ಯೋಜನೆಗಳಿಗೆ ಖರ್ಚು ಮಾಡುತ್ತೇವೆ. ಆದ್ದರಿಂದ, ದಯಮಾಡಿ ಇದಕ್ಕಾಗಿ ಒಂದು ಯೋಜನೆಯನ್ನು ಮಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲೆಲ್ಲಿ ಶೌಚಾಲಯಗಳು ಇಲ್ಲವೋ ಅಲ್ಲಿ ಕಡ್ಡಾಯವಾಗಿ ಉಚಿತವಾಗಿ ಶೌಚಾಲಯಗಳನ್ನು ನಿರ್ಮಿಸಿ ಕೊಡಬೇಕು. ಇದರಿಂದಾಗಿ ಆರೋಗ್ಯ ಹೆಚ್ಚಾಗುತ್ತದೆ, ಅನಾರೋಗ್ಯ ಕಡಿಮೆಯಾಗಿ, ಇದಕ್ಕೆ ಔಷಧಿ ತೆಗೆದುಕೊಳ್ಳತಕ್ಕಂಥ ಖರ್ಚು ಕೂಡ ಕಡಿಮೆಯಾಗುತ್ತದೆ. ಆದ್ದರಿಂದ ದಯಮಾಡಿ ಸರ್ಕಾರದವರು ಎಷ್ಟು ಕೋಟಿ ರೂಪಾಯಿಗಳು ಖರ್ಚಾದರೂ ಚಿಂತೆಯಿಲ್ಲ ಗ್ರಾಮಗಳಲ್ಲಿ ಅವಶ್ಯಕತೆಯಿರುವ ಕಡೆಗಳಲ್ಲಿ ಶೌಚಾಲಯಗಳನ್ನು ಕಟ್ಟಿಸಿ ಕೊಡಬೇಕು ಎಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಒಂದು ವಂದನಾ ನಿರ್ಣಯದ ಮೇಲೆ ಮೊದಲನೆಯದಾಗಿ ಮಾತನಾಡಲು ನನಗೆ ಇಲ್ಲಿ ಅವಕಾಶ ಕಲ್ಪಿಸಿಕೊಟ್ಟಂತ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನಾನು ಇಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಯಾರಿಗಾದರೂ ಮನಸ್ಸಿಗೆ ನೋವಾಗುವ ರೀತಿಯಲ್ಲಿ ಮಾತನಾಡಿದ್ದರೆ ದಯಮಾಡಿ ಯಾರೂ ಅನ್ಯಥಾ ಭಾವಿಸಬಾರದು ಎಂದು ಹೇಳುತ್ತಾ ತಮಗೆಲ್ಲರಿಗೂ ಮತ್ತೊಮ್ಮೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಕೆ. ಜಯಪ್ರಕಾಶ ಹೆಗಡೆ (ಬ್ರಹ್ಮಾವರ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ವಂದನನಿರ್ಣಯದ ಮೇಲೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊದನೆಯದಾಗಿ ನಾನು ತಮಗೆ ವಂದಿಸುತ್ತೇನೆ. ನೆನ್ನೆ ದಿವಸ ಸಭೆಯಲ್ಲಿ ಸ್ವಲ್ಪ ಪ್ಲೈನ್ ಸ್ಪೀಕಿಂಗ್ ಆಯಿತು. ಅದೇನೆಂದರೆ, ಮಾನ್ಯ ಬೈರೇಗೌಡರು ಮಾತನಾಡುತ್ತಾ ನಮ್ಮಿಂದ ನೀವು ಆಡಳಿತಕ್ಕೆ ಬಂದಿರಿ ಎಂಮ ಹೇಳಿದಾಗ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇದಕ್ಕೆ

ಪ್ರತಿಯಾಗಿ ನಿಮ್ಮ ದುರಾಡಳಿತದಿಂದ ನಾವು ಅಧಿಕಾರಕ್ಕೆ ಬಂದೆವು ಎಂದು ಹೇಳಿದರು. ಅಂದರೆ, ಇಲ್ಲಿ ಒಬ್ಬರ ತಪ್ಪಿನಿಂದ ನಾವು ಸಹ ಅಧಿಕಾರಕ್ಕೆ ಬಂದಿದ್ದೇವೆಂದು ತಾವು ಒಪ್ಪಿಕೊಂಡಿದ್ದೀರಿ. ಹಾಗೆಯೇ that it is not a positive vote for the congress ಎಂದು ತಾವು ಒಪ್ಪಿಕೊಂಡಿದ್ದೀರಿ. ನಾವು ಮಾಡಿದ ತಪ್ಪಿನಿಂದ ಇವತ್ತಿನದಿವಸ ಕಾಂಗ್ರೆಸ್ ಸರ್ಕಾರದ ಆಡಳಿತ ಬಂದಿದೆ ಎಂದು ಮಾನ್ಯ ಬೈರೇಗೌಡರು ಒಪ್ಪಿಕೊಂಡಿದ್ದಾರೆ. ಇದರರ್ಥ ಏನೆಂದರೆ ಅವರವರ ತಪ್ಪನ್ನು ಒಂದೊಂದು ಹಂತದಲ್ಲಿ ಅವರೆಲ್ಲಾ ಒಪ್ಪಿಕೊಂಡಿರುವುದು ನನಗೆ ಸಂತೋಷವಾಗಿದೆ. ಏಕೆಂದರೆ, ಪ್ರಾರಂಭದಲ್ಲಿ ಮಾನ್ಯ ನಂಜಯ್ಯನಮಠ್‌ರವರು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಂಥ ಸಂದರ್ಭದಲ್ಲಿ, ಸರ್ಕಾರದಲ್ಲಿ ಸಾಮರಸ್ಯ ಇಲ್ಲದೇ ಹೋದರೆ ಸರ್ಕಾರ ಉಳಿಯುವುದಿಲ್ಲವೆಂದು ಹಾಗೂ ಕೆಲಸ ಮಾಡದೇ ಇದ್ದರೂ ಪರವಾಗಿಲ್ಲ, ಒಟ್ಟಿನಲ್ಲಿ ಸಾಮರಸ್ಯ ಉಳಿಯಬೇಕೆಂದು ಹೇಳಿದರು. ನಮ್ಮಲ್ಲಿ ಸಾಮರಸ್ಯ ಇಲ್ಲದೇ ಇರುವುದರಿಂದ ನಮ್ಮ ಸರ್ಕಾರ ಉಳಿಯಲಿಲ್ಲ. ನಮ್ಮ ಸರ್ಕಾರ ಬಹಳ ಕೆಲಸವನ್ನು ಮಾಡಿದೆ. ಇದರ ಬಗ್ಗೆ ಮಾನ್ಯ ಸದಾನಂದಗೌಡರು ಮಾತನಾಡುತ್ತಾ ಅನೇಕ ಸಚಿವರ ಹೆಸರನ್ನು ಪ್ರಸ್ತಾಪ ಮಾಡಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂದು ಹೇಳಿದರು. ನಮ್ಮ ಸರ್ಕಾರದ ಕೊನೆಯ ಅಧಿವೇಶನದಲ್ಲಿ ಮಾನ್ಯ ಸುರೇಶ್ ಕುಮಾರ್‌ರವರು ಮಾತನಾಡುತ್ತಾ, ನಿಮ್ಮದು ಟೀಮ್ ವರ್ಕ್ ಆಗಲಿಲ್ಲ, ಒಂದು ರೀತಿಯ ಇಂಡಿವಿಜ್ಯುಯಲ್ ಗೇಮ್ ಆಯಿತೆಂದು ಹೇಳಿದರು. ಆದ್ದರಿಂದ, ನಮ್ಮಲ್ಲಿ ಪ್ರತಿಯೊಬ್ಬರು ಕೆಲಸವನ್ನು ಮಾಡಿದ್ದಾರೆ. ಆದರೆ ಇದೊಂದು ಟೀಮ್ ವರ್ಕ್ ಆಗದೇ, ಜನರಿಗೆ ಸರಿಯಾದ ಮಾಹಿತಿ ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ನಮ್ಮಲ್ಲಿ ಸಾಮರಸ್ಯ ಇಲ್ಲದೇ ಇರುವುದರಿಂದ ಸರ್ಕಾರ ಈ ಹಂತಕ್ಕೆ ಬಂತು. ನಮ್ಮಲ್ಲಿ ಕೆಲವರು ಗೆಲ್ಲುವ ಉದ್ದೇಶದಿಂದ ಬೇರೆ ಬೇರೆ ಕಡೆ ಹೋಗತಕ್ಕಂಥ ಪ್ರಯತ್ನ ಮಾಡಿದರು. ಈ ಒಂದು ಹಂತದಲ್ಲಿ ಜನತಾದಳ ಒಡೆದು, ಜನತಾದಳ(ಯು), ಇನ್ನೊಂದು ಜನತಾದಳ(ಎಸ್) ಎಂದು ಎರಡು ಭಾಗವಾಯಿತು. ಇದರಲ್ಲಿ ಜನತಾದಳ(ಯು)ರವರು ಬಿ.ಜೆ.ಪಿ. ಜೊತೆಗೆ ಸೇರಿಕೊಂಡು ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಪ್ರಯತ್ನ ಮಾಡಿದರು. ನಾನು ಈ ರೀತಿ ಹೇಳುತ್ತಿರುವುದನ್ನು ಯಾರೂ ಸಹ ತಪ್ಪು ಎಂದು ಭಾವಿಸಬಾರದು. ಏಕೆಂದರೆ, ನನ್ನ ಮನಸ್ಸಿನಲ್ಲಿರತಕ್ಕಂಥ ಭಾವನೆಗಳನ್ನು ನಾನಿಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಜನತಾದಳ(ಯು) ಮತ್ತು ಬಿ.ಜೆ.ಪಿ. ಇವರೊಳಗೆ ಹೊಂದಾಣಿಕೆ ಸರಿಯಿಲ್ಲದೇ ಇರುವುದರಿಂದ ಇಬ್ಬರೂ ಸಹ ಹೆಚ್ಚಿಗೆ ಸ್ಥಾನವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ನಮ್ಮಗಳ ಭಿನ್ನಾಭಿಪ್ರಾಯದಿಂದ ಇವತ್ತು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದಕ್ಕೆ ಸಾಧ್ಯವಾಯಿತು. ಈ ಫಲಿತಾಂಶದಿಂದ ಒಂದು ಅಂಶವನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಅದೇನೆಂದರೆ, ಇವತ್ತಿನದಿವಸ ಯಾವ ಪಕ್ಷದವರು ಜನತೆಗೆ ಯಾವ ರೀತಿ ಸರ್ಕಾರವನ್ನು ಕೊಡುತ್ತಾರೆಂಬುದನು ನೋಡುತ್ತಾರೆ. They had no choice. ಏಕೆಂದರೆ, Voters memory is very short. ಜನರು ಕಾಂಗ್ರೆಸ್ ಸರ್ಕಾರ ಬೇಡವೆಂದಾಗ ಜನತಾದಳದ ಸರ್ಕಾರ ಅಥವಾ ಜನತಾದಳ ಸರ್ಕಾರ ಇಷ್ಟ ಇಲ್ಲದೇ ಇದ್ದಾಗ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರುತ್ತಾರೆ. ಒಟ್ಟಿನಲ್ಲಿ ಒಂದಲ್ಲೊಂದು ಸರ್ಕಾರವನ್ನು ಅಧಿಕಾರಕ್ಕೆ ನಮ್ಮ ರಾಜ್ಯದ ಜನರು ತರುತ್ತಿದ್ದಾರೆ. ಜನತಾದಳ ಒಡೆದು ಹೋಗಿರುವುದರಿಂದ ಇವತ್ತಿನದಿವಸ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂತು. ಏಕೆಂದರೆ,

ಬೇರೆ ಪಕ್ಷವನ್ನು ಅಧಿಕಾರಕ್ಕೆ ತರುವುದಕ್ಕೆ ಜನರಿಗೆ ಬೇರೆ ಚಾಯ್ಸ್ ಇರಲಿಲ್ಲ. ಇವತ್ತು ಜನರಿಗೆ ನೆಗೆಟೀವ್ ವೋಟ್ ಕೊಡುವುದಕ್ಕೆ ಬೇರೆ ಯಾವ ಪಕ್ಷ ಇರಲಿಲ್ಲ. ಆದ್ದರಿಂದ ನೀವು ಇದನ್ನು ಅರ್ಥ ಮಾಡಿಕೊಂಡು ಮುಂದಿನ ದಿನಗಳಲ್ಲಿ ಸರಿಯಾಗಿ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇವತ್ತಿನ ಸಭೆಯಲ್ಲಿ ಸರ್ಕಾರದ ಕಡೆ ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ನಡೆಯುತ್ತಿರುವ ಚರ್ಚೆಯನ್ನು ಕೇಳುವುದಕ್ಕೆ ಯಾರು ಇಲ್ಲ, ಈ ವಿಷಯವನ್ನು ನಾನು ಬೆಳಿಗ್ಗೆಯಿಂದ ಎರಡು-ಮೂರು ಸಲ ಪ್ರಸ್ತಾಪ ಮಾಡಿದ್ದೇನೆ. ಈ ವಿಷಯವನ್ನು ಅವರು ಯಾವ ರೀತಿ ತೆಗೆದುಕೊಂಡರು ಎಂಬುದು ನನಗಂತೂ ಗೊತ್ತಿಲ್ಲ. ಏಕೆಂದರೆ, ಸಾಮರಸ್ಯ ಇಲ್ಲ ಎನ್ನುವಂತ ಒಂದು ಸಂಕೇತ ವಿಧಾನಸಭೆಯಲ್ಲಿ ಸದಸ್ಯರು ಬಂದು ಕುಳಿತುಕೊಳ್ಳದೇ ಇರುವುದೆಂದು ನನ್ನ ಭಾವನೆಯಾಗಿದೆ. ಒಂದು ವೇಳೆ ಸಾಮರಸ್ಯ ಇದ್ದು, ಸರ್ಕಾರ ಸರಿಯಾಗಿ ನಡೆಯಬೇಕೆಂದಾಗ ಮಂತ್ರಿಗಳು ಮತ್ತು ಸದಸ್ಯರುಗಳು ಸದನದಲ್ಲಿ ಬಂದು ಕುಳಿತುಕೊಳ್ಳುತ್ತಾರೆಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಮ್ಮ ನಮ್ಮ ಜಗಳದಿಂದ ಸರ್ಕಾರ ಹೋಯಿತು, ಇದರಿಂದ ಜನರನ್ನು ಬಯ್ಯುವುದರಿಂದ ಏನು ಪ್ರಯೋಜನ ಇಲ್ಲ. ಏಕೆಂದರೆ Any form of Government, if it is not receptive, people have their right to alter or demolish it. ನಮ್ಮಲ್ಲಿ ಪರಿಸ್ಥಿತಿ ಏನಾಗಿತ್ತೆಂದರೆ, they were not in a position to alter the Government. ಅಂತಹ ದುರಸ್ಥಿಯ ಪರಿಸ್ಥಿತಿಯಲ್ಲಿ ನಾವು ಇರಲಿಲ್ಲ, ಅದಕ್ಕೋಸ್ಕರ ನಮ್ಮನ್ನು ಜನರು ಡೆಮಾಲಿಷ್ ಮಾಡಿದ್ದಾರೆ. ಮೇಲ್ಮನೆಯಲ್ಲಿ ಮಾನ್ಯ ನಾಣಯ್ಯನವರು ಮಾತನಾಡುತ್ತಾ ನಮ್ಮ ಪಕ್ಷಕ್ಕೆ Acquired self-destructive syndrome ಇತ್ತೆಂದು ಒಂದು ಮಾತನ್ನು ಹೇಳಿದ್ದಾರೆ. ಆ ಮಾತನ್ನು ನಾನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ಸೆಲ್ಫ್ ಡಿಸ್ಟ್ರಕ್ಷನ್ ಮಾಡಿಕೊಂಡಿದ್ದೇವೆಯೇ ಹೊರತು ಬೇರೆ ಯಾರು ನಮ್ಮನ್ನು ಡೆಸ್ಟ್ರಾಯ್ ಮಾಡಿಲ್ಲ. ಇವತ್ತು ಜನರು ಒಳ್ಳೆಯ ಸಿಗ್ನಲ್ ಕೊಟ್ಟಿದ್ದಾರೆ, ಅದನ್ನು ತಾವು ತಿಳಿದುಕೊಂಡು ಒಳ್ಳೆಯ ಕೆಲಸವನ್ನು ಮಾಡಬೇಕು. ಮಂತ್ರಿಯಾಗಬೇಕೆಂದು ಪ್ರತಿಯೊಬ್ಬ ಶಾಸಕನು ಹೋರಾಟ ಮಾಡುವುದರಲ್ಲಿ ತಪ್ಪೇನು ಇಲ್ಲ. ಆದರೆ ಮಂತ್ರಿ ಆಗಲಿಲ್ಲವೆಂದು ಸರ್ಕಾರವನ್ನು ಡೆಸ್ಟ್ರಾಯ್ ಮಾಡಲಿಕ್ಕೆ ಹೊರಟಾಗ ಮಾತ್ರ ಮಾನ್ಯ ನಾಣಯ್ಯನವರು ಹೇಳಿದ ಹಾಗೆ ಸೆಲ್ಫ್ ಡೆಸ್ಟ್ರಾಯ್ ಸ್ಪ್ರೆಡ್ ಆಗುತ್ತದೆ ಎನ್ನತಕ್ಕಂಥ ಭಾವನೆಯನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಈ ಒಂದು ಹೋರಾಟದಲ್ಲಿ ನಮ್ಮನ್ನೇ ನಾವೇ ಡೆಸ್ಟ್ರಾಯ್ ಮಾಡಿಕೊಂಡಿದ್ದೇವೆ. ನಮ್ಮಲ್ಲಿ ಕೆಲವರು ಒಳ್ಳೆಯವರು ಸಹ ಹೋಗಿಬಿಟ್ಟರು, ಈ ಪ್ರವಾಹದಲ್ಲಿ ಮತ್ತೆ ಸದನಕ್ಕೆ ಬರಬೇಕೆಂದು ಅನೇಕ ಸದಸ್ಯರ ಭಾವನೆಯಾಗಿತ್ತು. ಆದರೆ ಅವರು ಸಹ ಈ ಸದನಕ್ಕೆ ಬರದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುವಂತೆ ನಾವು ಮಾಡಿಕೊಂಡಿದ್ದೇವೆ. ಕಾಂಗ್ರೆಸ್ ಪಕ್ಷದವರು ಹಿಂದೆ 180 ಸೀಟ್‌ನಿಂದ 40 ಸೀಟ್‌ಗೆ ಬಂದದ್ದನ್ನು ನೆನಪು ಮಾಡಿ ಕೊಳ್ಳಬೇಕು. ನಮ್ಮನ್ನು ನಾವೇ ಡೆಸ್ಟ್ರಾಯ್ ಮಾಡಿಕೊಂಡಿರುವುದನ್ನು ನೆನಪು ಮಾಡಿಕೊಂಡಾಗ, ಅವರೂ ಸಹ ಇದನ್ನು ತಿಳಿದುಕೊಳ್ಳಬೇಕು. ಈಗಾಗಲೇ ಅವರ ಪರಿಸ್ಥಿತಿ ಹೆವಿಯಾಗಿದೆ. ಮುಂದೆ ಕೆಲವು ದಿನಗಳಲ್ಲಿ ಇನ್ನೂ ಜಾಸ್ತಿಯಾಗುತ್ತದೆ ಎನ್ನತಕ್ಕಂಥ ಸುದ್ದಿಗಳನ್ನು ನಾವು ಕೇಳುತ್ತಿದ್ದೇವೆ. ನಾವು ಪ್ರಾರಂಭದಲ್ಲಿ ಟಾಪ್ ಹೆವಿಯಾಗಿರಲಿಲ್ಲ, ಆದರೆ ಕೊನೆಯ ಹಂತದಲ್ಲಿ ಟಾಪ್ ಹೆವಿಯಾಗಿ ಕೊಲಾಪ್ಸ್ ಆದೆವು. ಅದಕ್ಕೋಸ್ಕರ ತಾವು ಮಂತ್ರಿಮಂಡಲ

ರಚನೆ ಮಾಡುವಾಗ ಸರಿಯಾದ ರೀತಿಯಲ್ಲಿ, ಸೂಕ್ತ ರೀತಿಯಲ್ಲಿ ಚರ್ಚೆ ಮಾಡಿ ರಚನೆ ಮಾಡಿದ್ದು ಸಾಕಾಗುತ್ತದೆ. ಮುಂದೆ ಟಾಪ್ ಹೆವಿಯಾಗಿ ಕೊಲಾಪ್ಸ್ ಆಗದ ರೀತಿಯಲ್ಲಿ ಮಾನ್ಯ ನಾಯಕರು ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ರಾಜಕಾರಣಿಗಳ ಭಾವನೆಗಳು ಏನೆಂಬುದರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ವ್ಯಕ್ತಪಡಿಸುತ್ತಾ, ಸರ್ಕಾರಿ ಕಾರಿನ ಮೇಲೆ ರೆಡ್ ಲೈಟ್ ಹಾಕಿಕೊಂಡು ಹೋಗುವುದಕ್ಕೆ ಸ್ವಲ್ಪ ನಾಚಿಕೆ ಆಯಿತೆಂದು ಒಂದೆರಡು ಮಾತನ್ನು ಹೇಳಿದರು. ಕಾರಿನ ಮೇಲೆ ಇರತಕ್ಕಂಥ ಟಾಪ್ ಲೈಟ್ ತೆಗೆದರೆ ಜನಸಾಮಾನ್ಯರಿಗೆ ಕಾರಿನಲ್ಲಿ ಯಾರು ಹೋಗುತ್ತಾರೆಂದು ಗೊತ್ತಾಗುವುದಿಲ್ಲ. ನನಗೆ ತಿಳಿದಮಟ್ಟಿಗೆ ಖಂಡಿತವಾಗಿ ನಿಮಗೆ ಕೆಂಪು ದೀಪದ ಅಗತ್ಯತೆ ಇಲ್ಲ. ನಾವು ದಾರಿಯಲ್ಲಿ ಹೋಗುತ್ತಿದ್ದೇವೆಂದು ತಿಳಿಯುವುದಕ್ಕೋಸ್ಕರ ಈ ದೀಪವನ್ನು ಉಪಯೋಗಿಸಬೇಕಷ್ಟೆ. ನಾನು ಕೊನೆಯ ಅವಧಿಯಲ್ಲಿ ಇದನ್ನು ತೆಗೆದುಬಿಟ್ಟಿದ್ದೆ. ತಮಗೆ ಅದರ ಅಗತ್ಯ ಇಲ್ಲದಿದ್ದರೆ ತಾವೂ ಸಹ ಅದನ್ನು ತೆಗೆಯಬಹುದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. II ಇನ್ನು ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ತಾವು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಮೂದು ಮಾಡಿದ್ದೀರಿ. ಈಗ ಇರತಕ್ಕಂಥ ವ್ಯವಸ್ಥೆಯಲ್ಲಿಯೇ ಮುಂದುವರಿದು ಹೋಗಬೇಕೆಂದು ನೆನ್ನೆ ದಿವಸ ನಡೆದ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡಿದ್ದೀರಿ. ಮಂಡಲ್ ಪಂಚಾಯತ್ ವ್ಯವಸ್ಥೆಯನ್ನು ನಮ್ಮ ಸರ್ಕಾರ ಬಂದಾಗ ಬದಲಾವಣೆ ಮಾಡಿತ್ತು. ದಿವಂಗತ ಮಾನ್ಯ ನಜೀರ್‌ಸಾಬ್‌ರವರು ಈ ವ್ಯವಸ್ಥೆ ಜಾರಿಗೆ ಬಂದಾಗ ಈ ಭಾಗದಲ್ಲಿ ಮಾನ್ಯ ದೇಶಪಾಂಡೆಯವರು ಮತ್ತು ರೋಷನ್ ಬೇಗ್‌ರವರು ಹಾಗೂ ಮಾನ್ಯ ಇನಾಂದಾರರು ಇದ್ದದ್ದನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಈ ಮಂಡಲ್ ಪಂಚಾಯತ್ ವ್ಯವಸ್ಥೆಗೆ ಗ್ರಾಮ ಪಂಚಾಯತ್ ವ್ಯವಸ್ಥೆಯನ್ನು ಹೋಲಿಸಿ ನೋಡಿದಾಗ ಇವತ್ತು ಗ್ರಾಮಪಂಚಾಯಿತಿಗೆ ಹಲ್ಲು ಮತ್ತು ಉಗುರು ಇಲ್ಲ ಹಾಗೂ ಸ್ವಾಯತ್ತತೆಯೂ ಸಹ ಇಲ್ಲ. ಎಲ್ಲಾ ಅಧಿಕಾರವನ್ನು ಅಧಿಕಾರಿಗಳಿಗೆ ಕೊಟ್ಟು, ಅಧ್ಯಕ್ಷರುಗಳು ಅವರ ಹಿಂದೆ ಓಡಾಡತಕ್ಕಂಥ ಕೆಲಸವನ್ನು ಮಾಡಿಟ್ಟಿದ್ದೀರಿ. ಪುನಃ ಅದೇ ವ್ಯವಸ್ಥೆಗೆ ಹೋಗಬೇಕೆಂದು ಹೇಳಿದರೆ, ಅದಕ್ಕೆ ನಾವು ಬೆಂಬಲ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಇದರ ಬಗ್ಗೆ ಒಳಿತು, ಕೆಡುಕಿನ ದೃಷ್ಟಿಯಿಂದ ಚರ್ಚೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ, ದಿವಂಗತ ಮಾನ್ಯ ನಜೀರ್‌ಸಾಬ್‌ರವರು ಯಾವ ಆಲೋಚನೆ ಇಟ್ಟುಕೊಂಡು ಈ ವ್ಯವಸ್ಥೆಯನ್ನು ಜಾರಿಗೆ ತಂದಿದ್ದರು, ಅದನ್ನು ಪುನಃ ಗಾಳಿಗೆ ತೂರಿ, ಮತ್ತೆ ಅಧಿಕಾರಿಗಳಿಗೆ ಅಧಿಕಾರವನ್ನು ಕೊಡತಕ್ಕಂಥಾದ್ದನ್ನು ಮಾಡುತ್ತಿದ್ದೀರಿ. ಡಿ-ಸೆಂಟ್ರಲೈಜೇಷನ್ ಆಫ್ ಪವರ್‌ನ್ನು ಮಾಡಿಲ್ಲ, ಕೇವಲ ಡಿ-ಸೆಂಟ್ರಲೈಜೇಷನ್ ಮಾಡಿದ್ದೀರಿ. ಆದರೆ ಪವರ್ ಮಾತ್ರ ಇಲ್ಲಿಯೇ ಸೆಂಟ್ರಲೈಜೇಷನ್ ಮಾಡಿ ಇಟ್ಟುಕೊಂಡಿದ್ದೀರಿ. ಇದು ಆಗಬಾರದು. ಅಧಿಕಾರದ ಸಮೇತ ಡಿ- ಡಿ-ಸೆಂಟ್ರಲೈಜೇಷನ್ ಮಾಡಿದಾಗ ಮಾತ್ರ ಈ ವ್ಯವಸ್ಥೆಗೆ ಒಂದು ಬಲ ಬರುತ್ತದೆ. ಹಾಗೆಯೇ ಏನಾದರೊಂದು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ತಾವು ದಯವಿಟ್ಟು ಈ ಒಂದು ವ್ಯವಸ್ಥೆಯನ್ನು ಮತ್ತೆ ಗ್ರಾಮಪಂಚಾಯತ್‌ನಲ್ಲಿ ತೆಗೆದು ಹಾಕಬಾರದೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. II ಎ.ಡಿ.ಬಿ.ಯಿಂದ ಸಾಲ ತೆಗೆದುಕೊಂಡು ಕರಾವಳಿಯ ಮುನಿಸಿಪಾಲಿಟಿಯ ಅಭಿವೃದ್ಧಿಗೋಸ್ಕರ ಒಂದು ಯೋಜನೆಯನ್ನು ಹಾಕಿಕೊಂಡಿದ್ದೀರಿ. ಇದಕ್ಕೋಸ್ಕರ ಎ.ಡಿ.ಬಿ.ಯಿಂದ 175 ಮಿಲಿಯನ್ ಡಾಲರ್ಸ್ ಬಿಡುಗಡೆಯಾಗಿದೆ ಎಂದು ಇತ್ತೀಚಿನ ಪತ್ರಿಕೆಗಳಲ್ಲಿ ಬಂದಿದೆ. ಕರಾವಳಿ ಮುನಿಸಿಪಾಲಿಟಿ

ಅಭಿವೃದ್ಧಿಗೋಸ್ಕರ ಈ ಹಣವನ್ನು ಒಳ್ಳೆಯ ರೀತಿಯಲ್ಲಿ ಉಪಯೋಗ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇದರಲ್ಲಿ Essential Urban Infrastructure in Municipal Services, ಗೋಸ್ಕರ ಈ ಹಣವನ್ನು ಕೊಟ್ಟಿದ್ದಾರೆ. ಆದ್ದರಿಂದ ತಾವು ಇದನ್ನು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. II ಈಗಾಗಲೇ ಕೈಗಾರಿಕಾ ಉದ್ದಿಮೆಗಳ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ಇವತ್ತು ಈ ಉದ್ದಿಮೆಗಳ ಅವಶ್ಯಕತೆ ಬಹಳ ಇದೆ. ಏಕೋ-ಫ್ರೆಂಡ್ಲಿ ಉದ್ದಿಮೆಗಳು ಎಷ್ಟೋ ಬಂದರೂ ಸಹ ನಮ್ಮಲ್ಲಿ ಉದ್ದಿಮೆಗಳ ಬಗ್ಗೆ ಬಹಳಷ್ಟು ವಿರೋಧ ಮಾಡಿ, ಹೋರಾಟ ಆಗಿರುವುದು ತಮಗೆಲ್ಲಾ ಗೊತ್ತಿದೆ. ಇವತ್ತಿನದಿವಸ ಈ ಉದ್ದಿಮೆಗಳು ಇಲ್ಲದೇ ಹೋದರೆ ಎಂಪ್ಲಾಯಮೆಂಟ್ ಜನರೇಟ್ ಮತ್ತು ಇನ್‌ಕಂ ಜನರೇಟ್ ಆಗುವುದಿಲ್ಲ. ಆದ್ದರಿಂದ ಇದರ ಅವಶ್ಯಕತೆ ಇದೆ. ಇದನ್ನು ಪರಿಶೀಲನೆ ಮಾಡಿ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಎಕಾನಾಮಿಕ್ ಟೈಮ್ಸ್‌ನಲ್ಲಿ ಒಂದು ಆರ್ಟಿಕಲ್ ಬಂದಿದೆ. ಅದೇನೆಂದರೆ, ಉಷಾ Ispat ಎಂಬ ಒಂದು ಸಂಸ್ಥೆ ಬ್ರಹ್ಮಾವರದಲ್ಲಿ ಸ್ಟೀಲ್ ಇಂಡಸ್ಟ್ರಿ ಆಗಬೇಕೆಂದು ಹಿಂದೆ ಒಂದು ಪ್ರಯತ್ನವನ್ನು ಮಾಡಿ ಸ್ವಲ್ಪ ಗಲಾಟೆ ಆಗಿ, ಹಾಗೆಯೇ ಅದು ನಿಂತು ಹೋಗಿತ್ತು. ಪುನಃ ಇದು ಬರುತ್ತದೆಂದು ಸುದ್ದಿ ಎಕನಾಮಿಕ್ ಟೈಂ ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ಮಾನ್ಯ ದೇಶಪಾಂಡೆಯವರು ಸ್ವಲ್ಪ ಬೆಳಕು ಚೆಲ್ಲಬೇಕೆಂದು ಹೇಳುತ್ತೇನೆ. ಈ ಉದ್ದಿಮೆಗಳಲ್ಲಿ ಯಾರು The business of the Government is to keep Government out of business. Unless the business needs the support of the Government, Government should not involve itself in the business. ಕೇವಲ ಬಿಸಿನೆಸ್ ಎಲ್ಲಿ ಡೆವಲಪ್ ಆಗುತ್ತದೆ ಅದಕ್ಕೆ ಅಸಿಸ್ಟೆನ್ಸ್ ಮಾತ್ರ ನಾವು ಕೊಡಬೇಕು, ಅದನ್ನು ನಾವು ನೋಡಿದ್ದೇವೆ. ಪಬ್ಲಿಕ್ ಅಂಡರ್-ಟೇಕಿಂಗ್ ಯಾವುದು ಇವತ್ತು ನಷ್ಟದಲ್ಲಿದೆ, ಅದನ್ನು ಪ್ರೈವೆಟೈಸ್ ಮಾಡುವಂಥಾದ್ದು, ಪ್ರೈವೇಟ್ ಸಿಕ್ಕಿಂಗ್ ಯೂನಿಟ್ಸ್ ಏನಿದೆ, ಅದನ್ನು ಟೇಕ್ ಓವರ್ ಮಾಡುವಂಥದ್ದು ಏನಿದೆ ಇದಕ್ಕೆ ಅರ್ಥವೇ ಇಲ್ಲ, ಅದೊಂದು ವಿಪರ್ಯಾಸ. ಅದನ್ನು ಮಾಡಬಾರದೆಂದು ಹೇಳುತ್ತೇನೆ. II ಇನ್ನು ನೀರಾವರಿ ಯೋಜನೆ ವಿಚಾರ ಬಂದಾಗ ಮಾನ್ಯ ಭಾರೀ ನೀರಾವರಿ ಸಚಿವರು ಕೃಷ್ಣೆಯ ಕಣ್ಣೀರು ಹರಿಸುತ್ತೇನೆಂದು ಹೇಳಿದ್ದರ ಬಗ್ಗೆ ಬೆಳಿಗ್ಗೆ ಮಾತನಾಡುವಾಗ ಒಬ್ಬ ಮಾನ್ಯ ಸದಸ್ಯರು ಹೇಳಿದರು. ನಮಗೆ ಕಣ್ಣೀರನ್ನು ಹರಿಸುವುದು ಬೇಡ, ನಮಗೆ ನೀರನ್ನು ಹರಿಸಬೇಕಾಗುತ್ತದೆ. ಆಗ ಜನರ ಕಣ್ಣೀರು ಹರಿಯುತ್ತದೆ, ತಾವು ನೀರನ್ನು ಹರಿಸಬೇಕು. ನಮ್ಮ ಭಾಗದಲ್ಲಿ ವಾರಾಹಿ ಯೋಜನೆ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಅದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕು. ಪ್ರೊ|| ಚಂದ್ರಶೇಖರವರು ಹೇಳಿರುವ ಹೇಳಿಕೆಯನ್ನು ನಾನು ಇವತ್ತು ಪತ್ರಿಕೆಯಲ್ಲಿ ಓದಿದೆ. ಅವರು ರೇನ್-ವಾಟರ್ ಮ್ಯಾನೇಜ್‌ಮೆಂಟ್ ಬಗ್ಗೆ ಮಾತನಾಡಿದ್ದಾರೆ. ನಮ್ಮಲ್ಲಿ ಬರುವಂಥ ನೀರು ಪ್ರಾಯಶಃ ಅದನ್ನು ಕ್ರೋಢೀಕರಿಸಲಿಕ್ಕೆ ಸಾಧ್ಯವಾಗಿದ್ದರೆ, ನಮ್ಮ ಕರ್ನಾಟಕ ರಾಜ್ಯಕ್ಕೂ ಹಾಗೂ ತಮಿಳುನಾಡು ರಾಜ್ಯಕ್ಕೆ ನೀರಿನ ಬಗ್ಗೆ ಜಗಳ ಆಗುತ್ತಿರಲಿಲ್ಲ. ಕಾರಣ, ಬಂದಂಥ ಎಲ್ಲಾ ನೀರು ಸಮುದ್ರಕ್ಕೆ ಹೋಗುತ್ತದೆ. ಈ ವಾರಾಹಿ ನೀರು ಕೂಡ ಸಮುದ್ರಕ್ಕೆ ಹೋಗುತ್ತದೆ. ಅದಕ್ಕೋಸ್ಕರ ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ,

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಆ ಕಡೆಯ ನೀರು ಇನ್ನು ಐದು ವರ್ಷದಲ್ಲಿ ಈ ಕಡೆ ಬರುತ್ತದೆಂದು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ವಿಠ್ಠಲರಾಜ್ ಶೆಟ್ಟಿಯವರು ಜೋಗಕ್ಕೆ ಬಂದಾಗ ಹೇಳಿದ್ದರು. ಜೋಗದ ಜಲಪಾತದಿಂದ ಬೀಳತಕ್ಕಂಥ ನೀರನ್ನು, ಮತ್ತೆ ನಾವು ಅದನ್ನು ಪಂಪು ಮಾಡಿ ಮೇಲಕ್ಕೆ ತರುವುದಕ್ಕೆ ಸಾಧ್ಯವೆಂದು ಹೇಳಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನೀವು ನಿಮ್ಮ Mangfesto ದಲ್ಲಿ ಏನು ಹೇಳಿದ್ದೀರೆಂದರೆ, ಸಮುದ್ರಕ್ಕೆ ಹೋಗುವ ನೀರನ್ನು, ಕಳೆದ 50 ವರ್ಷಗಳ ರಾಜ್ಯಪಾಲರ ಭಾಷಣದಲ್ಲಿ nobody had dared to say that. At least I must appreciate that courage.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಇದೊಂದು ವಿಚಾರ ಇದೆ. ಸಮುದ್ರಕ್ಕೆ ಸೇರುವ ನೀರನ್ನು ಮೇಲಕ್ಕೆ ತಂದು ಹೇಗೆ ಬಳಸಿಕೊಳ್ಳಬೇಕು ಎನ್ನುವ ತಂತ್ರಜ್ಞಾನದ ಬಗ್ಗೆ ವಿಚಾರ ಮಾಡಬೇಕೆನ್ನುವ ಆಳವಾದ ವಿಚಾರ ಪ್ರಜ್ಞೆ ಇನ್ನು ಜನರ ಮಧ್ಯೆ ಇದೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಮಂತ್ರಿಗಳು ಆ ಪ್ರಣಾಳಿಕೆಯನ್ನು ಇಟ್ಟುಕೊಂಡು ಜನತೆಯ ಮುಂದೆ ಹೋಗಿದ್ದಾರೆ ಮತ್ತು ಗೆದ್ದು ಸಹ ಬಂದಿದ್ದಾರೆ. ಅದರಲ್ಲಿ ಏನು ಇದೆ ಎನ್ನುವುದನ್ನು ನಾವೇ ಇವತ್ತಿನ ದಿವಸ ಅವರಿಗೆ ನೆನಪು ಮಾಡಿಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಅದರ ಬಗ್ಗೆ ಮೊದಲು ಮಾನ್ಯ ಬೈರೇಗೌಡರಿಗೆ ಗೊತ್ತಾಗುತ್ತದೆ. ಅಲ್ಲಿಯವರೆಗೆ ಪುರುಸೊತ್ತು ಇಲ್ಲದಿದ್ದರೆ ನಾವು ಏನು ಮಾಡುವುದಕ್ಕಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಕೊನೆಯ ಪಕ್ಷ ಅಲ್ಲಿಂದ ಇಲ್ಲಿಯವರೆಗೆ ತರುವುದಕ್ಕೆ ಸಾಧ್ಯವಾಗದಿದ್ದರೂ, ಅಲ್ಲಿರುವ ಜನರಿಗೆ ನೀರನ್ನು ಕೊಡುವ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ನಿಮ್ಮ ಆ ಕ್ಷೇತ್ರದ ಶಾಸಕರು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡದೇ ಇರುವ ಕಾರಣಕ್ಕೆ ಅದು ಇವತ್ತಿನವರೆಗೂ ಆ ಯೋಜನೆ ಹಾಳು ಬಿದ್ದಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ನಿಜವಾಗಿಯೂ ಹೇಳಬೇಕೆಂದರೆ, ಒಳ ರಾಜಕೀಯದಿಂದ ಆ ವಾರಾಹಿ ಯೋಜನೆ ನಿಂತಿದೆ ಎಂದು ಹೇಳಿದರೂ ಕೂಡ ತಪ್ಪಾಗಲಿಕ್ಕಿಲ್ಲ. ಮುಖ್ಯವಾಗಿ ಇನ್ನೊಂದು ವಿಷಯ, ನಾನು ಕರಾವಳಿಯ ನೀರಿನ ಬಗ್ಗೆ ಮಾತನಾಡುವಾಗ, ಪ್ರಾಯಶಃ ಕೃಷ್ಣಾ ನದಿಗೆ ಎರಡು ಸಾವಿರ ಕೋಟಿ ರೂಪಾಯಿಗಳನ್ನು ಹಾಗೂ 3 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ನಮ್ಮಲ್ಲಿರುವ ಕರಾವಳಿಗೆ ನಾವು ಕೇಳುವಂಥಾದ್ದು ಕೇವಲ 150 ಕೋಟಿ ರೂಪಾಯಿಗಳನ್ನು, ಅದನ್ನು ನೀವು ಖರ್ಚು ಮಾಡಿದರೆ, ಇಡೀ ಉತ್ತರ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆಯ ನದಿಗಳ ನೀರು ಸಮುದ್ರಕ್ಕೆ ಹೋಗುತ್ತದೆ, ಪ್ರತಿಯೊಂದಕ್ಕೂ ಸಾಲ್ಟ್ ವಾಟರ್ ಎಕ್ಸ್‌ಕ್ಲೂಜನ್ ಡ್ಯಾಮ್‌ನ್ನು ಮಾಡಿದರೆ, ಆಗ ಉಪ್ಪು ನೀರು ಒಳಗೆ ಬರುವಂಥದ್ದು ನಿಲ್ಲುತ್ತದೆ. ಸಿಹಿ ನೀರು ಸಮುದ್ರಕ್ಕೆ ಬರುವಂಥದ್ದು ನಿಲ್ಲುತ್ತದೆ. ಆ ಭಾಗದ ಎಲ್ಲ ಜಲಮಟ್ಟ ಮೇಲಕ್ಕೆ ಬರುವುದಕ್ಕೆ ಸಾಧ್ಯವಾಗುತ್ತದೆ. ಪ್ರತಿಯೊಬ್ಬ ಕೃಷಿಕನಿಗೂ ನೀರಿನ ಸಮಸ್ಯೆ ಹೋಗುತ್ತದೆ.

ಬಾವಿಯ ಜಲಮಟ್ಟ ಮೇಲಕ್ಕೆ ಬರುತ್ತದೆ. ಆದಕ್ಕಾಗಿ ನಾನು ಸರ್ಕಾರದಲ್ಲಿ ಬೇಡಿಕೊಳ್ಳುವುದಿಷ್ಟೆ, ಬೇರೆ ಕಡೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವುದನ್ನು ನಾನು ಬೇಡವೆಂದು ಹೇಳುವುದಿಲ್ಲ, ಅದು ಅಗತ್ಯವಿದೆ. ನಮಗೆ ಸಣ್ಣ ನೀರಾವರಿ ಇಲಾಖೆಯ ಮುಖಾಂತರ ಸಾಲ್ಟ್-ವಾಟರ್ ಎಕ್ಸ್‌ಕ್ಲೂಜನ್ ಡ್ಯಾಮ್ ಹಾಕುವುದಕ್ಕೆ ಪ್ರಯತ್ನವನ್ನು ಮಾಡಿದರೆ ಖಂಡಿತವಾಗಿ ಕರಾವಳಿಯ ಜನರು ನಿಮಗೆ ಇನ್ನೂ ಹೆಚ್ಚು ಆಶೀರ್ವಾದ ಮಾಡುತ್ತಾರೆ. ಆದರಿಂದಾಗಿ ನಿಮಗೆ ಹೆಸರು ಬರುತ್ತದೆ. ನಾವು ಸಹ ನಿಮಗೆ ಆ ಕ್ರೆಡಿಟ್ ಕೊಡುವುದಕ್ಕೆ ತಯಾರಾಗಿದ್ದೇವೆ. ಕೇವಲ 150 ಕೋಟಿ ರೂಪಾಯಿಗಳನ್ನು ಕೊಟ್ಟು ನಮ್ಮ ಒಂದು ಸಾಲ್ಟ್ ವಾಟರ್ ಎಕ್ಸ್‌ಕ್ಲೂಜನ್ ಡ್ಯಾಮ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. II ಇನ್ನೊಂದು ಮುಖ್ಯವಾಗಿ ಒರಿಸ್ಸಾದಲ್ಲಿ ಆಗಿರುವ ಚಂಡಮಾರುತಕ್ಕೆ ತಾವು ಏನು ಸಹಕಾರವನ್ನು ಕೊಟ್ಟಿರುತ್ತೀರಿ ಅದಕ್ಕೆ ಸ್ವಾಗತವನ್ನು ಮಾಡುತ್ತೇನೆ. ಅದರೊಂದಿಗೆ ನಮ್ಮಲ್ಲಿ ಬಂದಿರುವ ಅತಿವೃಷ್ಟಿ ಅನಾವೃಷ್ಟಿ ಪ್ರದೇಶಗಳಿಗೆ, ನಾನು ಹಿಂದೆ ಒಂದು ಸಲ ಸಭೆಯಲ್ಲಿ ಮಾತನಾಡುವಾಗ ಹೇಳಿದೆ. ಅನಾವೃಷ್ಟಿಯಾಗಿರುವ ಇಲ್ಲಿರುವ ಕೃಷಿಕನಿಗೆ ಹೆಕ್ಟೇರ್‌ಗೆ 500 ರೂಪಾಯಿಗಳನ್ನು ಕೊಡುವಂಥಾದ್ದು, ಆ ಹಣವನ್ನು ಅವನಿಗೆ ತೆಗೆದುಕೊಂಡು ಬರಲಿಕ್ಕೆ ಅಷ್ಟು ಹಣ ಖರ್ಚಾಗುತ್ತದೆ. ಅದರ ಬಗ್ಗೆ ಸ್ವಲ್ಪ ಗಮನವನ್ನು ಹರಿಸಬೇಕಾಗುತ್ತದೆ. ಹೆಕ್ಟೇರ್‌ಗೆ 500 ರೂಪಾಯಿಗಳಿಗಿಂತ ಜಾಸ್ತಿ ಹಣವನ್ನು ಕೊಡಬೇಕಾಗುತ್ತದೆ. ಒಂದು ತೆಂಗಿನ ಮರ ನಷ್ಟಗೊಂಡರೆ ಅದಕ್ಕೆ ಒಂದ ನೂರು ರೂಪಾಯಿಗಳನ್ನು ಕೊಡುವಂಥಾದ್ದು, ಖಂಡಿತವಾಗಿ ಅದು ಸಾಕಾಗುವುದಿಲ್ಲ. ಒಂದು ತೆಂಗಿನ ಮರ ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆ, ಅವನಿಗೆ ಒಂದು ತೆಂಗಿನ ಮರಕ್ಕೆ ಒಂದು ನೂರು ರೂಪಾಯಿಗಳನ್ನು ಕೊಟ್ಟರೆ ಸಾಕಾಗುತ್ತದೆಯೇ? ಇದರ ಬಗ್ಗೆ ಸ್ವಲ್ಪ ಗಮನವನ್ನು ಹರಿಸಿ ಹೆಚ್ಚಿನ ಹಣವನ್ನು ಅತಿವೃಷ್ಟಿ ಹಾಗೂ ಅನಾವೃಷ್ಟಿ ಪ್ರದೇಶಗಳಿಗೆ ಕೊಡಬೇಕು, ಅದರಲ್ಲೂ ಈ ಕರಾವಳಿ ಪ್ರದೇಶದ ನಾವುಗಳು ಪ್ರತಿವರ್ಷ ಈ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಮಾನ್ಯ ಮೀನುಗಾರಿಕೆ ಸಚಿವರು ಇಲ್ಲಿಯೇ ಇದ್ದಾರೆ, ನಾನು ಅವರ ಹೇಳಿಕೆಯನ್ನು ಬೆಳಿಗ್ಗೆ ಓದಿರುತ್ತೇನೆ. ನಮ್ಮ ಸರ್ಕಾರ ಇದ್ದಾಗ ಮೀನುಗಾರರ ಡೀಸೆಲ್ ಮೇಲಿನ ಸೇಲ್ಸ್ ಟ್ಯಾಕ್ಸ್‌ನ್ನು ಎಗ್ಸಂಪ್‌ಷನ್ ಮಾಡಿದ್ದು, ಅಲ್ಲಿರುವ ಅಧಿಕಾರಿಗಳು ಒಂದು ಆದೇಶವನ್ನು ಮಾಡುವಾಗ 30 ಸಾವಿರ ಕಿಲೋ ಲೀಟರ್ ಮಾಡಿದ್ದಾರೆ, ತಾವು ಅದನ್ನು 50 ಸಾವಿರ ಕಿಲೋ ಲೀಟರ್ ಮಾಡುತ್ತೇವೆಂದು ಹೇಳಿರುತ್ತೀರಿ ನನಗೆ ಬಹಳ ಸಂತೋಷವಾಯಿತು. ನಾನು ಹಾಗೂ ಆಗಿನ ನಮ್ಮ ಹಣಕಾಸು ಸಚಿವರು ಒಂದು ಹೇಳಿಕೆಯನ್ನು ಮಾಡಿದ್ದೆವು. 30 ಸಾವಿರ ಕಿಲೋ ಲೀಟರ್ ಮಾತ್ರ ಅಲ್ಲ, ಮೀನುಗಾರರು ಎಷ್ಟು ಡೀಸೆಲ್ ಖರ್ಚು ಮಾಡುತ್ತಾರೆ ಅಷ್ಟು ಡೀಸೆಲ್ ಮೇಲಿನ ಸೇಲ್ಸ್ ಟ್ಯಾಕ್ಸ್‌ನ್ನು ಎಗ್ಸಂಪ್‌ಷನ್ ಮಾಡುತ್ತೇವೆಂದು ಈ ಸದನದಲ್ಲಿಯೇ ಒಂದು ಹೇಳಿಕೆಯನ್ನು ಮಾಡಿದ್ದೆವು. ಆದ್ದರಿಂದ ದಯಮಾಡಿ 50-30 ಸಾವಿರ ಎಂದು ಅದನ್ನು ಅಲ್ಲಿಗೇ ನಿಲ್ಲಿಸುವುದಕ್ಕೆ ಹೋಗಬೇಡಿ. ಅದು ಎಷ್ಟು ಖರ್ಚಾಗುತ್ತದೆ ಅದನ್ನು ಪರಿಶೀಲಿಸಿ ಅಷ್ಟನ್ನು ಡೀಸೆಲ್ ಮೇಲಿನ ಸೇಲ್ಸ್ ಟ್ಯಾಕ್ಸ್ ಎಗ್ಸಂಪ್‌ಷನ್ ಮಾಡುವಂಥ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. II ಹಾಗೆಯೇ ಸಮುದ್ರದ ತಡೆಗೋಡೆಯ ಬಗ್ಗೆ ಈಗಾಗಲೇ ನಾವು 450 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿರುತ್ತೇವೆ, ಅದರಲ್ಲಿ 150 ಕೋಟಿ ರೂಪಾಯಿಗಳು ಮಂಜೂರಾಗಿದೆ

ಎಂದು ನನ್ನ ಗಮನಕ್ಕೆ ಬಂದಿದೆ. ಅದನ್ನು ಶೀಘ್ರದಲ್ಲಿ ಮಾಡಬೇಕು, ತಾತ್ಕಾಲಿಕ ತಡೆಗೋಡೆ ಮಾಡುವುದರಿಂದ ಯಾವುದೇ ಅರ್ಥವಿಲ್ಲ. ನಾವು ಪ್ರತಿವರ್ಷ ಮಾಡುವುದು, ಅದು ಕೊಚ್ಚಿಕೊಂಡು ಹೋಗುವುದು, ಅದರಲ್ಲಿ ಬಹಳ ಅವ್ಯವಹಾರ ಆಗಿದೆ ಎಂದು ಬಹಳಷ್ಟು ಚರ್ಚೆ ಅದರ ಬಗ್ಗೆ ನಡೆಯುತ್ತಿದೆ. ಅದಕ್ಕಾಗಿ ಒಂದು ತಡೆಗೋಡೆಯನ್ನು ಶಾಶ್ವತವಾಗಿ ಕಟ್ಟಲಿಕ್ಕೆ 150 ಕೋಟಿ ರೂಪಾಯಿಗಳ ಉಪಯೋಗವನ್ನು ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಸಮಯದ ಅಭಾವ ಇರುವುದರಿಂದ ಕೇವಲ ನನ್ನ ಮಾತನ್ನು ಒಂದು ನಿಮಿಷದಲ್ಲಿ ಮುಗಿಸಲಿಚ್ಛಿಸುತ್ತೇನೆ. ಮಾನ್ಯ ರಾಜ್ಯಪಾಲರ ಈ ಭಾಷಣ ಕೊನೆಯದಾಗಿದೆ. ನನಗೆ ಗೊತ್ತಿದೆ, ಎಲ್ಲ ವಿಷಯಗಳನ್ನು ರಾಜ್ಯಪಾಲರ ಭಾಷಣದಲ್ಲಿ ಅಳವಡಿಸುವುದಕ್ಕಾಗುವುದಿಲ್ಲ. ಒಂದೇ ತಿಂಗಳಲ್ಲಿ ಎಲ್ಲ ಯೋಜನೆಗಳನ್ನು ಇದರಲ್ಲಿ ಹಾಕಿ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ, ಈ ರಾಜ್ಯಪಾಲರ ಕೊನೆಯ ಭಾಷಣವಾಗಿದ್ದರಿಂದ, ನಾವು 21ನೇ ಹೊಸ ಶತಮಾನಕ್ಕೆ ಹೋಗುವಾಗ ಇನ್ನು ಹೆಚ್ಚಿನ ಕಾರ್ಯಕ್ರಮಗಳನ್ನು ಈ ಬಾರಿ ತೋರಿಸಬಹುದಾಗಿತ್ತು. ತಾವು ಇನ್ನು ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಕಾರ್ಯಕ್ರಮಗಳನ್ನು ಕೊಡಬೇಕಾಗುತ್ತದೆ. ಮುಖ್ಯವಾಗಿ ನಾವು ಆಲೋಚನೆ ಮಾಡಬೇಕಾದದ್ದು ಏನೆಂದರೆ: ನಾವು ಮುಂದಿನ 5 ವರ್ಷಗಳಲ್ಲಿ ಕೆಲಸವನ್ನು ಮಾಡಿ ಚುನಾವಣೆಯನ್ನು ಗೆಲ್ಲುವುದು ಮಾತ್ರವಲ್ಲ, ಮುಂದಿನ ಜನಾಂಗಕ್ಕೆ ನಾವು ಏನನ್ನು ಮಾಡುತ್ತೇವೆಂದು ಹೇಳಬೇಕು. The difference between a politician and a Statesman, ಅದರ ಬಗ್ಗೆ ಆಲೋಚನೆಯನ್ನು ಮಾಡಬೇಕು, Politician thinks or the next election. Statesman thinks of the next generation. ಅದರ ಬಗ್ಗೆ ಆಲೋಚನೆಯನ್ನು ಮಾಡಿ ನಾವು ಕಾರ್ಯಕ್ರಮವನ್ನು ಹಾಕಿಕೊಂಡರೆ, ಖಂಡಿತವಾಗಿ ನಮ್ಮ ರಾಜ್ಯದಲ್ಲಿ ಇನ್ನು ಹೆಚ್ಚಿನ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಒಂದು ಶತಮಾನದಲ್ಲಿ ಏನೇನು ಕೆಲಸಗಳನ್ನು ಮಾಡಬೇಕು, ನಾವು ಆ ಕೆಲಸಗಳನ್ನು ಕಡಿಮೆ ಮಾಡಿರುವುದಿಲ್ಲ. ನಾವು ಬಹಳಷ್ಟು ಕೆಲಸವನ್ನು ಮಾಡಿರುತ್ತೇವೆ. ನಾವು ಜಗಳವನ್ನು ಮಾಡಿಕೊಂಡು ನಮ್ಮನ್ನು ನಾವು ಹಾಳು ಮಾಡಿಕೊಂಡಿದ್ದೇವೆ. ಆದರೆ, ನೀವು ಅದನ್ನು ಮಾಡುವುದಕ್ಕೆ ಹೋಗಬೇಡಿ. ದಯಮಾಡಿ ನಿಮ್ಮ ಮಂತ್ರಿಗಳಿಗೆ ಸದನದಲ್ಲಿ ಬಂದು ಕುಳಿತುಕೊಳ್ಳುವುದಕ್ಕೆ ಹೇಳಿ, ಕೆಲಸವನ್ನು ಮಾಡುವುದಕ್ಕೆ ಹೇಳಬೇಕು. ನೀವು ಮಂತ್ರಿಮಂಡಲವನ್ನು ವಿಸ್ತರಣೆ ಮಾಡುವ ಮುಂಚೆ ಆಲೋಚನೆ ಮಾಡಿದ್ದರೆ, ನೀವು ಇನ್ನೂ ವಿಸ್ತರಣೆ ಮಾಡಿದರೆ ಟಾಪ್ ಹೆವಿ ಆಗುತ್ತದೆ. ವಿಸ್ತರಣೆ ಮಾಡಿದರೆ ನಮಗೆ ಸಂತೋಷವಾಗುತ್ತದೆ, ಆದರೆ ರಾಜ್ಯದ ಹಿತದೃಷ್ಟಿಯಿಂದ ಇದು ಆಗಬಾರದು. ಜನತೆಯ ಹಿತಾಸಕ್ತಿ ನಮ್ಮ ಹಿತಾಸಕ್ತಿ ಆಗಬೇಕೆಂದು ಹೇಳುತ್ತೇನೆ. ನಾವು ಇನ್ನೊಂದು ಸಲ ಅಧಿವೇಶನ ಸೇರುವಾಗ ನಾವು ಮುಂದಿನ ಶತಮಾನಕ್ಕೆ ಕಾಲಿಟ್ಟಿರುತ್ತೇವೆ. ಆದ್ದರಿಂದ ತಮ್ಮ ಮುಖೇನ ಸದನದ ಸದಸ್ಯರಿಗೂ, ರಾಜ್ಯದ ಜನತೆಗೂ ಹೊಸ ಶತಮಾನಕ್ಕೆ ಹೋಗುವಾಗ ಶುಭವನ್ನು ಕೋರುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಪರವಾಗಿ ಮಾತನಾಡುತ್ತಾ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅಂತರರಾಜ್ಯ ಜಲವಿವಾದವನ್ನು ಪರಸ್ಪರ ಸೌಹಾರ್ದಯುತ ಮಾತುಕತೆಯ ಮೂಲಕ

ಬಗೆಹರಿಸಿಕೊಳ್ಳಬೇಕೆನ್ನತಕ್ಕದ್ದು ಬಹಳ ಸ್ವಾಗತಾರ್ಹವಾದ ಅಂಶ. ಆದರೆ ಈವರೆಗಿನ ಸಂಧಾನದ ಫಲಶ್ರುತಿ ಕಾವೇರಿ ಜಲಾನಯನ ಪ್ರದೇಶದಿಂದ ತಮಿಳುನಾಡಿಗೆ ನೀರನ್ನು ಬಿಡುಗಡೆ ಮಾಡತಕ್ಕ ಒಂದು ನಿಲುವಿನಲ್ಲಿ ಪರ್ಯಾವಸಾನವಾಗತಕ್ಕದ್ದು ಬಹಳ ವಿಪರ್ಯಾಸದ ಸಂಗತಿ. ಈವೊಂದು ಕಾವೇರಿ ಜಲಾನಯನ ಪ್ರದೇಶದ ರೈತರು ಸೆಪ್ಟೆಂಬರ್-ಅಕ್ಟೋಬರ್ ಮಾಹೆಯಲ್ಲಿ ತಮ್ಮ ನೀರಿನ ಹಕ್ಕಿಗಾಗಿ ಹೋರಾಡತಕ್ಕ, ಅದಕ್ಕಾಗಿ ಪರಿತಪಿಸತಕ್ಕಂತಹ ಒಂದು ಪರಿಸ್ಥಿತಿ ನಿರ್ಮಾಣವಾಗತಕ್ಕದ್ದು ಬಹಳ ಜನ ರೈತರಲ್ಲಿ ಕಳವಳವನ್ನುಂಟು ಮಾಡಿರತಕ್ಕದ್ದಾಗಿದೆ. ಈವೊಂದು ಕಾವೇರಿ ಜಲವಿವಾದಕ್ಕೆ ಶಾಶ್ವತ ಪರಿಹಾರವನ್ನು ಕಂಡು ಹಿಡಿಯತಕ್ಕದ್ದು ಬಹಳ ಅಗತ್ಯ. 1991ರಲ್ಲಿ ರಾಜ್ಯದ ವಿಧಾನಮಂಡಲದ ಉಭಯ ಸದನಗಳಲ್ಲಿ ರಾಷ್ಟ್ರೀಯ ಜಲನೀತಿಯನ್ನು ರೂಪಿಸಬೇಕು, ಆ ರಾಷ್ಟ್ರೀಯ ಜಲ ನೀತಿಯ ಅಡಿಯಲ್ಲಿ ಈ ವಿವಾದ ಬಗೆಹರಿಯಬೇಕೆನ್ನತಕ್ಕ ಒಕ್ಕೊರಲಿನ ನಿರ್ಣಯವಾಗಿದೆ. ಆ ನಿರ್ಣಯದ ಪ್ರಕಾರ ರಾಷ್ಟ್ರೀಯ ಜಲನೀತಿಯನ್ನು ರೂಪಿಸತಕ್ಕ ಕಾರ್ಯ ಬಹಳ ತುರ್ತಾಗಿ ಆಗಬೇಕಾಗಿದೆ. ರಾಷ್ಟ್ರೀಯ ಜಲನೀತಿಯನ್ನು ರೂಪಿಸತಕ್ಕ ಕಾರ್ಯ ತೀವ್ರ ಮಂದಗತಿಯಲ್ಲಿದ್ದು ಇದಕ್ಕೆ ಚಾಲನೆ ಕೊಡಬೇಕಾದ ಒಂದು ದಿಸೆಯಲ್ಲಿ ರಾಜ್ಯ ಸರ್ಕಾರ ಕೇಂದ್ರಸರ್ಕಾರಕ್ಕೆ ಒಂದು ಒತ್ತಾಯಪೂರ್ವಕವಾದ ಆಗ್ರಹವನ್ನು ಮಾಡಬೇಕೆನ್ನುವ ಮನವಿಯನ್ನು ನಾನು ಸರ್ಕಾರಕ್ಕೆ ಮಾಡುತ್ತೇನೆ. ನಮ್ಮ ವಿಶ್ವೇಶ್ವರಯ್ಯ ನಾಲಾ ಬಯಲಿನಲ್ಲಿ ಕೊನೆಯ ಅಚ್ಚುಕಟ್ಟಿನ ಪ್ರದೇಶದಲ್ಲಿ ಈಗ ಮುರ್ನಾಲ್ಕು, ಐದು ವರ್ಷಗಳ ಹಿಂದೆ ಸುಮಾರು 20 ಏತ ನೀರಾವರಿ ಯೋಜನೆಗಳನ್ನು ಅಂದಿನ ಸರ್ಕಾರ ಕೈಗೊಂಡಿತ್ತು. ಈವೊಂದು ಕಾಮಗಾರಿ ಬಹಳ ವಿಳಂಬವಾಗಿ ಕಾಮಗಾರಿ ಕಾರ್ಯ ತುಂಬಾ ನಿಧಾನಗತಿಯಲ್ಲಿ ನಡೆಯುತ್ತಿತ್ತು. ಆವೊಂದು ಕೊನೆಯ ಭಾಗದ ರೈತರಿಗೆ ಬೆಳೆಯ ನಷ್ಟವುಂಟಾಗಿ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿ ಪ್ರತಿ ವರ್ಷ ಕೂಡ ನಷ್ಟವನ್ನು ಅನುಭವಿಸುತ್ತಿದ್ದಾರೆ. ಈ ಏತ ನೀರಾವರಿ ಕಾಮಗಾರಿಗಳೆಲ್ಲವನ್ನೂ ಪೂರ್ಣಗೊಳಿಸತಕ್ಕ, ತುರ್ತಾಗಿ ಕಾಮಗಾರಿಯನ್ನು ನಿರ್ವಹಿಸತಕ್ಕ ಆದೇಶವನ್ನು ಆ ಇಲಾಖೆಗೆ ನೀಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಕೆ.ಆರ್.ಎಸ್. ಅಚ್ಚುಕಟ್ಟು ಸುಮಾರು 50-60 ವರ್ಷಗಳಷ್ಟು ಹಳೆಯದಾದ ಅಚ್ಚುಕಟ್ಟು ಆಗಿರುತ್ತದೆ. ವಿತರಣಾ ನಾಲೆಗಳಲ್ಲಿ ಕೂಡ ಪುನರ್ ನವೀಕರಣವಾಗಬೇಕಾದ್ದು ಬಹಳ ಅವಶ್ಯವಾಗಿದೆ. ಈವೊಂದು ಆಧುನೀಕರಣ ಕಾರ್ಯಕ್ರಮವನ್ನು ಕೂಡ ಸರ್ಕಾರ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಪೂರ್ವಕವಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಾಲಾ ಬಯಲಿನ ಪ್ರದೇಶದಲ್ಲಿ ಇರಿಗೇಷನ್ ಫ್ಯಾಕ್ಟ್ ರೋಡ್ಸ್ ಇದ್ದು ಅದರಲ್ಲಿ ನಮ್ಮ ರೈತ ತಾನು ಬೆಳೆದ ಉತ್ಪನ್ನಗಳನ್ನು, ವ್ಯವಸಾಯ ಸಾಮಗ್ರಿಗಳನ್ನು ಸಾಗಿಸುವುದಕ್ಕೆ ಆ ರಸ್ತೆಗಳನ್ನು ಉಪಯೋಗ ಮಾಡುತ್ತಾರೆ. ಈಗ ಆ ರಸ್ತೆಯ ಒಡೆತನ ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲಿದ್ದು ಜಿಲ್ಲಾಪಂಚಾಯಿತಿಯವರು ಅದನ್ನು ನಿರ್ವಹಣೆ ಮಾಡಲಿಕ್ಕೆ ಸಂಪೂರ್ಣವಾಗಿ ಸಾಧ್ಯವಾಗದೆ ಆ ರಸ್ತೆಗಳೆಲ್ಲಾ ಹಾಳಾಗಿ ರೈತರಿಗೆ ತುಂಬಾ ತೊಂದರೆಯಾಗಿದೆ. ನೀರಾವರಿ ಇಲಾಖೆಗೆ ಇರಿಗೇಷನ್ ಫ್ಯಾಕ್ಟ್ ರೋಡ್‌ಗಳನ್ನು ಪುನಃ ಅವರ ವಶಕ್ಕೆ ಒಪ್ಪಿಸಿ ರೈತರಿಗೆ ಸಹಕಾರಿಯಾಗಬೇಕೆನ್ನತಕ್ಕ ಮಾತನ್ನು ಹೇಳುತ್ತೇನೆ. ನಮ್ಮ ಜಿಲ್ಲೆಯ ಪ್ರಮುಖ ಸಮಸ್ಯೆ ಅಥವ ರೈತರಲ್ಲಿ ಮಾಡಿರುವ ಜಿಜ್ಞಾಸೆಯೆಂದರೆ ವರುಣಾನಾಲೆಯ ತೂಬಿನ ವಿವಾದ. ಹಾಲಿ ಅಳವಡಿಸಿರತಕ್ಕ ತೂಬು 1200 ಕ್ಯೂಸೆಕ್ಸ್ ಅದಕ್ಕಿಂತ ಹೆಚ್ಚು ನೀರನ್ನು ಬಿಟ್ಟು ಹೆಚ್ಚು ಪ್ರದೇಶವನ್ನು

ವ್ಯವಸಾಯಕ್ಕೆ ಯೋಗ್ಯವಾಗಿ ಮಾಡತಕ್ಕ ಕೆಲಸ ಮಾಡುತ್ತಾರೆನ್ನುವ ಭಾವನೆ ನಮ್ಮ ರೈತರಲ್ಲಿ ಮೂಡಿದ್ದು, ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಮ್ಮ ರೈತರು ಪ್ರತಿರೋಧವನ್ನು ವ್ಯಕ್ತಪಡಿಸಿ ಮನವಿಯನ್ನು ಕೂಡ ಮಾಡಿದ್ದು ಆಗಿದೆ. ತಾಂತ್ರಿಕ ತಜ್ಞರ ನೆರವಿನಿಂದ ಈವೊಂದು ತೂಬಿನ ವಿವಾದವನ್ನು ಪರಿಹರಿಸಿಕೊಡಬೇಕೆಂದು ಹೇಳಿ ಸರ್ಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆದೇ ರೀತಿ ಮಂಡ್ಯ ರೈತ ಪ್ರತಿನಿಧಿಗಳು ಮತ್ತು ಸರ್ಕಾರದಲ್ಲಿ ಒಪ್ಪಂದ ಆದಾಗ ಉಸ್ತುವಾರಿ ಸಮಿತಿಯನ್ನು ಕಾವೇರಿ ಮತ್ತು ವಿಶ್ವೇಶ್ವರ ನಾಲಾ ಬಯಲು ಹಾಗೂ ವರುಣಾ ನಾಲಾ ಅಚ್ಚುಕಟ್ಟುದಾರರ ಮೇಲು ಉಸ್ತುವಾರಿ ಮಾಡಲಿಕ್ಕೆ ಸ್ಟ್ಯಾಟ್ಯುಟರಿ ಸ್ಟೇಟಸ್ ಇರತಕ್ಕ ಒಂದು ಸಮಿತಿಯನ್ನು ಮಾಡಬೇಕೆಂದು ಹೇಳಿ ಒಂದು ಒಪ್ಪಂದವಾಗಿತ್ತು. ಆ ಒಪ್ಪಂದದ ಪ್ರಕಾರ ಸಮಿತಿಯನ್ನು ಶೀಘ್ರವಾಗಿ ಮಾಡಬೇಕೆಂದು ಹೇಳುತ್ತೇನೆ. II ಕೃಷಿಗೆ ಹೆಚ್ಚು ಒತ್ತನ್ನು ಕೊಡುತ್ತೇವೆ, ಆಧುನಿಕವಾದ ಒಂದು ಪದ್ಧತಿಯನ್ನು ಕೃಷಿಯಲ್ಲಿ ಅಳವಡಿಸುತ್ತೇವೆ ಎನ್ನುವ ಮಾತನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಲಾಗಿದೆ. ಬೆಳಿಗ್ಗೆ ತಾನೇ ಈರುಳ್ಳಿ ಬೆಲೆ ಬಗ್ಗೆ ಬಹಳ ಚರ್ಚೆಯಾಯಿತು. ರೈತ ಬೆಳೆದ ಬೆಳೆಗೆ ಯೋಗ್ಯವಾದ ಬೆಲೆ ಸಿಗದೆ ರಸ್ತೆಯಲ್ಲಿ ಪ್ರತಿಭಟನೆ ಮಾಡತಕ್ಕ ಸಮಯದಲ್ಲಿ ಅದು ಕಬ್ಬು ಇರಬಹುದು, ಬತ್ತ ಇರಬಹುದು, ತರಕಾರಿ ಇರಬಹುದು ಈವೊಂದು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕನಿಷ್ಠ ಬೆಲೆ ವೈಜ್ಞಾನಿಕ ಆಧಾರದ ಮೇಲೆ ತನ್ನ ಖರ್ಚು ವೆಚ್ಚವನ್ನು ಹೋಲಿಸಿ ನೋಡಿ ಒಂದು ಫೇರ್ ಪ್ರೈಸನ್ನು ಫಿಕ್ಸ್ ಮಾಡತಕ್ಕ ಒಂದು ವ್ಯವಸ್ಥೆಯನ್ನು ಸರ್ಕಾರ ಕೈಗೊಳ್ಳಬೇಕೆನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕೂಡ ಕೃಷ್ಣರಾಜಪೇಟೆ, ಪಾಂಡವಪುರ, ಮಂಡ್ಯ ತಾಲ್ಲೂಕುಗಳಲ್ಲಿ ಅತಿವೃಷ್ಟಿಯಿಂದ ಅಪಾರ ಹಾನಿಗೆ ಒಳಗಾಗಿ ಸುಮಾರು 20 ಕೋಟಿ ರೂಪಾಯಿಗಳ ಮೇಲೆ ನಷ್ಟವಾಗಿದೆ ಎನ್ನುವುದನ್ನು ಅಂದಾಜು ಮಾಡಲಾಗಿದೆ. ಇದಕ್ಕೆ ವಿಶೇಷ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡಿ ನೊಂದ ರೈತರಿಗೆ ಪರಿಹಾರವನ್ನು ಕೊಡತಕ್ಕ ಕಾರ್ಯವನ್ನು ಮಾಡಬೇಕೆನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಮಂಡ್ಯ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಮಂಡ್ಯ ನಗರದ ಎರಡನೆಯ ಹಂತದ ಕಾವೇರಿ ಕುಡಿಯುವ ನೀರಿನ ಯೋಜನೆಯನ್ನು ತುರ್ತಾಗಿ ಸಂಪೂರ್ಣಗೊಳಿಸಿ ನಮ್ಮ ಭಾಗದ ಜನತೆಗೆ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಿಕೊಡಬೇಕೆನ್ನತಕ್ಕ ಮಾತನ್ನು ನಾನು ಹೇಳುತ್ತೇನೆ. ಈಗ ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಮಾಡಬೇಕೆನ್ನತಕ್ಕದ್ದು ನಿರ್ಣಯವಾಗಿರತಕ್ಕ ಕಾಲದಲ್ಲಿ ನಮ್ಮ ಭಾಗದ ರೈತರು ಅದಕ್ಕಾಗಿ ವಶಪಡಿಸಿಕೊಂಡಿರತಕ್ಕ ಜಮೀನಿನ ಬಗ್ಗೆ ಪ್ರತಿರೋಧವನ್ನು ವ್ಯಕ್ತಪಡಿಸಿ ನಿಗದಿಯಾಗಿರುವುದಕ್ಕಿಂತ ಹೆಚ್ಚು ಜಮೀನನ್ನು ವಶಪಡಿಸಿಕೊಳ್ಳುತ್ತಿದ್ದಾರೆಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅದರ ಸಾಧಕಬಾಧಕಗಳನ್ನು ರೈತರೊಟ್ಟಿಗೆ ಕುಳಿತು ಚರ್ಚೆ ಮಾಡಿ ಈವೊಂದು ಎಕ್ಸ್‌ಪ್ರೆಸ್ ಹೈವೇ ಬಗ್ಗೆ ಪುನರ್ ಪರಿಶೀಲನೆ ಮಾಡಿ ನಿರ್ಣಯವನ್ನು ತೆಗೆದುಕೊಳ್ಳಬೇಕೆನ್ನತಕ್ಕ ವಿಚಾರವನ್ನು ಹೇಳಿ ಈ ಸಂದರ್ಭದಲ್ಲಿ ನಾನು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು): ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ನಾನು ಮಾತನಾಡುವಾಗ ವಿಶೇಷವಾಗಿ ನನ್ನ ಜಿಲ್ಲೆಯ

ಕರಾವಳಿ ಪ್ರದೇಶದ ಬಗ್ಗೆ ಮತ್ತು ಮೀನುಗಾರಿಕೆ ಬಗ್ಗೆ ಅದೇ ರೀತಿಯಲ್ಲಿ ಸ್ಪಷ್ಟವಾಗಿ ಉದ್ಯೋಗ ನೀತಿಗಳ ಬಗ್ಗೆ, ಕ್ರೀಡಾ ನೀತಿಗಳ ಬಗ್ಗೆ ಹೆಚ್ಚಿನ ಯಾವುದೇ ಉಲ್ಲೇಖವನ್ನು ಮಾಡದಿರುವುದರಿಂದ ಅದನ್ನು ವಿರೋಧಿಸಿ ಅದರ ಜೊತೆಯಲ್ಲಿ ಅತ್ಯುತ್ತಮ ಸಲಹೆಗಳು ಕೂಡ ಇರುವುದರಿಂದ ಅದರ ಬಗ್ಗೆ ನನ್ನ ಅನಿಸಿಕೆಗಳನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಮೀನುಗಾರಿಕಾ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಮೀನುಗಾರಿಕಾ ಅಭಿವೃದ್ಧಿಯ ಬಗ್ಗೆ ಮೀನುಗಾರಿಕಾ ಮನೆಗಳು, ಜಟ್ಟಿ ನಿರ್ಮಾಣ, ಹೂಳೆತ್ತುವಿಕೆ, ತಡೆಗೋಡೆ ನಿರ್ಮಾಣ ಹೀಗೆ ಅನೇಕ ಸಂಗತಿಗಳನ್ನು ಮಾನ್ಯ ಸಚಿವರು ಹೇಳಿದರು. ನಾನು ಇದರ ಜೊತೆಯಲ್ಲಿ ವಿಶೇಷವಾಗಿ ರಫ್ತು ಉದ್ಯಮಕ್ಕೆ ಪೂರಕವಾಗುವಂತಹ ಮೀನುಗಾರಿಕಾ ನೀತಿ, ಯೋಜನೆಗಳನ್ನು ತಾವು ಘೋಷಣೆ ಮಾಡಬೇಕು. ಮುಂದಿನ ದಿವಸಗಳಲ್ಲಿ ಕೇವಲ ಮೀನುಗಾರಿಕಾ ಸ್ವಾವಲಂಭಿ ಜೀವನ ನಡೆಸುವಂತಹ ನಿಟ್ಟಿನಲ್ಲಿ ಈ ತರಹ ರಫ್ತು ಉದ್ಯಮಕ್ಕೆ ಪೂರಕವಾಗಿರುವಂತಹ ನೀತಿಯನ್ನು ಘೋಷಣೆ ಮಾಡುವ ಜೊತೆಯಲ್ಲಿ ಮತ್ಸ್ಯ ಸಂಪತ್ತನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕೋಸ್ಟಲ್ ಜೋನ್ ಮ್ಯಾನೇಜ್‌ಮೆಂಟ್ ಅಂತ ಯಾವುದು ಇದೆ ಕೆ.ಆರ್.ಜಡ್. ಮ್ಯಾನೇಜ್‌ಮೆಂಟ್ ಅದನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರುವ ರೀತಿಯಲ್ಲಿ ವಿಶೇಷವಾದ ಅಧ್ಯಯನ ನಡೆಸಬೇಕು. ವಿಶೇಷವಾಗಿ ಮೆಗಾ-ಇಂಡಸ್ಟ್ರಿಗಳಿಂದ ಆಗುವಂತಹ ತ್ಯಾಜ್ಯವಿರಬಹುದು, ಮಹಾನಗರ ಪಾಲಿಕೆ ಅಥವ ಇನ್ನಿತರ ಕಡೆಗಳಿಂದ ಡ್ರೈನೇಜ್ ನೀರು ಅದರಲ್ಲಿ 15 ಬಿ.ಒ.ಡಿ. ಇದ್ದು ಅದರಲ್ಲಿ 5 ಬಿ.ಒ.ಡಿ ಗಿಂತ ಜಾಸ್ತಿಯಿದ್ದರೆ ಬಯಾಲಜಿಕಲ್ ಪ್ರಕಾರ 5 ಕ್ಕಿಂತ ಜಾಸ್ತಿಯಿದ್ದರೆ ಮೀನುಗಳು ಸಾಯುತ್ತವೆಂದು ಹೇಳುತ್ತಾರೆ. 15 ಬಿ.ಒ.ಡಿ.ಗಿಂತ ಜಾಸ್ತಿಯಿರುವಂತಹ ಕಲುಷಿತ ನೀರು ಸಮುದ್ರಕ್ಕೆ ಮತ್ತು ನದಿಗೆ ಸೇರಿ ಆಗುವಂತಹ ಅನಾಹುತಗಳನ್ನು ತಡೆಯುವಂತಹ ರೀತಿಯಲ್ಲಿ ಕೂಡ ವಿಶೇಷ ಪ್ರಯತ್ನವನ್ನು ಮಾಡುವಂತಹ ನಿಟ್ಟಿನಲ್ಲಿ ತಾವು ಪ್ರಯತ್ನ ಮಾಡಬೇಕೆನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ.

ಈ ಕ್ರೀಡಾ ನೀತಿಗೆ ಸಂಬಂಧಪಟ್ಟ ಹಾಗೆ ವಿಶೇಷವಾಗಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವಂತಹ ಕ್ರೀಡಾಪಟುಗಳಿಗೆ ಅವರಿಗೆ ಬೇಕಾಗುವಂತಹ ಎಲ್ಲ ತರಹದ ಪ್ರವಾಸದ ವೆಚ್ಚವನ್ನು ಭರಿಸುವಂತಹ ಹೊಣೆಗಾರಿಕೆಯನ್ನು ಸರ್ಕಾರವೇ ವಹಿಸಬೇಕೆನ್ನುವಂತಹ ಒತ್ತಾಯವನ್ನು ಮಾಡುತ್ತೇನೆ. ಎಸ್‌ಎಸ್‌ಎಲ್‌ಸಿಗಿಂತ ಮೇಲ್ಪಟ್ಟ ವಿದ್ಯಾರ್ಹತೆಯನ್ನು ಹೊಂದಿರುವ ಗ್ರಾಮಾಂತರ ಪ್ರದೇಶಗಳಿಂದ ಬಂದಿರುವಂತಹ ಕ್ರೀಡಾಪಟುಗಳಿಗೆ ಕ್ರೀಡಾ ಹಾಸ್ಟಲ್‌ನ್ನು ನಿರ್ಮಾಣ ಮಾಡಬೇಕು. ಮತ್ತೆ ವಿಶೇಷವಾಗಿ ಕ್ರೀಡಾಪಟುಗಳಿಗೆ 15 ಪ್ರತಿಶತ ಗ್ರೇಸ್ ಮಾರ್ಕ್ಸ್‌ಗಳನ್ನು ಕೊಡುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಂಡು ಅವರಿಗೆ ಆ ರೀತಿಯಲ್ಲಿ ಕೊಟ್ಟು ಬಹುಶಃ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಪಕ್ಕದ ಕೇರಳ ರಾಜ್ಯದಲ್ಲಿ ಇದನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಇದನ್ನು ಕೂಡ ನಮ್ಮಲ್ಲಿ ಅನುಷ್ಠಾನಕ್ಕೆ ತಂದು ತಾವು ಕ್ರೀಡಾಪಟುಗಳಿಗೆ ಪ್ರೋತ್ಸಾಹವನ್ನು ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಪ್ರತಿ ಜಿಲ್ಲಾ ಕೇಂದ್ರಗಳಲ್ಲಿಯೂ ಒಳಾಂಗಣ ಕ್ರೀಡಾಂಗಣ, ಸಿಂಥೆಟಿಕ್ ಟ್ರ್ಯಾಕ್‌ಗಳು ಹಾಗೂ ಜಿಲ್ಲಾಮಟ್ಟದ ಕ್ರೀಡಾ ಪ್ರಾಧಿಕಾರವನ್ನು ಮಾಡಬೇಕೆನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ನಾನು ಇಚ್ಛಿಸುತ್ತೇನೆ. ಹಾಗೂ ಕ್ರೀಡಾ ಇಲಾಖೆ ವಿಶೇಷವಾಗಿ ಬಹುಮಟ್ಟದ

ಅಧಿಕಾರಿಗಳೆಲ್ಲ ಬೆಂಗಳೂರಿನಲ್ಲೇ ಕೇಂದ್ರೀಕೃತವಾಗಿರುವುದರಿಂದ ಜಿಲ್ಲಾಮಟ್ಟದಲ್ಲಿ ಇಲಾಖೆಯನ್ನು ಉತ್ತಮಗೊಳಿಸುವ ವಿಶೇಷ ವ್ಯವಸ್ಥೆಯನ್ನು ಮಾಡಬೇಕು. ಉದ್ಯೋಗದ ಬಗ್ಗೆ ಸರ್ಕಾರದ ನೀತಿ ಸ್ಪಷ್ಟವಾಗಿ ಘೋಷಣೆಯಾಗಬೇಕು. ಅದು ಕೈಗಾರಿಕೆಗಳು ಇರಬಹುದು, ಸಣ್ಣ ಕೈಗಾರಿಕೆಗಳು ಇರಬಹುದು ಯಾವುದೇ ಕೈಗಾರಿಕೆಗಳು ಬಂದಾಗ ನೀತಿಗಳು ಕೂಡ ಘೋಷಣೆಯಾಗಬೇಕು. ಉದ್ಯೋಗಕ್ಕೆ ಎಂಪ್ಲಾಯಿಮೆಂಟ್ ಓರಿಯೆಂಟೇಷನ್‌ಗೆ ಹೆಚ್ಚಿನ ವಿಶೇಷ ಒತ್ತುಕೊಡುವ ನಿಟ್ಟಿನಲ್ಲಿ ಅವಕಾಶ ಕೊಡಬೇಕಾಗಿದೆ. ಸ್ವರ್ಣಜಯಂತಿ ರೋಜ್‌ಗಾರ್ ಯೋಜನೆಗಳು ಈ ರೀತಿಯ ರೋಜ್‌ಗಾರ್ ಯೋಜನೆಗಳು ಅನುಷ್ಠಾನಕ್ಕೆ ಬರಲಿಕ್ಕೆ ಬ್ಯಾಂಕುಗಳಿಂದ ತೊಂದರೆಗಳು ಬರುತ್ತಿರುವುದರಿಂದ ಅದನ್ನು ಕೂಡ ಸರಿಪಡಿಸುವಲ್ಲಿ ಮಹತ್ತರ ಹೆಜ್ಜೆಯನ್ನು ಸರ್ಕಾರ ಇಡಬೇಕು.

5.00 ಪಿ.ಎಂ.

ಈ ಉದ್ಯೋಗ ವಿನಿಮಯ ಕೇಂದ್ರಗಳು ಇವತ್ತು ಯಾವುದು ಇವೆ, ಹನ್ನೆರಡು-ಹದಿನೈದು ವರ್ಷಗಳು ದಾಟಿದರೂ ಕೂಡ ಇವತ್ತು ಕರೆಯೋಲೆ ಬರುತ್ತಿಲ್ಲ. ಕೆಲವು ವ್ಯಕ್ತಿಗಳಿಗೆ ಪ್ರಭಾವ ಇದ್ದವರಿಗೆ ಅಥವಾ ಭಾರವನ್ನು ಅಲ್ಲಿ ಟೇಬಲ್ ಮೇಲೆ, ಫೈಲ್ ಮೇಲೆ ಇಟ್ಟವರಿಗೆ ಮಾತ್ರ ಈ ಕರೆಗಳು ಬರುತ್ತವೆ ಎನ್ನುವಂಥ ಹಿನ್ನಲೆಯಲ್ಲಿ ಈ ವ್ಯವಸ್ಥೆಯನ್ನು ಸರಿಪಡಿಸಬೇಕು ಎಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ನಾನು ಇಚ್ಛಿಪಡುತ್ತೇನೆ.

ಈ ಪ್ರವಾಸೋದ್ಯಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಬಹುಶಃ ಕರ್ನಾಟಕ ರಾಜ್ಯವನ್ನು ಐ.ಟಿ. ಪಾರ್ಕ್‌ನ ಮೂಲಕ ಮಾತ್ರವಲ್ಲ ಇನ್ನೂ ಹೆಚ್ಚಿನ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಪ್ರಾತಿನಿಧ್ಯ ಕೊಟ್ಟಲ್ಲಿ ಇದನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಹೆಚ್ಚಿನ ಸಂಪನ್ಮೂಲಗಳನ್ನು ಜೋಡಿಸುವುದರ ಜೊತೆಗೆ ಹೆಚ್ಚಾಗಿ ನಮ್ಮ ಯುವಕರಿಗೆ ಉದ್ಯೋಗಾವಕಾಶವನ್ನು ಕೂಡ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿನಂತಿಯನ್ನು ಮಾಡುತ್ತೇನೆ. ಬಹುಶಃ ಈ ಸಂದರ್ಭದಲ್ಲಿ ಮಂಗಳೂರಿನಲ್ಲಿ ಸೆಕೆಂಡ್ ರನ್‌ವೇಗೆ ಸಂಬಂಧಪಟ್ಟಂತೆ 5 ಕೋಟಿ ರೂಪಾಯಿಗಳನ್ನು ಲ್ಯಾಂಡ್ ಅಕ್ವಿಸಿಷನ್‌ಗೆ ಮತ್ತು ಪುನರ್‌ವಸತಿಗೆ ತಾವು ಕೊಟ್ಟಲ್ಲಿ ಸುಮಾರು 125 ಕೋಟಿ ರೂಪಾಯಿಗಳ ಪ್ಯಾಕೇಜ್ ಕೇಂದ್ರ ಸರ್ಕಾರದ್ದು ಬರುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಅಂತರಾಷ್ಟ್ರೀಯ ಮಟ್ಟದಲ್ಲಿ ವಿಮಾನ ನಿಲ್ದಾಣವನ್ನು ಬೆಂಗಳೂರಿನ ಹಾಗೆ ಮಂಗಳೂರಿನಲ್ಲಿ ಕೂಡ ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ರಫ್ತು ಉದ್ಯಮಕ್ಕೆ ಮತ್ತು ಪ್ರವಾಸೋದ್ಯಮದ ಪ್ರಮುಖ ಕೇಂದ್ರವನ್ನಾಗಿ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ವಿಶೇಷವಾಗಿ ಮಂಗಳೂರಿನ ಎನ್.ಎಂ.ಪಿ.ಟಿ.ಯಲ್ಲಿ ಕಂಟಿನ್ಯೂಯಸ್ ಸರ್ವಿಸ್‌ಗೆ ತಾವು ಹೆಚ್ಚಿನ ಆದ್ಯತೆಯನ್ನು ಕೊಟ್ಟಲ್ಲಿ ಬಹುಶಃ ರಫ್ತು ಉದ್ಯಮಕ್ಕೆ ವಿಶೇಷವಾದ ಪ್ರೋತ್ಸಾಹ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿನಂತಿಯನ್ನು ನಾನು ಮಾಡುತ್ತಿದ್ದೇನೆ. ಇದರ ಜೊತೆಯಲ್ಲಿ ಫೈವ್‌ಸ್ಟಾರ್, ಸೆವೆನ್‌ಸ್ಟಾರ್ ಹೋಟೆಲ್‌ಗಳಿಗೆ ತಾವು ಕೊಡುವಂಥ ಸಬ್ಸಿಡಿ ಏನಿದೆ ಅದೇ ರೀತಿ ಏನು ಈ ಸಣ್ಣ ಮಟ್ಟದಲ್ಲಿ ಪ್ರವಾಸಿ ಕಾರುಗಳನ್ನು ಓಡಿಸುತ್ತಾರೆ ಅವರಿಗೂ ಕೂಡ ಕೊಡುವುದಕ್ಕೆ ಸಾಧ್ಯವಾದಲ್ಲಿ, ಬಹುಶಃ ಅವುಗಳಿಗೆ ಉಪಯೋಗಿಸುವ ಇಂಧನ ಏನಿದೆ ಅದನ್ನು ಸಬ್ಸಿಡೈಸ್ಡ್ ರೇಟ್‌ನಲ್ಲಿ ಅಥವಾ ಅವರಿಗೆ ಮಾರಾಟ ತೆರಿಗೆಯನ್ನು ರದ್ದುಪಡಿಸಿ ಯಾವ ರೀತಿಯಲ್ಲಿ ಮೀನುಗಾರಿಕೆ ಇಲಾಖೆಯಲ್ಲಿ ಕೊಡುತ್ತೀರೋ ಹಾಗೆ ಕೊಡುವುದಕ್ಕೆ ಸಾಧ್ಯವಿದ್ದಲ್ಲಿ ಪ್ರವಾಸೋದ್ಯಮವನ್ನು ಇನ್ನೂ ಹೆಚ್ಚು ಸ್ವಾವಲಂಬಿಯಾಗಿ ಮಾಡುವುದಕ್ಕೆ, ಯುವಕರಿಗೆ ಉದ್ಯೋಗಾವಕಾಶ ಕೊಡುವುದಕ್ಕೆ

ನಾನು ಹೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ವಿಶೇಷವಾಗಿ ಬೃಹತ್ ಉದ್ಯಮದ ಬಗ್ಗೆ ಒಂದು ತರಹ ಅಲರ್ಜಿ ಉಂಟಾಗಿದೆ. ಅದಕ್ಕೋಸ್ಕರ ಧಾರಣಶಕ್ತಿ ಅಥವಾ ಕ್ಯಾರಿಯಿಂಗ್ ಕೆಪ್ಯಾಸಿಟಿ ಅಂತ ಏನು ಹೇಳುತ್ತಾರೆ ಅದರ ಬಗ್ಗೆ ಅಧ್ಯಯನ ಮಾಡುವ ನಿಟ್ಟಿನಲ್ಲಿ ಕಳೆದ ಸರ್ಕಾರ ಶ್ರೀ ಮಹದೇವ ಗಾಡ್ಗೀಲ್ ಅವರ ನೇತೃತ್ವದಲ್ಲಿ ಒಂದು ಕಮಿಟಿ ಫಾರ್ಮೇಷನ್ ಮಾಡಿತ್ತು. ಆದರೆ ಒಂದು ನಿಗದಿತ ಅವಧಿಯವರೆಗೆ ಇಲ್ಲಿ ಇರುವಂಥ ಕ್ಯಾರಿಯಿಂಗ್ ಕೆಪ್ಯಾಸಿಟಿ ಎಷ್ಟು ಎಂದು ಹೇಳಿ ಅಧ್ಯಯನ ಆದನಂತರವೇ ಈ ಮೆಗಾ ಇಂಡಸ್ಟ್ರೀಸ್‌ಗಳಿಗೆ ಅವಕಾಶ ಕೊಡಬೇಕು. ಅಲ್ಲಿಯತನಕ ಯಾವುದೇ ಬೃಹತ್ ಉದ್ಯಮಗಳಿಗೆ ಅವಕಾಶ ಕೊಡಬಾರದು ಎಂಬ ವಿನಂತಿಯನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತೇನೆ. ಮತ್ತೆ ಜನ ಸಾಮಾನ್ಯರಿಗೆ ಒಂದು ನೀತಿ, ಕೈಗಾರಿಕೋದ್ಯಮಿಗಳಿಗೆ ಒಂದು ನೀತಿ ಅಂತ ಪಕ್ಷಪಾತದ ಧೋರಣೆಯನ್ನು ಸರ್ಕಾರ ಇಟ್ಟುಕೊಳ್ಳಬಾರದು. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇಲ್ಲಿ ಇರುವಂಥ ಮೆಗಾ ಇಂಡಸ್ಟ್ರೀಸ್‌ಗಳಾದ ಎಂ.ಆರ್.ಪಿ.ಎಲ್, ಇರಬಹುದು, ಬಿ.ಎಸ್.ಎಫ್ ಇರಬಹುದು, ಇಂತಹ ಸಂಸ್ಥೆಗಳು ಸುಮಾರು 27 ಕೋಟಿ ರೂಪಾಯಿಗಳಷ್ಟು ಮಂಗಳೂರು ನಗರ ಅಭಿವೃದ್ಧಿ ಪ್ರಾಧಿಕಾರಕ್ಕೆ ಬಾಕಿ ಇಟ್ಟುಕೊಂಡಿದ್ದಾರೆ. ಆದರೂ ಕೂಡ ಇವರುಗಳು ಎಕ್ಸ್‌ಟೆನ್‌ಷನ್ ವರ್ಕ್‌ನ್ನು ಮಾಡುತ್ತಿದ್ದಾರೆ. ಮೂರು ಮಿಲಿಯನ್ ಟನ್‌ನಿಂದ ಒಂಬತ್ತು ಮಿಲಿಯನ್ ಟನ್‌ವರೆಗೆ ಅವರ ವಿಸ್ತರಣೆ ಹೋಗುತ್ತಿದೆ. ಆದರೆ ಯಾವುದೇ ಕಾರಣದಿಂದ ಈ ವಸೂಲಾತಿಯನ್ನು ಮಾಡುವುದಕ್ಕೆ ಸರ್ಕಾರ ವಿಫಲವಾಗಿದೆ. ಬಹುಶಃ ಈ ಹಣ ಸಿಕ್ಕಲ್ಲಿ ಅನೇಕ ರೀತಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಮಾಡುವುದಕ್ಕೆ ಸಾಧ್ಯತೆ ಇತ್ತು. ಇದನ್ನು ಸರ್ಕಾರ ಕೂಡಲೇ ವಸೂಲು ಮಾಡಬೇಕು ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಈ ಹಣವನ್ನು ಕೊಡಬೇಕೆಂದು ಒತ್ತಾಯವನ್ನು ಕೂಡ ಈ ಸಂದರ್ಭದಲ್ಲಿ ನಾನು ಮಾಡುತ್ತೇನೆ. II ಇನ್ನು ಮೂಲಭೂತ ಸೌಲಭ್ಯಗಳಿಗೆ ಸಂಬಂಧಪಟ್ಟ ಹಾಗೆ ಮಂಗಳೂರು ಮಹಾನಗರಪಾಲಿಕೆಗೆ 210 ಕೋಟಿ ರೂಪಾಯಿಗಳ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ನೆರವು ಶೀಘ್ರದಲ್ಲಿ ಸಿಗುವ ನಿಟ್ಟಿನಲ್ಲಿ ಸರ್ಕಾರ ವಿಶೇಷ ಪ್ರಭಾವ ಬೀರಿ ಸಹಕಾರ ಕೊಡಬೇಕು. ಮೈಸೂರಿನಲ್ಲಿ ನಮ್ಮ ಮಾನ್ಯ ಸದಸ್ಯರು ಹೇಗೆ ಪ್ರತಿಭಟನೆಯನ್ನು ಮಾಡಿದ್ದರು ಅದೇ ರೀತಿಯಲ್ಲಿ ಯಾವುದೇ ಹಣ ದುರ್ವಿನಿಯೋಗ ಆಗದ ರೀತಿಯಲ್ಲಿ ಅದನ್ನು ತಕ್ಷಣ ಅದರ ಅನುಷ್ಠಾನ ಯೋಗ್ಯವಾದ ರೀತಿಯಲ್ಲಿ ಆಗುವ ಹಾಗೆ ಸ್ಥಳೀಯ ಮಟ್ಟದಲ್ಲಿ ಇರುವಂಥ ನಾಗರೀಕ ಸಮಿತಿಯನ್ನು ಮಾಡಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಇದರ ಜೊತೆಗೆ ಸ್ಟೇಟ್ ಫೈನಾನ್ಸ್ ಕಮೀಷನ್ ವರದಿಯನ್ನು ಅನುಷ್ಠಾನಕ್ಕೆ ತರಬೇಕು. ಅಲ್ಲಿ ಕೊರತೆ ಇರುವ ಸಿಬ್ಬಂದಿಯನ್ನು ನೇಮಕಾತಿ ಮಾಡಬೇಕು. ಇದೇ ರೀತಿ ಇವತ್ತು ಅನೇಕ ಸಂದರ್ಭಗಳಲ್ಲಿ ಏನಾಗಿದೆ ಎಂದರೆ ನಮ್ಮ ಬೇಡಿಕೆಗಳನ್ನು ನ್ಯಾಯಾಲಯದಲ್ಲಿ ಇಟ್ಟಲ್ಲಿ ಮಾತ್ರ ಮಾನ್ಯತೆ ಮಾಡುತ್ತಾರೆ ಎನ್ನತಕ್ಕಂಥ ಅನಿಸಿಕೆ ಇದೆ. ಈ ಕಾರಣಕ್ಕೋಸ್ಕರ ವಿಶೇಷವಾಗಿ ಗ್ರಾಮಸೇವಕರು, ಹತ್ತು ಸಾವಿರ ಇರತಕ್ಕಂಥ ಕಂದಾಯ ನೌಕರರು, ಕಂಟ್ರಾಕ್ಟ್‌ನಲ್ಲಿ ಇರುವಂಥ ವೈದ್ಯರು ಕೋರ್ಟಿಗೆ ಹೋಗಿ ತಮ್ಮ ನ್ಯಾಯವನ್ನು ಪಡೆಯುವುದಕ್ಕಿಂತ ಮೊದಲೇ ನಮ್ಮ ಸರ್ಕಾರದ ಮಟ್ಟದಲ್ಲೇ ಇದನ್ನು ತೀರ್ಮಾನ ಮಾಡಿಕೊಂಡು ಅವರಿಗೆ ನ್ಯಾಯವನ್ನು ಕೊಡಬೇಕು, ಅವರನ್ನು ರೆಗ್ಯುಲರೈಸ್ ಮಾಡಬೇಕೆಂಬ ಒತ್ತಾಯವನ್ನು

ಮಾಡುತ್ತೇನೆ. ವಿಶೇಷವಾಗಿ ವಿವಿಧ ಕಾರ್ಪೊರೇಷನ್‌ಗಳಲ್ಲಿರುವ ಪೌರ ಕಾರ್ಮಿಕರರ ಬಗ್ಗೆ ಅವರ ಪರವಾಗಿ ಧ್ವನಿಯನ್ನು ಯಾರೂ ಎತ್ತುವವರಿಲ್ಲ. ಆದ್ದರಿಂದ ಇಂತಹವರನ್ನು ಕೂಡ ರೆಗ್ಯುಲರೈಸ್ ಮಾಡಿ ಅವರಿಗೂ ಕೂಡ ಆರ್ಥಿಕ ಶಕ್ತಿಯನ್ನು ನೀಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇದೇ ರೀತಿ ಬಹುಶಃ ಅನೇಕ ಸಂದರ್ಭಗಳಲ್ಲಿ, ನ್ಯಾಯ ಸಿಗುವ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ನ್ಯಾಯಾಲಯವೇ ನ್ಯಾಯವನ್ನು ಕೇಳುವ ಸ್ಥಿತಿಗೆ ಬಂದಿದೆ. ಹಲವು ವರ್ಷಗಳಿಂದ ಈ ನ್ಯಾಯಾಲಯಕ್ಕೆ ತನ್ನ ಸ್ವಂತ ಕಟ್ಟಡ ಅಥವಾ ಸ್ಯಾಂಕ್ಷನ್ ಆಗಿದ್ದರೂ ಕೂಡ ಪೂರ್ತಿ ಹಣವನ್ನು ಬಿಡುಗಡೆ ಮಾಡದೇ ಇರುವುದರಿಂದ ತನ್ನ ಕಟ್ಟಡವನ್ನು ಅದಕ್ಕೆ ಪಡೆಯಲಿಕ್ಕೆ ಸಾಧ್ಯವಾಗಿಲ್ಲ. ಈ ವಿಷಯವನ್ನು ಕೂಡ ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಚ್ಛಿಪಡುತ್ತೇನೆ. ಇನ್ನು ವಿಶೇಷವಾಗಿ ವಿಕೇಂದ್ರಿಕೃತವಾಗಿ ಸ್ಥಳೀಯ ಮಟ್ಟದಲ್ಲಿ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಅನೇಕ ಸಲಹೆ ಸೂಚನೆಗಳು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮಂಡನೆಯಾಗಿವೆ. ಇಲ್ಲಿರುವ ಪ್ರಶ್ನೆ ಎಂದರೆ ಅಭಿವೃದ್ಧಿ ದೃಷ್ಟಿಯಿಂದ ವಿಶೇಷವಾಗಿ ಜಿಲ್ಲಾ ಪಂಚಾಯತ್‌ಗಳಲ್ಲಿ ಸಿ.ಇ.ಒ. ಆಗಿ ಕ್ಯಾಪ್ಟನ್ ಆಗಿ ಕೆಲಸ ಮಾಡುತ್ತಾ ಇರುತ್ತಾರೆ ಮತ್ತು ಆಗಾಗ ಅಲ್ಲಿ ಎಲ್ಲ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ರಿವ್ಯೂ ಮಾಡುತ್ತಾರೆ. ಅದು ಕೆ.ಇ.ಬಿ. ಇರಬಹುದು, ಫಾರೆಸ್ಟ್ ಇರಬಹುದು, ರಿಜಿಸ್ಟ್ರೇಶನ್ ಮಾಡುವಂಥ ಇಲಾಖೆ ಇರಬಹುದು, ಟ್ರೆಜರಿ ಇರಬಹುದು, ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಇರಬಹುದು, ಆರ್.ಟಿ.ಒ, ಪಿ.ಡಬ್ಲ್ಯೂ.ಡಿ. ಈ ಸಂಸ್ಥೆಗಳ ಬಗ್ಗೆ ಕೂಡ ರಿವ್ಯೂ ಮಾಡುವ ಅಧಿಕಾರ ಯಾರಿಗಿದೆ? ಕೆಲವು ವರ್ಷಗಳ ಹಿಂದೆ ನಡೆದ ಒಂದು ಘಟನೆಯನ್ನು ನಾನು ಇಲ್ಲಿ ಉಲ್ಲೇಖ ಮಾಡುತ್ತಿದ್ದೇನೆ. ಸ್ವಾತಂತ್ರ್ಯ ದಿನಾಚರಣೆಗೆ ಸಂಬಂಧಪಟ್ಟಂತೆ ಡಿ.ಸಿ. ಯವರು ಮೀಟಿಂಗ್ ನಡೆಸುತ್ತಿದ್ದರು. ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಇಂತಿಂಥ ಕಾಮಗಾರಿಗಳನ್ನು ಪಿ.ಡಬ್ಲ್ಯೂ.ಡಿ. ಯವರು ಮಾಡಬೇಕು ಎಂದು ಹೇಳಿ ಆ ಸಂದರ್ಭದಲ್ಲಿ ಅವರು ಸಲಹೆ ಕೊಟ್ಟರು. ಆದರೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ಅದನ್ನು ಮಾಡುವುದಕ್ಕೆ ನನಗೆ ಸಾಧ್ಯವಿಲ್ಲವೆಂದು ನಿರಾಕರಿಸಿದರು. ಬಹುಶಃ ಯಾವುದೇ ರೀತಿಯಲ್ಲಿ ಅವರಿಂದ ಕೆಲಸ ಮಾಡಿಸುವಂಥ ತಾಕತ್ತು ಜಿಲ್ಲಾಧಿಕಾರಿಗಳಿಗೆ ಇವತ್ತು ಇಲ್ಲ. ಪ್ರತಿಯೊಂದಕ್ಕೂ ಜಿಲ್ಲಾಧಿಕಾರಿಗಳನ್ನು ನಾವು ಹೊಣೆಗಾರರನ್ನಾಗಿ ಮಾಡುತ್ತಿದ್ದೇವೆ. ಆದರೆ ಅವರ ಅಧಿಕಾರ ವ್ಯಾಪ್ತಿ ಏನಿದೆ ಎಂಬುದನ್ನು ಕೂಡ ಪರಿಶೀಲಿಸಬೇಕು. ಒಂದು ರೀತಿಯಲ್ಲಿ ಪರಸ್ಪರ ಕೋಆರ್ಡಿನೇಷನ್ ತರುವಂಥ ವ್ಯವಸ್ಥೆಯನ್ನು ನಮ್ಮಲ್ಲಿ ಜೋಡಿಸಬೇಕಾಗಿದೆ. ಮತ್ತು ನಾನ್‌ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ಗಳು ಯಾವುದು ಇವೆ, ಅವುಗಳಿಗೆ ಸಂಬಂಧಪಟ್ಟಂತೆ ಕನಿಷ್ಟ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಇರಬಹುದು, ಅಪೀಲ್ ಮಾಡುವ ದೃಷ್ಟಿ ಇರಬಹುದು, ನೇರವಾಗಿ ಜಿಲ್ಲಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿದಾಗ ಆಗ ಜಿಲ್ಲಾಧಿಕಾರಿಗಳ ಮೂಲಕ ಈ ಸಂಸ್ಥೆಗಳಲ್ಲಿ ಏನಾಗಿದೆ, ಏನು ರಿವ್ಯೂ ಮೀಟಿಂಗ್‌ಗಳು ಆಗಿವೆ ಎಂದು ಅವುಗಳ ಬಗ್ಗೆ ಮಾಹಿತಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಮಂಗಳೂರು ಮಹಾನಗರಪಾಲಿಕೆಯಲ್ಲಿ ರಿವ್ಯೂ ಮೀಟಿಂಗ್ ಆಗದೆ ಬಹಳಷ್ಟು ವರ್ಷವಾಗಿದೆ. ಯಾವ ಇಲಾಖೆಯಲ್ಲಿ ಎಷ್ಟು ಫೈಲುಗಳು ಎಷ್ಟು ತಿಂಗಳಿಂದ ಕೊಳೆಯುತ್ತಿವೆ ಎಂದು ಕೂಡ ಗೊತ್ತಿಲ್ಲ. ಬಹುಶಃ ಅದರ ಬಗ್ಗೆ ವಸ್ತುನಿಷ್ಟವಾಗಿ ಪ್ರತಿ ತಿಂಗಳೂ ವರದಿಯನ್ನು ತರಿಸಿಕೊಳ್ಳುವ

ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾದರೆ ಆಗ ಇನ್ನೂ ಯೋಗ್ಯರೀತಿಯಲ್ಲಿ ಯಶಸ್ವಿಯಾಗಿ ಕಾರ್ಯ ನಡೆಸಬಹುದುರಾ ಎಂಬ ಅನಿಸಿಕೆಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದಕ್ಕೆ ನಾನು ಇಚ್ಛಿಸುತ್ತೇನೆ. ಬಹುಶಃ ವಿಕೇಂದ್ರೀಕರಣದ ಬಗ್ಗೆ ಒಂದು ಸಣ್ಣ ಮಾಹಿತಿಯನ್ನು ನಾನು ಕೊಡುತ್ತಿದ್ದೇನೆ, ಒಂದು ಉದಾಹರಣೆಯನ್ನು ಹೇಳುತ್ತೇನೆ. ವಿಶೇಷವಾಗಿ ನಮ್ಮ ಕ್ಷೇತ್ರದಲ್ಲಿ ಇರುವಂಥ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟ ಹಾಗೆ ಹತ್ತು ಸೆಂಟ್ಸ್ ಜಾಗ ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ........

ಶ್ರೀ ಕೆ. ಪ್ರಭಾಕರ ಬಂಗೇರ: ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಜನಗಳು ಒಂದು ತೀರ್ಮಾನವನ್ನು ಮಾಡಿದ್ದಾರೆ. ಈ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತ ಬರಬೇಕು ಎಂಬ ದೃಷ್ಟಿಯಿಂದ ಅದನ್ನು ಆಡಳಿತಕ್ಕೆ ತಂದಿದ್ದಾರೆ. ಆದರೆ ಕಂದಾಯ ಇಲಾಖೆಯಲ್ಲಿ ಜನರಿಗೆ ಅನುಕೂಲವಾಗುವಂಥ ವ್ಯವಸ್ಥೆ ಆಗಬೇಕಾಗಿದೆ. ಜನರು ಏನು ನಿರೀಕ್ಷೆ ಮಾಡುತ್ತಿದ್ದಾರೆ ಎಂದರೆ ಅವರು ಒಂದು ತಾಲ್ಲೂಕು ಕಚೇರಿಗೆ ಹೋದರೆ ಅವರಿಗೆ ಅಲ್ಲಿ ನ್ಯಾಯ ಸಿಗಬೇಕು ಮತ್ತು ಅವರನ್ನು ಕೇಳುವವರು ಇರಬೇಕು. ಹಾಗೆ ಅವರು ಅಲ್ಲಿ ಹೋದಾಗ ಅವರನ್ನು ಕೇಳುವಂಥ ಜನ ಅಲ್ಲಿ ಇರಬೇಕಾಗುತ್ತದೆ. ನೀವೇನು ಇಲ್ಲಿಗೆ ಬಂದಿದ್ದೀರಿ ಎಂದು ಕೇಳುವಂಥ ವ್ಯವಧಾನ ಇರುವ ಅಧಿಕಾರಿಗಳು ಬೇಕಾಗಿದ್ದಾರೆ. ಈ ದೃಷ್ಟಿಯಿಂದ ಈ ಬಂದಿರುವಂಥ ಸರ್ಕಾರವನ್ನು ನಾನು ಮಾನ್ಯ ಸಭಾಧ್ಯಕ್ಷರ ಮೂಲಕ ಕೇಳಿಕೊಳ್ಳುವುದು ಏನೆಂದರೆ ಈ ವ್ಯವಸ್ಥೆಯನ್ನು ಮೊದಲು ಮಾಡಬೇಕು. ಇಷ್ಟುರವರೆಗೆ ಯಾವುದೇ ಸರ್ಕಾರ ಈ ರೀತಿ ಮಾಡಿಲ್ಲ. ಆದ್ದರಿಂದ ಇದನ್ನು ಮಾಡಬೇಕು ಎಂದು ನಾನು ಮಾನ್ಯ ಸಭಾಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಇದೇ ರೀತಿಯಲ್ಲಿ ಯಾವುದೇ ಒಂದು ವ್ಯವಸ್ಥೆಯೊಳಗೆ...........

ಉಪಾಧ್ಯಕ್ಷರು: ನೀವು ಯಾವ ವಿಚಾರವಾಗಿ ಮಾತನಾಡುತ್ತಿದ್ದೀರಿ ಎಂದು ನನಗೆ ಗೊತ್ತಾಗಲಿಲ್ಲ. ಪಾಯಿಂಟ್ ಆಫ್ ಆರ್ಡರ್‌ನ್ನೂ ನೀವು ಕೇಳಿಲ್ಲ. ಸುಮ್ಮನೆ ತಾವು ಮಾತನಾಡುತ್ತಿದ್ದೀರಿ. ನಿಮಗೆ ಮಾತನಾಡುವುದಕ್ಕೆ ಬೇಕಾದರೆ ಬೇರೆ ಅವಕಾಶ ಕೊಡೋಣ.

ಶ್ರೀ ಎನ್. ಯೋಗೀಶ್ ಭಟ್: ಅವರು ಕಂದಾಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೆಲವೊಂದು ಮಾಹಿತಿಗಳನ್ನು ಕೊಡುವುದಕ್ಕೆ ಇಚ್ಛೆ ಪಡುತ್ತಿದ್ದಾರೆ. ಇದು ಹತ್ತು ಸೆಂಟ್ಸ್ ಸ್ಥಳವನ್ನು ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಪರಿವರ್ತನೆ ಮಾಡಬೇಕು ಎನ್ನುವಂಥಾದ್ದು. ಅಲ್ಲಿ ಅವರು ಅರ್ಜಿಯನ್ನು ಹಾಕಿದರು. ಅರ್ಜಿ ಹಾಕಿದ ನಂತರ ಮೂಡಾಸಂಸ್ಥೆ ಏನಿದೆ, ಅದು ಇದನ್ನು ಪರಿಗಣಿಸಿ ಶಿಫಾರಸ್ಸು ಮಾಡಿ ಬೆಂಗಳೂರಿನಲ್ಲಿರುವ ಮಲ್ಲಿಸ್ಟೋರಿಡ್ ಬಿಲ್ಡಿಂಗ್‌ನಲ್ಲಿರುವ ಹೆಚ್.ಯು.ಡಿ. ಇಲಾಖೆಗೆ ಕಳಿಸಿದರು. ಕಳೆದ ನಾಲ್ಕು ತಿಂಗಳಿಂದ ಅದು ಒಂದು ಟೇಬಲ್‌ನಿಂದ ಇನ್ನೊಂದು ಟೇಬಲ್‌ಗೆ ಪಾಸ್ ಆಗುತ್ತಿದೆಯೇ ವಿನಹ ಬೇರೇನೂ ಆಗಿಲ್ಲ. ಅಲ್ಲಿಂದ ಅದು ಶಿಫಾರಸ್ಸಾಗಿ ಮಾನ್ಯ ಮಂತ್ರಿಗಳು ಸೈನ್ ಮಾಡಿ ಕಳಿಸಬೇಕು. ಇದು ಇನ್ನು ಐದಾರು ತಿಂಗಳಾದರೂ ಬರುವಂಥಾದ್ದು ಇಲ್ಲ. ಇಂತಹ ಅಧಿಕಾರವನ್ನು ತಾವು ನೇರವಾಗಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಕೊಟ್ಟಲ್ಲಿ ಬಹುಶಃ ಆ ವ್ಯಕ್ತಿ ಇವತ್ತು ಸ್ವಂತ ಉದ್ಯಮ ಮಾಡಿಕೊಂಡು ಜೀವನ ನಡೆಸುವುದಕ್ಕೆ ಸಾಧ್ಯವಾಗುತ್ತಿತ್ತು. ಇದಕ್ಕೂ ಸಂಚಕಾರ ಬಂದಿದೆ. ಆದ್ದರಿಂದ ವಿಕೇಂದ್ರೀಕರಣ ವ್ಯವಸ್ಥೆಯನ್ನು

ಎಷ್ಟು ಬೇಗ ತರುವುದಕ್ಕೆ ಸಾಧ್ಯವಿದೆಯೋ ಅಷ್ಟು ಬೇಗ ಅದನ್ನು ತರುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಅದೇ ರೀತಿ ಕಳೆದ ಶಾಸಕತ್ವದ ಅವಧಿಯಲ್ಲಿ ಅಧೀನ ಶಾಸನ ರಚನಾ ಸಮಿತಿಯ ಮೀಟಿಂಗ್ ಆಯಿತು. ಆ ಮೀಟಿಂಗ್ ಸಂದರ್ಭದಲ್ಲಿ ವಿಶೇಷವಾಗಿ ಪೊಲೀಸ್ ಇಲಾಖೆಗೆ ಸಂಬಂಧಪಟ್ಟ ಬಿಲ್ಲುಗಳ ಬಗ್ಗೆ ಆ ಸಭೆಯಲ್ಲಿ ಚರ್ಚೆಗೆ ಬಂದಿತ್ತು. ಪಿರಮಿಡ್ ವ್ಯವಸ್ಥೆ ಬಗ್ಗೆ ನಾನು ಒಂದು ಪ್ರಶ್ನೆ ಕೇಳಿದ್ದೆ. ಯಾವುದೇ ಪಿರಿಮಿಡ್ ಎಷ್ಟು ಅಗಲವಾಗಿದೆ, ಅದರ ಫೌಂಡೇಷನ್ ಅಷ್ಟೇ ಗಟ್ಟಿಯಾಗಿದೆ ಎಂದು ಅರ್ಥ. ಆದರೆ, ಇಲ್ಲಿ ತುದಿ ಅಗಲವಾಗುತ್ತಾ ಹೋಗಿದೆ, ಬುಡ ಕಡಿಮೆಯಾಗುತ್ತಾ ಹೋಗಿದೆ. ಯಾವುದೇ ಒಂದು ಕಟ್ಟಡ ಹೇಗೆ ಭದ್ರವಾಗಿ ನಿಲ್ಲಬಹುದು ಎಂಬ ಪ್ರಶ್ನೆಯನ್ನು ನಾನು ಆ ಸಂದರ್ಭದಲ್ಲಿ ಹಾಕಿದ್ದೆ. ಅದೇ ಮಾತನ್ನು ಇಲ್ಲಿ ಹೇಳುತ್ತಾ ಇದ್ದೇನೆ. ಏಕೆಂದರೆ, ಇವತ್ತು ನಮಗೆ ಬೇಕಾದ ಹಾಗೆ ಐ.ಜಿ.ಗಳು, ಬೇಕಾದಷ್ಟು ಕಮೀಷನರ್‌ಗಳು ಬೇರೆ ಬೇರೆ ಕಡೆಗಳಲ್ಲಿ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿಕೊಂಡು ಅಂದರೆ ತಮ್ಮ ತಮ್ಮ ಸೌಕರ್ಯಗಳಿಗೆ ಬೇಕಾಗುವಂಥ ಅನೇಕ ಪೋಸ್ಟ್‌ಗಳನ್ನು ಬೆಂಗಳೂರು ಸುತ್ತಮುತ್ತ ಕ್ರಿಯೇಟ್ ಮಾಡಿಕೊಂಡು ಇರುವಂತಹ ವ್ಯವಸ್ಥೆಯನ್ನು ಎಲ್ಲಿಯವರೆಗೆ ಹೋಗಲಾಡಿಸುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿಯವರೆಗೆ ಖಂಡಿತವಾಗಿಯೂ ನಾವು ಪರಿವರ್ತನೆಯನ್ನು ತರುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಬಹುಶಃ ಇವತ್ತು ಗ್ರಾಮಮಟ್ಟದಲ್ಲಿ ಒಬ್ಬ ಹೆಡ್ ಕಾನ್‌ಸ್ಟೇಬಲ್ ಹುದ್ದೆ ಜಾಸ್ತಿಯಾಯಿತೆಂದರೆ, ಆ ವಾರ್ಡ್ ಮಟ್ಟದಲ್ಲಿ ಅವರು ಹೋಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಒಬ್ಬ ಸಬ್ ಇನ್‌ಸ್ಪೆಕ್ಟರ್ ಬಂದರೆ ಕನಿಷ್ಟ ವಿಭಾಗ ಮಟ್ಟದಲ್ಲಿ ಅಥವಾ ಗ್ರಾಮ ಮಟ್ಟದಲ್ಲಿ ಏನಾದರೂ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಬಿಟ್ಟು ಇವತ್ತು ಮೇಲ್ಮಟ್ಟದಲ್ಲಿ ಹುದ್ದೆಗಳನ್ನು ಹೆಚ್ಚಿಸುವಂತಹ ಪದ್ಧತಿಯನ್ನು ಬಿಟ್ಟುಬಿಡಬೇಕು. ಮತ್ತು ಎಲ್ಲಾದರೂ 5 ಅಥವಾ 10 ಪರ್ಸೆಂಟ್ ಕಟ್ ಮಾಡಬೇಕೆಂದು ಇದ್ದರೆ, ಮೇಲ್ಮಟ್ಟದಲ್ಲಿ ಮಾಡಿ, ಕೆಳಮಟ್ಟದಲ್ಲಿ ಮಾಡಬೇಡಿ ಎಂದು ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಬಯಸುತ್ತೇನೆ. ಕೆಲವು ಸಂದರ್ಭದಲ್ಲಿ ನಾನು ಯಾವುದೋ ಒಂದು ಇಲಾಖೆಗೆ ಹೋದಾಗ ಸೀಸ್ ಆದ ವೆಹಿಕಲ್‌ಗಳನ್ನು ಗಮನಿಸಿದ್ದೇನೆ. ಅದು ಪೊಲೀಸ್ ಇಲಾಖೆ ಇರಬಹುದು ಅಥವಾ ಬೇರೆ ಬೇರೆ ಇಲಾಖೆಗಳಲ್ಲಿ ಇರಬಹುದು. ಈ ರೀತಿ ಸೀಸ್ ಆದ ವೆಹಿಕಲ್‌ಗಳು ಎಷ್ಟಿದೆ ಎಂದರೆ, ಸುಮಾರು 10 ವರ್ಷಗಳಿಂದ ಆ ವೆಹಿಕಲ್‌ಗಳು ಅಲ್ಲಿಯೇ ಇವೆ. ಆ ವೆಹಿಕಲ್‌ಗಳನ್ನು ಏಕೆ ಡಿಸ್‌ಪೋಸ್ ಮಾಡಿಲ್ಲವೆಂದು ಕೇಳಿದರೆ, ಕಂಡಮ್ನೇಷನ್ ಮಾಡುವಂತಹ ಅಧಿಕಾರ ನಮಗಿಲ್ಲ, ನೇರವಾಗಿ ರಾಜ್ಯಸರ್ಕಾರಕ್ಕೆ ಬರೆಯಬೇಕು, ಸೆಕ್ರಟೇರಿಯೇಟ್ ಕಡೆಯಿಂದ ಇನ್ನೂ ನಮಗೆ ಕ್ಲಿಯರೆನ್ಸ್ ಬಂದಿಲ್ಲವೆಂದು ಹೇಳುತ್ತಾರೆ. ಬಹುಶಃ ಈ ತರಹ ವ್ಯವಸ್ಥೆ ನಮ್ಮ ಆಡಳಿತ ಪದ್ಧತಿಯಲ್ಲಿದ್ದರೆ, ಆ ವೆಹಿಕಲ್‌ಗಳು ಕನಿಷ್ಟ 2-3 ತಿಂಗಳಲ್ಲಿ ಏನಾದರೂ ವ್ಯವಸ್ಥೆಯಾದಲ್ಲಿ ಅವುಗಳನ್ನು ಓಡಿಸುವುದಕ್ಕಾದರೂ ಆಗುತ್ತಿತ್ತು. ಇವತ್ತು ಆ ವೆಹಿಕಲ್‌ಗಳು ಓಡಿಸುವಂತಹ ಸ್ಥಿತಿಯಲ್ಲಿ ಇಲ್ಲ. ಇಂತಹ ಆಡಳಿತ ವೈಖರಿಯನ್ನು ನಾವು ಬದಲಾವಣೆ ಮಾಡಬೇಕಾಗಿದೆ. ಜಿಲ್ಲಾಧಿಕಾರಿಗಳ ಕಛೇರಿಯಿಂದ ಏನಾದರೂ ಪತ್ರ ಬರೆದರೆ ವಿಭಾಗಾಧಿಕಾರಿಗಳ ಕಛೇರಿಯಲ್ಲಿ ಒಬ್ಬ ಗುಮಾಸ್ತರು ಅದನ್ನು ಸ್ಕ್ರೂಟಿನಿ ಮಾಡುತ್ತಾರೆ. ಅದರ ಮೇಲೆ ಟಿಪ್ಪಣಿ ಬರೆಯುತ್ತಾರೆ.

ಆ ಕಾಗದ ನೇರವಾಗಿ ವಿಭಾಗಾಧಿಕಾರಿಗಳಿಗೆ ಬರುವ ಹಾಗೆ ಮಾಡಿ, ಅವರ ಕಡೆ ಕಾಗದಪತ್ರಗಳನ್ನು ಕಳುಹಿಸುವಂಥ ವ್ಯವಸ್ಥೆಯಾದರೆ ಮತ್ತು ಆ ಕಾಗದ ಪತ್ರಗಳು ವಿಭಾಗಾಧಿಕಾರಿಗಳ ಕಡೆಯಿಂದ ಸೆಕ್ರೆಟೇರಿಯಟ್ ಕಡೆ ಹೋಗುವಂತಹ ವ್ಯವಸ್ಥೆ ಮಾಡಿದರೆ ಬಹುಶಃ ವಿಳಂಬವಾಗುವ ಸಮಯವನ್ನು ಉಳಿಸಬಹುದು. ನಿರ್ದಿಷ್ಟವಾಗಿ ಇಂತಹ ಸಮಯದೊಳಗೆ ಅದನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುತ್ತದೆ. ಇದನ್ನು ಮಾಡಿದಲ್ಲಿ ಅತ್ಯಂತ ಯಶಸ್ವಿಯಾಗಿ ಸರ್ಕಾರ ನಡೆಸುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾಹಿತಿಯನ್ನು ಕೊಡಲಿಕ್ಕೆ ಇಚ್ಛಿಸುತ್ತೇನೆ. ಇವತ್ತು ಪಾರದರ್ಶಕತೆಯ ಬಗ್ಗೆ ಅನೇಕ ಪ್ರಶ್ನೆಗಳು ಉದ್ಭವವಾಗುತ್ತಿವೆ. ನಮ್ಮ ಜಿಲ್ಲೆಯಲ್ಲಿ ನಡೆದಂತಹ ಅನೇಕ ಚಟುವಟಿಕೆಗಳ ಬಗ್ಗೆ ವಿಶೇಷವಾಗಿ ಪರಿಸರ ಮಾಲೀನ್ಯಕ್ಕೆ ಸಂಬಂಧಪಟ್ಟ ಅಥವಾ ಪರಿಸರ ವೈಯೋಲೇಷನ್ ಆಗಿದೆ ಎನ್ನುವ ಕಾರಣಕ್ಕೋಸ್ಕರ ಎನ್.ಜಿ.ಓ ಮತ್ತು ಎಂ.ಆರ್.ಪಿ.ಎಲ್. ಹೀಗೆ ಬೇರೆ ಬೇರೆ ಸಂಘಸಂಸ್ಥೆಗಳ ವಿರುದ್ಧ ಚಳುವಳಿ ನಡೆಯಿತು. ಈ ಚಳುವಳಿಗಳು ಏಕೆ ನಡೆಯಿತು ಎಂದು ಅಲ್ಲಿರುವಂತಹ ಎನ್.ಜಿ.ಓ.ಗಳನ್ನು ವಿಶೇಷವಾಗಿ ಸಂಘಸಂಸ್ಥೆಗಳ ಪ್ರಮುಖರನ್ನು ಭೇಟಿ ಮಾಡಿ ನಾನು ಪ್ರಶ್ನೆ ಕೇಳಿದೆ. ಏತಕ್ಕೋಸ್ಕರ ಈ ತರಹ ಮಾಡುತ್ತೀರಿ ಎಂದು ಕೇಳಿದೆ. ಅವರು ಹೇಳಿದಂತಹ ಉತ್ತರ ತುಂಬಾ ಮಾರ್ಮಿಕವಾಗಿತ್ತು. ಕಳೆದ ಒಂದು ವರ್ಷದಿಂದ ನಾವು ಪತ್ರ ವ್ಯವಹಾರ ಮಾಡುತ್ತಿದ್ದೇವೆ. ಇವತ್ತಿನವರೆಗೆ ನಮಗೆ ಉತ್ತರ ಸಿಕ್ಕಿಲ್ಲ. ಈಗ ಬರುವಂತಹ ಪ್ರಾಜೆಕ್ಟ್ ಯಾವುದಿದೆ, ಅಥವಾ ಯಾವುದೇ ಒಂದು ಇಂಡಸ್ಟ್ರಿ ಇರಬಹುದು. ಇದರ ಬಗ್ಗೆ ಪ್ರಾಜೆಕ್ಟ್ ರಿಪೋರ್ಟ್ ಕೊಡಿ ಎಂದರೆ ನಮ್ಮ ಹತ್ತಿರ ಮಾಹಿತಿ ಇಲ್ಲ, ಒಂದು ಇಲಾಖೆ, ಇನ್ನೊಂದು ಇಲಾಖೆಯನ್ನು ಒಟ್ಟುಗೂಡಿಸುತ್ತಾ ಇರುತ್ತೆ, ಯಾವುದೇ ಮಾಹಿತಿಯನ್ನು ಕೊಡಲಿಕ್ಕೆ ಅವರಿಗೆ ಸಾಧ್ಯವಾಗುತ್ತಾ ಇಲ್ಲ. ಅದು ಎಂದು ಬರುತ್ತೆ ಎಂಬುದನ್ನು ಹೇಳುವುದಕ್ಕೂ ಸಾಧ್ಯವಾಗುವುದಿಲ್ಲ. ಕೊನೆಗೆ ಬಂದನಂತರವೇ ಎಲ್ಲರಿಗೂ ಜ್ಞಾನೋದಯವಾಗುವಂತಹ ಸ್ಥಿತಿ ಬರುತ್ತದೆ. ಈ ಕಾರಣಕ್ಕೋಸ್ಕರ ಮಾಹಿತಿಯನ್ನು ಕೊಡುವಂತಹ ಮತ್ತು ಮಾಹಿತಿಯನ್ನು ಪಡೆಯುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ತುಂಬಾ ರಹಸ್ಯವಾದ ಮಾಹಿತಿಗಳನ್ನು ಬಿಟ್ಟು, ಉಳಿದ ಎಲ್ಲಾ ಮಾಹಿತಿಗಳನ್ನು ಒದಗಿಸಿಕೊಡಬೇಕು. ಇದು ಕೇಂದ್ರಸರ್ಕಾರದ ಬಿಲ್ಲಿನಲ್ಲೂ ಬಂದಿದೆ. ಮಾಹಿತಿಯನ್ನು ಕೊಡುವಂತಹ ಅಧಿಕಾರವನ್ನು ಚಲಾಯಿಸಬೇಕಾಗಿದೆ. ಮತ್ತು ಯಾವುದೇ ಕಾರಣಕ್ಕೆ ಅದನ್ನು ಸೀಕ್ರೆಟ್ ಆಗಿ ಇಡುವಂತಹ ಮತ್ತು ಗುಟ್ಟಾಗಿಟ್ಟು, ಅದನ್ನು ಕೊಡದೇ ಇರುವಂತಾದ್ದು ಮಾಡಬಾರದು. ಇದರ ಬಗ್ಗೆ ಸರ್ಕಾರ ಘೋಷಣೆ ಮಾಡಬೇಕೆಂಬ ವಿನಂತಿಯನ್ನು ಮಾಡಲಿಕ್ಕೆ ಈ ಸಂದರ್ಭದಲ್ಲಿ ಇಚ್ಛಿಸುತ್ತೇನೆ. ಅದೇ ರೀತಿ ನಾನು ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಕಂಪ್ಯೂಟರ್ ಬಗ್ಗೆ ಸಾಕಷ್ಟು ಒತ್ತನ್ನು ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರದಲ್ಲಿರುವಂತಹ ಅರಣ್ಯ ಮತ್ತು ಪರಿಸರ ಇಲಾಖೆಯಲ್ಲಿ ಯಾವ ತರಹ ಅಪರೇಷನ್ ನಡೆಯುತ್ತಾ ಇದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಕಳೆದ ಸಲ ಅಲ್ಲಿರುವಂತಹ ಸಚಿವರು ನೇರವಾಗಿ ಅವರ ಜೊತೆಯಲ್ಲಿ ಮಾತುಕತೆ ನಡೆಸಿದಾಗ ಸಿಕ್ಕಿದ ಮಾಹಿತಿಯನ್ನು ಕೊಡುತ್ತಿದ್ದೇನೆ. ಹಿಂದೆ, ಸಂಬಂಧಪಟ್ಟ ಯಾವುದೇ ಅರ್ಜಿಗಳನ್ನು ಹಾಕಿದಾಗ, ತಡ ಮಾಡಿದಷ್ಟು ಆ ಇಲಾಖೆಗೆ ಹೆಚ್ಚು ಲಾಭ ಬರುವಂತಾದ್ದು. ಅರ್ಜಿಗಳನ್ನು ಬೇಗ ಡಿಸ್‌ಪೋಸ್ ಮಾಡಬೇಕಾದರೆ, ಅದರಲ್ಲಿ ಏನಾದರೂ

ಬರದೇ ಆ ಅರ್ಜಿಗಳು ಡಿಸ್‌ಪೋಸ್ ಆಗುತ್ತಿರಲಿಲ್ಲ. ಅದಕ್ಕೋಸ್ಕರ ಆ ಸಚಿವರು ಕಟ್ಟುನಿಟ್ಟಿನ ಆದೇಶವನ್ನು ಹೊರಡಿಸಿ, ಅರ್ಜಿ ಹಾಕಿದ ನಂತರ, ಯಾವನೇ ಒಬ್ಬ ಅರ್ಜಿದಾರ ಆ ಇಲಾಖೆಗೆ ಬರುವಂತಹ ಆವಶ್ಯಕತೆ ಇಲ್ಲ, ನೇರವಾಗಿ ಇಂಟರ್‌ನೆಟ್ ಮೂಲಕ ಯಾವ ಹಂತದಲ್ಲಿ ಅವರ ಫೈಲ್ ಇದೆ ಎಂಬುದನ್ನು ಮನೆಯಲ್ಲಿ ಕುಳಿತುಕೊಂಡು ಅದನ್ನು ಗಮನಿಸತಕ್ಕ ವ್ಯವಸ್ಥೆಯನ್ನು ಆ ಸಚಿವರು ಅಲ್ಲಿ ಮಾಡಿದರು. ಬಹುಶಃ ನಮ್ಮ ರಾಜ್ಯ ಸರ್ಕಾರದಲ್ಲೂ ಕೂಡ ಈ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಿದೆ. ಏಕೆಂದರೆ, ಮಾಹಿತಿ ತಂತ್ರಜ್ಞಾನದ ಮೂಲಕ ಅನೇಕ ಮಾಹಿತಿಗಳನ್ನು ಪಡೆಯುವ ನಿಟ್ಟಿನಲ್ಲಿ ಈ ವ್ಯವಸ್ಥೆಯನ್ನು ಜೋಡಿಸುವ ಕಾರ್ಯವಾದರೆ ಕ್ಷೇತ್ರದ ಜನತೆ ತುಂಬಾ ನೆಮ್ಮದಿಯಿಂದ, ತಮ್ಮ ಫೈಲ್ ಎಲ್ಲಿದೆ ಎಂದು ಹುಡುಕುವುದಕ್ಕೆ ಸಾಧ್ಯವಾಗುತ್ತದೆ. ಬಹುಶಃ ಈ ಹಂತದಲ್ಲಿ ಇಂಟರ್‌ನೆಟ್ ಅಳವಡಿಸುವಿಕೆ ಪ್ರಯತ್ನವನ್ನು ಖಂಡಿತವಾಗಿಯೂ ತಾವು ಮಾಡಬೇಕೆಂದು ಒತ್ತಾಯವನ್ನು ಮಾಡುತ್ತೇನೆ. ಇನ್ನು ಜನರ ಭಾಗವಹಿಸುವಿಕೆ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೆಚ್ಚು ಒತ್ತು ಕೊಟ್ಟು ಹೇಳಿದ್ದಾರೆ. ಬಹುಶಃ ಹೆಚ್ಚು ಹೆಚ್ಚು ಜನರ ಭಾಗವಹಿಸುವಿಕೆಯನ್ನು ತಾವು ಮಾಡಲಿಕ್ಕೆ ಸಮರ್ಥರಾದಾಗ ತಮ್ಮ ರಾಜ್ಯಭಾರ ಹಾಗೂ ತಮ್ಮ ಆಡಳಿತ ಕೂಡ ಸುಸೂತ್ರವಾಗಿ ಮತ್ತು ಯಶಸ್ವಿಯಾಗಿ ನಡೆಯುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ನಾನು ಬಯಸುತ್ತೇನೆ. ಈ ಸಂದರ್ಭದಲ್ಲಿ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಕ್ಷೇತ್ರದಲ್ಲಿರುವಂತಹ ಜಿಲ್ಲಾ ಆಸ್ಪತ್ರೆ ಹಲವು ಕಾರಣಗಳಿಗೋಸ್ಕರ ಕಾರ್ಯ ಮಾಡುತ್ತಾ ಇರಲಿಲ್ಲ. ಅಲ್ಲಿ ಒಂದು ಜನರೇಟರ್ ಇದ್ದರೂ ಕೂಡ ಏಕೆ ಅದು ಆಪರೇಟ್ ಆಗುತ್ತಾ ಇಲ್ಲ? ಅದೇ ರೀತಿ ಅಲ್ಲಿರುವಂತಹ ಸಣ್ಣ ಪುಟ್ಟ ಕಾಮಗಾರಿಗಳು ಆಗಿರುವುದಿಲ್ಲ. ಅಲ್ಲಿ ಎಕ್ಸ್‌ರೇ ಮಿಷನ್ ಹಾಳಾಯಿತು, ಅದನ್ನು ದುರಸ್ತಿ ಮಾಡಲಿಕ್ಕೆ ಸಾಧ್ಯವಾಗುತ್ತಾ ಇಲ್ಲ. ಏಕೆ ಎಂದು ಪ್ರಶ್ನೆ ಮಾಡಿದಾಗ, ಅಲ್ಲಿರುವಂತಹ ಡಿ.ಎಂ.ಒ ಅವರಿಗೆ ಯಾವ ಅಧಿಕಾರವೂ ಇಲ್ಲ. 500 ರೂಪಾಯಿಗಿಂತ ಜಾಸ್ತಿ ಖರ್ಚು ಮಾಡುವ ಅಧಿಕಾರ ಅವರಿಗೆ ಇಲ್ಲ. ಅವರು ಇದರ ಬಗ್ಗೆ ಕಂಪ್ಲೆಂಟನ್ನು ಸೆಕ್ರೆಟೇರಿಯಟ್‌ಗೆ ಬರೆಯುತ್ತಾರೆ. ಅವರು ತಪಾಸಣೆ ನಡೆಸಿ, ಇದಕ್ಕೆ ಉತ್ತರ ಕೊಡಬೇಕು ಮತ್ತು ಅನುದಾನವನ್ನು ಮಂಜೂರ್ಮಾಡಬೇಕು. ಇಷ್ಟು ಆಗುವ ಹೊತ್ತಿಗೆ ಕೆಲವು ತಿಂಗಳುಗಳೇ ಕಳೆದು ಹೋಗುತ್ತವೆ. ಇದರಿಂದ ಅಲ್ಲಿ ಬರುವಂತಹ ಅನೇಕ ರೋಗಿಗಳಿಗೆ ಸಾಕಷ್ಟು ತೊಂದರೆಯಾಗುತ್ತದೆ. ಈ ಸಂದರ್ಭದಲ್ಲಿ ನಾವು ಪದೇ ಪದೇ ಸರ್ಕಾರಕ್ಕೆ ಒತ್ತಾಯ ಮಾಡಿದೆವು. ಒಂದು ಅಡ್ವೈಸರಿ ಕಮಿಟಿ ಮಾಡಿ ಎಂದು ಹೇಳಿದೆವು. ಬಹುಶಃ ನಾವು ಸಾಕಷ್ಟು ಒತ್ತಾಯ ಮಾಡಿದ ನಂತರ ಅಡ್ವೈಸರಿ ಕಮಿಟಿಯನ್ನು ಮಾಡಿದರು. ನಂತರ, ಇದಕ್ಕೆ ಸಂಬಂಧಪಟ್ಟಂತೆ ಜನಸಾಮಾನ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು, 8-10 ಲಕ್ಷ ರೂಪಾಯಿಗಳನ್ನು ಸಂಗ್ರಹ ಮಾಡಿಕೊಂಡು ಜಿಲ್ಲಾಧಿಕಾರಿ, ಸಿ.ಇ.ಓ. ಮತ್ತು ಡಿ.ಎಂ.ಒ. ರವರ ನೇತೃತ್ವದಲ್ಲಿರುವಂತಹ ಕಮಿಟಿಯಲ್ಲಿ ಆ ಹಣವನ್ನು ಇಟ್ಟುಕೊಂಡು ದಿನನಿತ್ಯದ ನಿರ್ವಹಣೆಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆದರಿಂದಾಗಿ ತಮ್ಮ ಮೂಲಕ ಅವರಿಗೆ ನಾನು ಇಷ್ಟೇ ಹೇಳುವಂತಾದ್ದು, ನೇರವಾಗಿ ಸಾರ್ವಜನಿಕರ ಸಹಕಾರದಿಂದ ಮಾಡತಕ್ಕ ಕೆಲಸಗಳು, ಅದು ಯಾವುದೇ ಇಲಾಖೆ ಇರಬಹುದು ಆ ಇಲಾಖೆಗೆ ಕಟ್ಟುನಿಟ್ಟಾಗಿ ಸ್ಥಳೀಯ ಜನರಿರುವಂತಹ ಒಂದು ಅಡ್ವೈಸರಿ ಕಮಿಟಿಯನ್ನು ತಾವು ಮಾಡಬೇಕು. ಆ ಕಮಿಟಿ ಮೂಲಕ ಬರತಕ್ಕ

ಕುಂದುಕೊರತೆಗಳನ್ನು ಆ ಹಂತದಲ್ಲೇ ಬಗೆಹರಿಸತಕ್ಕ ಪ್ರಯತ್ನ ಮಾಡಿದಲ್ಲಿ ತಾವು ಅತ್ಯಂತ ಯಶಸ್ವಿಯಾಗಬಹುದು ಎಂಬ ಮಾತನ್ನು ಹೇಳುತ್ತೇನೆ. ಬಹುಶಃ ನಾವು ಅನೇಕ ಕಲ್ಪನೆಗಳನ್ನು, ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಅವುಗಳ ಸಾಕಾರ ಮಾಡುವಂತಹ ಶಕ್ತಿಯನ್ನು ಭಗವಂತನು ನೀಡಲಿ ಎಂದು ಹೇಳುವುದರ ಜೊತೆಗೆ ಒಂದೆರಡು ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತಂದು ನನ್ನ ಮಾತುಗಳನ್ನು ಮುಗಿಸುತ್ತೇನೆ. ಇತ್ತೀಚಿಗೆ ನ್ಯೂ ಮಂಗಳೂರು ಪೋರ್ಟ್ ಟ್ರಸ್ಟ್ ಬಂದರಿನಲ್ಲಿ ಟ್ಯಾಂಕರ್ ಸ್ಫೋಟವಾಯಿತು. ಬಹುಶಃ ಸೂಕ್ತ ಸಂದರ್ಭದಲ್ಲಿ ಅದನ್ನು ಕಂಟ್ರೋಲ್ ಮಾಡದೇ ಇದ್ದಿದ್ದರೆ ವಿಶಾಖಪಟ್ಟಣದ ದುರಂತ ಪುನರಾವರ್ತನೆಯಾಗುತ್ತಿತ್ತು. ಆ ನಿಟ್ಟಿನಲ್ಲಿ ನಾನು ಹೇಳುವಂಥಾದ್ದು ವಿಶೇಷವಾದ ಅಗ್ನಿ ಶಾಮಕ ವ್ಯವಸ್ಥೆಯನ್ನು ಇಂತಹ ಬಂದರು ಏರಿಯಾದಲ್ಲಿ ಮಾಡುವ ಅವಶ್ಯಕತೆ ಇದೆ. ಹಾಗೂ ರಿಫೈನರಿ ಪಾಯಿಂಟ್‌ನಲ್ಲಿ ಜೀರೋ ಟ್ರಾನ್ಸ್‌ಪೋರ್ಟ್ ಇದ್ದು ಪೆಟ್ರೋಲ್, ಡೀಸೆಲ್‌ಗಳಿಗೆ 2-3 ರೂಪಾಯಿಗಳ ಕಡಿಮೆ ಬೆಲೆಯಲ್ಲಿ ಸಿಗಲಿಕ್ಕೆ ಸಾಧ್ಯವಾಗುತ್ತದೆ. ಕನಿಷ್ಠ ನಮ್ಮ ಜಿಲ್ಲೆಯಲ್ಲಾದರೂ ಸಿಗುವ ನಿಟ್ಟಿನಲ್ಲಿ ತಾವು ಕೇಂದ್ರಸರ್ಕಾರದ ಮಟ್ಟದಲ್ಲಿ ವ್ಯವಹರಿಸಿಕೊಂಡು ರಿಫೈನರಿ ಪಾಯಿಂಟ್‌ನಲ್ಲಿ ಸಿಗುವಂತಹ ಸೌಲಭ್ಯವನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ತಾವು ಪ್ರಯತ್ನ ಮಾಡಬೇಕು. ಎಲ್ಲಾ ರೀತಿಯಲ್ಲಿ ಸರ್ಕಾರಕ್ಕೆ ನಾನು ಯಶಸ್ಸನ್ನು ಕೋರಿಕೊಂಡು ಮುಂದಿನ ದಿನಗಳಲ್ಲಿ ಜನಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸತಕ್ಕ ಸಂಕಲ್ಪಶಕ್ತಿ ತಮ್ಮಲ್ಲಿರಲಿ, ಪ್ರತಿಯೊಬ್ಬರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯ ಭಾರ ನಡೆಸಿ. ಈ ಸಂದರ್ಭದಲ್ಲಿ 21ನೇ ಶತಮಾನಕ್ಕೆ ತಾವು ಧಾವಿಸುವಾಗ ಕರ್ನಾಟಕದ ಜನತೆ ಅನೇಕ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ಆ ನಿರೀಕ್ಷೆಗಳನ್ನು ತಾವು ಸಾಕಾರಗೊಳಿಸುವ ಶಕ್ತಿಯನ್ನು ಭಗವಂತನು ತಮಗೆ ನೀಡಲಿ ಎಂದು ಹಾರೈಸಿ, ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು: ಈಗ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ವಂದನಾ ನಿರ್ಣಯದ ಮೇಲಿನ ಚರ್ಚೆಯು ಇಲ್ಲಿಗೆ ಮುಕ್ತಾಯವಾಗುತ್ತದೆ. ಈಗ ಸಂವಿಧಾನ ತಿದ್ದುಪಡಿಗೆ ಸಂಬಂಧಿಸಿದ ಹಾಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದು ಇದೆ. ಅದನ್ನು ಈಗ ಮಾನ್ಯ ಸಂಸದೀಯ ಸಚಿವರು ಮಂಡಿಸುತ್ತಾರೆ.